ಆರು ಸಣ್ಣ ಕತೆ

ಮಾಸ್ತಿ ವೆಂಕಟೇಶ
ಐಯಂಗಾರ್

ಆರು ಸಣ್ಣಕತೆ

ಶ್ರೀನಿವಾಸ

ಜೀವನ ಕಾರ್ಯಾಲಯ

ಬೆಂಗಳೂರು

ಮೊದಲನೆಯ ಮುದ್ರಣ ೧೯೫೭

ಬೆಲೆ: ರೂ. ೧-೪-೦

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೨

ವಿಷಯಗಳು

ಮುನ್ನುಡಿ

ಈ ಪುಸ್ತಕದ ಮೊದಲನೆಯ ಕಥೆ ನಲವತ್ತು ವರ್ಷದ ಹಿಂದೆ ಬರೆದು ಹಾಗೆಯೇ ಇಟ್ಟಿದ್ದು ಈಚೆಗೆ ಬೆಂಗಳೂರಿನ ಆಕಾಶವಾಣಿಯಿಂದ ಬಹುಭಾಗ ಓದಿ ಹೇಳಿ ಜೀವನ ಪತ್ರಿಕೆಯಲ್ಲಿ ಪ್ರಕಟಿಸಿದ್ದು. ಕಾಕಲೋಕ ಕಥೆಯೂ ಆಕಾಶವಾಣಿಯಿಂದ ಓದಿದ ಕಥೆ. ನಾಯಿ ಬಾಳು ಹೀಗೆಯೇ ಓದಿದ ಇಂಗ್ಲಿಷ್ ಕಥೆಯ ಕನ್ನಡ ರೂಪ. ಈ ಕಥೆಗಳೂ ಉಳಿದ ಎಲ್ಲ ಕಥೆಗಳೂ ಆಗಾಗ ಜೀವನ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಒತ್ತಟ್ಟು ದೊರೆಯಲೆಂದು ಇವನ್ನು ಸೇರಿಸಿ ಈ ಪುಸ್ತಕವನ್ನು ಪ್ರಕಟಿಸಿದೆ.

ಹೇವಿಳಂಬಿ ಸಂವತ್ಸರ **ಶ್ರೀನಿವಾಸ**

ಆಶ್ವೀಜ ಬಹುಳ ತ್ರಯೋದಶಿ

21-10-1957

ಸಂಜೀವನ ಸ್ವಪ್ನ

೧

ಇದು ನಲವತ್ತು ವರ್ಷದ ಹಿಂದಿನ ಕಥೆ, ರಂಗಪ್ಪನ ಮದುವೆ ದೀಪಾವಳಿಗಳ ಕಥೆಗಳನ್ನು ಹೇಳಿದ ಅಜ್ಜ ಹೊಸಹಳ್ಳಿ ಶಾಮಣ್ಣನವರು ಆ ದಿನಗಳಲ್ಲೇ ಹೇಳಿದ್ದು. ನಮ್ಮೂರ ಸಂಜೀವಯ್ಯನಿಗೆ ಬಿದ್ದ ಒಂದು ಸ್ವಪ್ನದ ಈ ಕಥೆಯನ್ನು, ಈ ಅಜ್ಜನಿಂದ ಹೆಸರನ್ನು ಪಡೆದ ರಂಗಪ್ಪ ರತ್ನಮ್ಮ ಇವರ ಮಗ ಶಾಮಣ್ಣ, ನಾನು, ಈ ದಿನ ಹೇಳುತ್ತಿದ್ದೇನೆ. ಆದರೆ ಕಥೆಯನ್ನು ಅಜ್ಜ ಹೇಳಿದಂತೆಯೇ ಹೇಳುತ್ತಿದೆ.

೨

ಸ್ವಪ್ನದಲ್ಲಿ ಬಹಳ ವಿಧ. ಒಂದೊಂದು ವಿಧವಾದ ಸ್ವಪ್ನಕ್ಕೆ ಒಂದೊಂದು ಫಲವಿದೆಯೆಂದು ಈ ವಿಷಯವನ್ನು ಬಲ್ಲೆವೆಂದು ತಿಳಿದಿರುವ ಜನ ಹೇಳುತ್ತಾರೆ. ರಂಗಪ್ಪನ ಮದುವೆಯ ಸಂದರ್ಭದಲ್ಲಿ ನಾನು-ಶಾಮಣ್ಣ - ಹೇಳಿಕೊಟ್ಟ ನಾಲ್ಕು ಮಾತನ್ನು ಸರಿಯಾಗಿ ಹೇಳಿ ಜಾಣ ಎನ್ನಿಸಿಕೊಂಡ ನಮ್ಮ ಶಾಸ್ತ್ರಿ ಇದಾನಲ್ಲ, ಇವನು, ಯಾರಾದರೂ ಸ್ವಪ್ನದ ಮಾತನ್ನೆತ್ತುತ್ತಲೇ ಅದರ ಫಲವನ್ನು ಕುರಿತು ಉಪ-ನ್ಯಾಸಕ್ಕೆ ಪ್ರಾರಂಭಿಸುತ್ತಾನೆ. ಹಸಿದಹಾಗೆ ಸ್ವಪ್ನವಾದರೆ ಊಟ ಸಿಕ್ಕುತ್ತದೆ. ಊಟ ಮಾಡಿದಹಾಗೆ ಸ್ವಪ್ನವಾದರೆ ಹಸಿವಾಗುತ್ತದೆ. ಹೆಣವನ್ನು ಕಂಡಂತೆ ಸ್ವಪ್ನವಾದರೆ ಒಳ್ಳೆಯದಾಗುತ್ತದೆ. ಮದುವೆ ಮಾಡಿಕೊಂಡಂತೆ ಸ್ವಪ್ನವಾದರೆ ತೊಂದರೆ ಆಗುತ್ತದೆ. (ಈ ಸಮಾಚಾರದಲ್ಲಿ ಮಾತ್ರ ಸ್ವಪ್ನಕ್ಕೂ ನಿ-ಜಕ್ಕೂ ಬಹಳ ವ್ಯತ್ಯಾಸವಿರುವಹಾಗೆ ಕಾಣಲಿಲ್ಲ.) ಸ್ವಪ್ನವಾಯಿತೆಂದು ಸ್ವಪ್ನವಾದರೆ ನಿಜವಾಗುತ್ತದೆ. ಉಪ್ಪು ಎಂದು ಸ್ವಪ್ನವಾದರೆ ಹುಳಿ ಆಗುತ್ತದೆ. ಇವೇ ಮೊದಲಾದವುಗಳು ಸ್ವಪ್ನಗಳ ಫಲಗಳು. ಒಟ್ಟಿನಲ್ಲಿ ಇದರ ಸೂತ್ರ ಇಷ್ಟು. ಸ್ವಪ್ನದಲ್ಲಿ ಏನಾಯಿತು ನಿಜದಲ್ಲಿ ಅದರ ವಿರೋಧ ಆಗುತ್ತದೆ.

ಹೀಗಿರುತ್ತ ನಮ್ಮೂರ ಸಂಜೀವನಿಗೆ ಒಂದು ಸ್ವಪ್ನ ಬಿತ್ತು.

ಈ ಕಥೆ ಕೇಳುವವರಿಗೆ ಸಂಜೀವನ ಪರಿಚಯ ಆಗಿದೆ. ರಂಗಪ್ಪ ಇಂಗ್ಲೀಷು ಕಲಿತು ಬಂದಾಗ ಸಂಜೀವ 'ರಂಗಪ್ಪಾ ಕನ್ನಡದಲ್ಲಿ ಹದಿನಾರು ಅಂತೇವಲ್ಲ ಅದಕ್ಕೆ ಇಂಗ್ಲೀಷು ಹೇಳು' ಎಂದ. ರಂಗಪ್ಪ 'ಸಿಕ್ಸ್ಟೀನ್' ಎಂದ. ಸಂಜೀವ 'ಸಿಕ್ಸ್ಟೀನ್ ಎಂದರೆ ಎಷ್ಟು' ಎಂದ. ರಂಗಪ್ಪ 'ಹದಿನಾರು' ಎಂದ. ಸಂಜೀವ 'ಅಷ್ಟೇನಾ ಅಯ್ಯೋ' ಎಂದ. ರಂಗಪ್ಪ 'ಅದ್ಯಾಕಪ್ಪ ಅಯ್ಯೋ' ಎಂತ ಕೇಳಿದ. ಸಂಜೀವ 'ಕನ್ನಡದಲ್ಲಿ ಹದಿನಾರಾದ್ದು ಇಂಗ್ಲೀಷಿನಲ್ಲೂ ಹದಿನಾರೇ ಆದರೆ ಇಂಗ್ಲೀಷಿನಲ್ಲಿ ಏನು ವಿಶೇಷ? ಅದನ್ನು ಯಾಕೆ ಕಲೀಬೇಕು ಇಷ್ಟು ಕಷ್ಟ ಪಟ್ಟು' ಎಂದ. ಈ ಸ್ವಪ್ನದ ಸಂಜೀವ ಅದೇ ಸಂಜೀವ.

ಸಂಜೀವನ ವಿಷಯವನ್ನು ಈಗ ಮೊದಲಿನಿಂದ ಕೊನೆಯವರೆಗೆ ಹೇಳುವುದಕ್ಕೆ ಅವಕಾಶವಿಲ್ಲ. ಎಂದರೆ ಅವನು ಬುದ್ಧಿವಂತನೇ. ಹದಿನಾರರ ಮಾತು ಕೇಳಿ ಅವನೊಬ್ಬ ಹೆಡ್ಡ ಎಂದುಕೊಳ್ಳಬೇಡಿ. ಅವನದು ನಮ್ಮ ಊರಿನಲ್ಲಿ ಹುಟ್ಟಿ ಬೆಳೆದು ನಮ್ಮೂರಿನಲ್ಲಿ ಪಕ್ವವಾದ ಬುದ್ಧಿ. ನಾವೆಲ್ಲರೂ ಎಷ್ಟು ಮಟ್ಟಿಗೋ ಅವನೂ ಅಷ್ಟರಮಟ್ಟಿಗೆ. ಪೇಟೆಯ ಕೊಳಾಯಿ ನೀರನ್ನು ಕುಡಿದವನಲ್ಲ; ಬುದ್ಧಿ ವಿಪರೀತವಾಗುವುದಕ್ಕೆ ಅವಕಾಶವಿಲ್ಲ. ಒಂದುಸಲ ನಾಲ್ಕು ಜನ ಕುಳಿತಿದ್ದಾಗ ಯಾವುದೋ ಮಾತಿಗೆ ಬಂದು 'ಏನು ಮಾತು ಇದು? ಅಣ್ಣತಮ್ಮಂದಿರಿಗೆ ವಯಸ್ಸಿನಲ್ಲಿ ಆರೇ ತಿಂಗಳು ವ್ಯತ್ಯಾಸ ಉಂಟೆ?' ಎಂದು ಯಾರೋ ಹೇಳಿದ್ದಕ್ಕೆ ಸಂಜೀವ ಅಲ್ಲಿದ್ದವನು 'ಅವಳಿ ಜವಳಿ ಇರಬಹುದಲ್ಲ' ಎಂತ ಹೇಳಿದ. ಸುತ್ತಲೂ ಇದ್ದ ಬುದ್ಧಿವಂತರು ಮೂರು ನಾಲ್ಕು ಜನ ಅದಕ್ಕೆ ಒಪ್ಪಿದರು. ಆಮೇಲೆ ಎಲ್ಲರಿಗೂ ಒಂದೇ ಸಲ ಹಾಗಿರಲಾರದು ಎಂದು ಮನಸ್ಸಿಗೆ ಹೊಳೆದು ಒಬ್ಬರಿಗೊಬ್ಬರು 'ಹ್ಯಾಗಯ್ಯಾ ಹ್ಯಾಗಯ್ಯಾ' ಎಂದರು. ಸಂಜೀವನೂ ನಕ್ಕು 'ನೀವೇನೆನ್ನುತ್ತೀರೋ ನೋಡೋಣ ಎಂತ ಹೇಳಿದೆ' ಎಂದ. ಬುದ್ಧಿವಂತ ನೋಡಿ. ಅದು ತಪ್ಪು ಏಕೆ ಎಂದು ಅವನಿಗೆ ನಿಜವಾಗಿಯೂ ಆಗಲೂ ತಿಳಿಯಲಿಲ್ಲ. ಆದರೂ ಅವನು ತನ್ನ ಮಡ್ಡಿತನವನ್ನು ಬಿಟ್ಟು ಕೊಡಲಿಲ್ಲ. ಆಮೇಲೆ ಬಂದು ನನ್ನನ್ನು ಕೇಳಿದ: ನಾನು ಹೇಳಿದೆ. ಆಗ ತಿಳಿದುಕೊಂಡ. ತನಗೆ ಬುದ್ಧಿಯಿಲ್ಲ ಎನ್ನುವ ಸಮಾಚಾರವನ್ನು ತನಗೆ ಬಹು ಆಪ್ತರಾದ ಒಬ್ಬರಿಗೆ ಮಾತ್ರ ಬಿಟ್ಟು ಕೊಟ್ಟ. ಮಿಕ್ಕವರ ಹತ್ತಿರ ಗಂಭೀರವಾಗಿದ್ದು ಮಾನ ಉಳಿಸಿಕೊಂಡ. ಅದೀಗ ಬುದ್ಧಿ ಎನ್ನುವುದು. ನಮಗೆ ತಿಳಿವಳಿಕೆ ಇಲ್ಲ ಎನ್ನುವುದನ್ನು ಇತರರಿಗೆ ಬಿಟ್ಟು ಕೊಡದೇ ಇರುವುದೇ ಪಾಂಡಿತ್ಯದ ಸಾರ.

ಬುದ್ಧಿಯ ಮಾತಿಗೆ ಬಂತು ಇದನ್ನು ಹೇಳಿದೆ. ಈಗ ಸಂಜೀವ ಎಂಥ ಮನುಷ್ಯ ಎಂತ ಸ್ವಲ್ಪ ತಿಳಿಯಿತಷ್ಟೆ. ಇವನಿಗೆ ಒಂದು ದಿನ ಸ್ವಪ್ನವಾಯಿತು. ಸ್ವಪ್ನವೆಂದಮಾತ್ರಕ್ಕೆ ನೀವು ಚಿಕ್ಕವರು ಏನೇ-ನೊ ಸೊಗಸು ಸೊಗಸಾದ ಸ್ವಪ್ನಗಳನ್ನು ನೆನೆದುಕೊಂಡು ಸಂಜೀವನಿಗೆ ಹಾಗೆ ಸ್ವಪ್ನವಾಯಿತೇನೊ ಎಂದುಕೊಳ್ಳಬೇಡಿ. ಶುಭ್ರವಾದ ಆಕಾಶದಲ್ಲಿ ಒಟ್ಟುಗೂಡಿ ಬರುವ, ಅರಳಿದ ಮಲ್ಲಿಗೆಯ ಹೂವಿ-ನಂತಹ ಮೋಡದ ಹಾಗೆ ಕವಿದಿದ್ದ ನಿದ್ದೆಯ ನಡುವೆ, ಉಷೆಗೆ ಕಂಡ ಪ್ರಿಯನ ಮುಖದಂತೆ ಇವನಿಗೆ ಯಾವುದಾದರೂ ಮುಖ ಕಾಣಲಿಲ್ಲ. ಮುಖವೇನೋ ಕಂಡಿತು. ಆದರೆ ಅದು ಹೀಗೆ ಒಬ್ಬ ಪ್ರಿಯನ ಮುಖ ಅಲ್ಲ. ಒಬ್ಬ ಪ್ರೇಯಸಿಯ ಮುಖವೂ ಅಲ್ಲ. ಬೆಂಗಳೂರಿನ ಕ್ಷೌರಿಕ ನಾಗಪ್ಪನ ಮುಖ. ಅವ ನಿಂದ ಕ್ಷೌರ ಮಾಡಿಸಿಕೊಂಡ ಹಾಗೆ ಸ್ವಪ್ನ. ಇದರಲ್ಲಿರುವ ಸಮಾಚಾರ ಇಷ್ಟೆ. ಇದೊಂದು ಕಥೆಯೇ ಎನ್ನುವ ಹಾಗೆ ಇದ್ದರೆ ಇನ್ನು ಮುಂದಕ್ಕೆ ನೀವು ಇದಕ್ಕೆ ಗಮನಕೊಡುವುದು ಬೇಡ.

ಸಂಜೀವನನ್ನು ಕುರಿತ ಈ ಕಥೆಯು ಈ ಸ್ವಪ್ನದ ಮೊದಲನೆಯ ಎಳೆ ಅವನ ಚಿಕ್ಕಂದಿನಲ್ಲಿ ನಡೆದ ಒಂದು ಸಣ್ಣ ಸಂಗತಿ. ಇವನಿಗೆ ಚೌಲ ಆಗಬೇಕಾದರೆ ತಿರುಪತಿಗೆ ಹೋಗ ಬೇಕಾಯಿತು. ಅಲ್ಲಿ ಅವನ ತಲೆಯನ್ನು ನುಣ್ಣಗೆ ಮಾಡಿದ್ದರು. ಹಿಂದಿರುಗಿ ಬಂದ ಹುಡುಗನನ್ನು ನೋಡಿ ನಮ್ಮ ಗಾರೆ ಉಸ್‌ಮಾನ್ ಸಾಬಿ ‘ಅವ್ವಾ ಈ ಹುಡುಗ ಒಳ್ಳೆ ಮುಸಲ್ಮಾನ್ ಹುಡುಗ ಹಂಗೆ ಐತೆ. ಇದನ್ನ ಕೊಡಿ ನಮ್ಮ ಮನೆಗೆ ಕರಕೊಂಡು ಹೋಗುತೀನಿ’ ಎಂದನಂತೆ. ಸಂಜೀವ ಅವರಮ್ಮನ ಹಿಂದೆ ಅವಿ-ತುಕೊಂಡ. ದೊಡ್ಡವರು ನಕ್ಕರು; ಬೇರೆ ಮಾತಿಗೆ ನಡೆದರು. ಹುಡುಗ ಅದನ್ನು ಮರೆಯಲಿಲ್ಲ. ಉಸ್‌ಮಾನ್ ಇದ್ದಷ್ಟು ದಿನ ಹುಡುಗನಿಗೆ ಅವನನ್ನು ಕಂಡರೆ ಭಯ, ಇವನು ಎಲ್ಲಿ ತನ್ನನ್ನು ಎತ್ತಿ-ಕೊಂಡು ಹೋಗಿ ತಲೆ ಬೋಳಿಸಿ ಮುಸಲ್ಮಾನನನ್ನಾಗಿ ಮಾಡುತಾನೊ ಎಂತ. ಸಂಜೀವ ಈ ಭಯ-ವನ್ನು ಒಂದೊಂದು ಸಲ ಗೆಳೆಯರೊಂದಿಗೆ ಹೇಳಿದ್ದುಂಟು. ಅವರಲ್ಲಿ ಯಾರಾದರೂ ಒಂದೊಂ-ದು ಸಲ ಇವನನ್ನು ಹೆದರಿಸಬೇಕಾದರೆ ‘ಲೋ ಸಂಜೀವ, ಜೋಕೆ, ನಿನ್ನ ಜುಟ್ಟು ಕಿತ್ತು ಹಾಕಿ ನಿನ್ನ ಮುಸಲ್ಮಾನನಾಗಿ ಮಾಡುತ್ತೇನೆ’ ಎನ್ನುವುದುಂಟು. ಇದು ಇವನಿಗೆ ವಯಸ್ಸಾದ ಮೇಲೂ ಒಂದು ಗಿಲಿಯಾಗಿ ಉಳಿಯಿತು.

ಒಂದು ಸಲ ಸಂಜೀವ ಬೆಂಗಳೂರಿಗೆ ಹೋಗಿದ್ದಾಗ ಸ್ವಪ್ನಕ್ಕೆ ಇನ್ನೊಂದು ಎಳೆ ಆಗುವಂತೆ ಬೆಂ-ಗಳೂರಿನ ಕ್ಷೌರದ ಸಮಾಚಾರವನ್ನು ತಿಳಿದುಕೊಂಡು ಬಂದ. ಆ ಸಲ ಇವನು ಉರುಳುಗೆಡ್ಡೆ ತೆ-

ಗೆದುಕೊಂಡು ಹೋಗಿದ್ದ. ಸಾಹುಕಾರರ ಹತ್ತಿರ ವ್ಯಾಪಾರ ಎಲ್ಲ ಸರಿಬಿದ್ದ ಮೇಲೆ ಅವರು 'ನಾಳೆ ದುಡ್ಡು ಕೊಡುತ್ತೇನೆ. ಒಂದು ದಿನ ಇರಿ' ಎಂತ ಹೇಳಿದರಂತೆ. ಮಾರನೆಯ ದಿನ ಅವರ ಮನೆ-ಗೆ ಹೋಗಿದ್ದಾಗ ಇವನಿಗೆ ಬೆಂಗಳೂರಿನ ಕ್ಷೌರದ ರೀತಿ ತಿಳಿಯಿತು. ಬೆಂಗಳೂರಿನ ಕ್ಷೌರ ಎಂದರೆ ಅಂಗಡಿಯಲ್ಲಿ ಮೂರು ಕಾಸಿನ ಸಾಮಾನಿಗೆ ಆರುಕಾಸು ಕೀಳುತ್ತಾರಲ್ಲ ಅದಲ್ಲ. ಆ ಮನೆಯಲ್ಲಿ ಸಾಹುಕಾರನ ತಮ್ಮ ಹಜಾರದಲ್ಲಿ ಕುಳಿತು ಕ್ಷೌರ ಮಾಡಿಸಿಕೊಳ್ಳುತ್ತಿದ್ದನಂತೆ. ಸಂಜೀವ, ಸಾಹುಕಾ-ರರು ಇದಾರೆಯೇ, ಎಂತ ಕೇಳಿದ. ಎಲ್ಲೋ ಹೋಗಿದಾರೆ ಕುಳಿತುಕೊಳ್ಳಿ ಬರುತ್ತಾರೆ ಎಂತ ಉತ್ತರ ಕೊಟ್ಟರು. ಸಂಜೀವ ಅಲ್ಲೇ ಕುಳಿತ. ಕ್ಷೌರಿಕ ನಾಗಪ್ಪನ ಕೆಲಸವನ್ನು ನೋಡುತ್ತ ಇದ್ದ.

ನಾಗಪ್ಪ ಕುಚ್ಚುಮಟ್ಟೆಯಂತೆ ಇದ್ದದ್ದು ಕೂದಲು ಚುಚ್ಚಿದ ಕಟ್ಟಿಗೆ ಒಂದನ್ನು ತೆಗೆದುಕೊಂಡು ಒಂ-ದು ಡಬ್ಬಿಯಲ್ಲಿ ಅದೇನೊ ಬೆಳ್ಳಗಿದ್ದ ಒಂದು ತುಂಡಿನಮೇಲೆ ನೀರಿನ ಜೊತೆಯಲ್ಲಿ ಹಾಕಿ ತಿಕ್ಕಿದ. ಅದು ನೊರೆನೊರೆಯಾಗಿ ಆಯಿತು. ಅದರ ತುಂಬ ಅದನ್ನು ಎತ್ತಿಕೊಂಡು ನಾಗಪ್ಪ ಸಾಹುಕಾರನ ತಮ್ಮನ ಮೂತಿಗೆ ಬಳಿದ. ಸಂಜೀವನಿಗೆ ಇದು ಯಾಕೆ ಎಂದು ತಿಳಿಯಲಿಲ್ಲ. ಅಷ್ಟು ಮಾತಿಗೆ ಬಂ-ದರೆ ಆಗ್ಯೆ ನನಗೂ ತಿಳಿದಿರಲಿಲ್ಲ. ಅವನು ಅಂಥ ಸಮಾಚಾರ ಊರಿನಲ್ಲಿ ನೋಡಿದ್ದದ್ದು ಒಂದೇ. ಉಸ್ಮಾನ್ ಸಾಬಿ ಮಗ ಗಾರೆ ಬಿರಾಂಸಾಬಿ ಗಂಗಾಳದ ತುಂಬ ಸುಣ್ಣ ಮಾಡಿ ಸಂಕ್ರಾಂತಿಯ ಸಮಯದಲ್ಲಿ ಗೋಡೆಗೆ ಪೊರಕೆಯಿಂದ ಬಳಿದದ್ದು. ಇಲ್ಲಿ ಸುಣ್ಣಕ್ಕೆ ಬದಲಾಗಿ ಆ ನೊರೆ ಆಯಿತು; ಗೋಡೆಗೆ ಬದಲು ಮೂತಿ ಆಯಿತು; ಪೊರಕೆಗೆ ಬದಲಾಗಿ ಕೂದಲ ಕಟ್ಟಿಗೆ ಆಯಿತು. ಸಂಜೀವ, 'ಇದೆಂತಹ ಬೆಪ್ಪಲು! ಮೋರೆಗೆ ಯಾಕೋ ಸುಣ್ಣ' ಎಂತ ಯೋಚನೆ ಮಾಡುತ್ತಿರುವ ವೇಳೆಗೆ ನಾಗಪ್ಪ ಕತ್ತಿ ತೆಗೆದ. ಸಂಜೀವನ ಕಣ್ಣಿಗೆ ಅದು ಸುಮಾರು ಒಂದು ಮೊಳ ಇದ್ದಹಾಗೆ ತೋರಿತು. ಮೊ-ದಲು ಈ ಸಮಾಚಾರವನ್ನೆಲ್ಲ ಹೇಳಿದಾಗ ಸಂಜೀವ 'ಒಂದು ಮೊಳ ಕತ್ತಿ' ಎಂತ ಹೇಳಿದ, ನಾವು ನಂಬಲಿಲ್ಲ. ಕತ್ತಿ ತೆಗೆದು ನಾಗಪ್ಪ ತಾನು ಬಳಿದಿದ್ದ ಸುಣ್ಣವನ್ನೆಲ್ಲ ಕ್ಷೌರ ಮಾಡಿಬಿಟ್ಟ. ಹೀಗೆ ಐದಾ-ರು ಸಲ ಮಾಡುವ ಹೊತ್ತಿಗೆ ಮುಖದ ಮೇಲಿನ ಕೂದಲೆಲ್ಲ ಹೋಯಿತು, ತಲೆಯ ಮುಂದುಗಡೆ ಕ್ಷೌರ ಮಾಡಿ ಮುಗಿಯಿತು. ಆಮೇಲೆ ನಾಗಪ್ಪ ಎದ್ದು ನಿಂತುಕೊಂಡ. ಸಂಜೀವನಿಗೆ 'ಇದೇನು ಬಂತು ಕೇಡು, ಕ್ಷೌರ ಮಾಡುವುದಕ್ಕೆ ಎದ್ದು ನಿಲ್ಲವುದೇತಕ್ಕೆ' ಎಂತ ಯೋಚನೆ. ಇವನು ಇದನ್ನು ಮಾಡುತ್ತಿರುವ ಹೊತ್ತಿಗೆ ನಾಗಪ್ಪ ಸಾಹುಕಾರನ ತಮ್ಮನ ತಲೆಯ ಹಿಂದುಗಡೆಗೆ ಸುಣ್ಣ ಬಳಿದದ್ದೇ

ಅಲ್ಲಿ ಕ್ಷೌರ ಮಾಡಿದ, ಮೊದಲಿಂದ ಕೊನೆಯತನಕ ಸುಣ್ಣ ಮಾತ್ರ ಬಹಳ ಖರ್ಚಾಯಿತು. ಸುಣ್ಣ ಬಳಿಯುವುದು, ಅದನ್ನು ಕತ್ತಿಯಿಂದ ಬಳಿದು ಕೈಗೆ ಅಂಟಿಸಿಕೊಳ್ಳುವುದು. ಇದೀಗ ಕ್ಷೌರ ಎಂತ ಆಯಿತು. ಸಂಜೀವ ಎಲ್ಲವನ್ನೂ ನೋಡುತ್ತಲೇ ಇದ್ದ.

ಸಾಹುಕಾರನ ತಮ್ಮ ಎದ್ದು ಹೋದಮೇಲೆ ಸಂಜೀವ ಕ್ಷೌರಿಕನ ಸಂಗಡ ಅವನ ಕೆಲಸದ ವಿಷಯವಾಗಿ ಸ್ವಲ್ಪ ಮಾತಾಡಿದ. ಆ ಸಂಭಾಷಣೆಯ ಸಾರಾಂಶ ಇದು.

'ಅಪ್ಪಾ, ನಿಮ್ಮ ಹೆಸರೇನು?'

'ನಾಗಪ್ಪ'

'ಕ್ಷೌರಿಕರೆ'

'ನಾನು ಇಷ್ಟು ಹೊತ್ತು ಮಾಡಿದ್ದು ಏನಪ್ಪ?'

'ಸರಿ ಸರಿ. ಅವರ ಮೂತಿಗೆ ಸುಣ್ಣ-ಆ ನೊರೆ – ಬಳಿದದ್ದು ಯಾಕೆ?'

'ಚೌರ ಮಾಡುವುದು ಸುಲಬಾಗೋಕೆ'

ಹೀಗೆ ಪ್ರಶ್ನೆ ಮಾಡಿ ಕೊನೆಗೆ ಸಂಜೀವನಿಗೆ ತಿಳಿದದ್ದು ಇಷ್ಟು ಸಂಗತಿ. ಸಾಹುಕಾರರ ತಮ್ಮ ಆ ಕ್ಷೌರಕ್ಕೆ ನಾಲ್ಕು ಆಣೆ ಕೊಟ್ಟರು. (ಸಂಜೀವ ಅದನ್ನು ಕೇಳಿದಾಗ 'ಅಬ್ಬಾ ಎಂದ' ನಾಗಪ್ಪ ನಾಲ್ಕು ಆಣೆ ಕೊಡುವವರಿಗೆ ಮಾತ್ರವೇ ಕ್ಷೌರ ಮಾಡುವುದು ಎಂದು ಶಪಥವೇನನ್ನೂ ಮಾಡಿಕೊಂಡಿರಲಿಲ್ಲ, ಎಂಟು ಆಣೆ ಕೊಡುವವರಿಗೂ ಮಾಡುವುದುಂಟು, ಎರಡು ಆಣೆ ಕೊಡುವವರಿಗೂ ಮಾಡುವುದುಂಟು. ಇನ್ನು ಯಾರೂ ಸಿಕ್ಕದೆ ಇದ್ದರೆ ಒಂದಾಣೆಯವರನ್ನು ಹಿಡಿದು ಕ್ಷೌರ ಮಾಡುವುದೂ ಉಂಟು. ಎಲ್ಲರಿಗೂ ಒಂದೇ ತರಹ ಕ್ಷೌರ ಇಲ್ಲ. ನಾಲ್ಕು ಆಣೆಗೆ ಅಂದು ಸಾಹುಕಾರರ ತಮ್ಮನಿಗೆ ಮಾಡಿದಹಾಗೆಯೇ ಮಾಡುವುದು. ಅದೇ ಸಾಮಾನು, ಅದೇ ಪರಸೀಮೆ ಕತ್ತಿ. ಪರಸೀಮೆ ಕತ್ತಿ ಎಂದರೆ ನಡುವೆ ಹಳ್ಳ, ಹರಿತ ಸ್ವಲ್ಪ ಕಮ್ಮಿ, ಮುಖದ ಕೂದಲು ಸರಿಯಾಗಿ ಹೋಗುವುದಿಲ್ಲ. ಮೊಟಕು

ಕೂದಲು ಬಿಸಿಲುಕಾಲದ ಹುಲ್ಲು ಬೇರಿನಹಾಗೆ ನಿಲ್ಲುವುದು. ನಿಂತರೆ ದೊಡ್ಡ ಮನುಷ್ಯರಾದವರು ಅಡ್ಡಿ ಮಾಡುವುದಿಲ್ಲ. ಅವರ ಇಷ್ಟದ ಪ್ರಕಾರವೇ ಸ್ವಲ್ಪ ಬುಡಬಿಟ್ಟು ಕ್ಷೌರ ಮಾಡುವುದು.

ಬೆಂಗಳೂರಿನಲ್ಲಿ ಯಾರಾದರೂ ದೊಡ್ಡ ಮನುಷ್ಯರು ಹೌದೊ ಅಲ್ಲವೊ ಎಂತ ತಿಳಿಯ ಬೇಕಾದರೆ ಅವರು ಕ್ಷೌರ ಮಾಡಿಸಿಕೊಂಡ ದಿನ ಅವರ ತಲೆಯನ್ನು ನೋಡಿದರೆ ಸಾಕು. ಇದನ್ನು ಹೇಗೆ ಮಾಡುವುದು ಎಂತೀರಾ? ಅವರು ಕ್ಷೌರ ಮಾಡಿಸಿಕೊಳ್ಳುವ ದಿನ ನೋಡಿಕೊಂಡಿದ್ದು ಅವರು ಮನೆಯಿಂದ ಹೊರಗೆ ಬಂದಾಗ, ಹತ್ತಿರ ಹೋಗಿ "ಸ್ವಾಮಿ ನಿಮ್ಮ ರುಮಾಲನ್ನು ತೆಗೆಯಿರಿ" ಎಂದು ಹೇಳುವುದು. ಅವರು ತೆಗೆದರೆ ತಲೆಯನ್ನು ನೋಡುವುದು. ಇಲ್ಲದೆ ಇದ್ದರೆ? ಏನೂ ಮಾಡುವುದಕ್ಕಾಗುವುದಿಲ್ಲ.

ಅಂತೂ ದೊಡ್ಡ ಮನುಷ್ಯರಾದವರು ಕ್ಷೌರ ಮಾಡಿಸಿಕೊಳ್ಳುವಾಗ ತಲೆಯಲ್ಲಿ ಕೂದಲು ನುಣ್ಣಗೆ ಹೋಗಿರಕೂಡದು. ಹೆಚ್ಚು ದುಡ್ಡು ಕೊಟ್ಟ ಹಾಗೆಲ್ಲ ಮುಖದಮೇಲೂ ತಲೆಯಮೇಲೂ ಕೂಳೆ ಹೆಚ್ಚಾಗಿ ಬಿಡುವುದು ಪದ್ಧತಿ. ನಾಲ್ಕು ಆಣೆಯವರಿಗಿಂತ ಎಂಟು ಆಣೆಯವರಿಗೆ ಹೆಚ್ಚು. ಒಂದು ರೂಪಾಯಿ ಕೊಟ್ಟರೆ ಸಾಬೂನು ಹಚ್ಚಿ ಸುಮ್ಮನೆ ಸಾಬೂನನ್ನು ಮಾತ್ರ ತೆಗೆಯುವುದು, ಕೂದಲನ್ನು ತೆಗೆಯಕೂಡದು, ಎಂತ ನಾಗಪ್ಪನ ಸ್ನೇಹಿತ ಒಬ್ಬ ಅವನಿಗೆ ಹೇಳಿದ್ದನಂತೆ, ಆದರೆ ನಾಗಪ್ಪನಿಗೆ ಒಂದು ರೂಪಾಯಿನ ತಲೆ ಸಿಕ್ಕಿರಲಿಲ್ಲ. ಎಂಟಾಣೆಯವರೂ ಕಮ್ಮಿ. ಅವರಿಗೂ ಹೀಗೆಯೇ ಸಾಬೂನು ಬಳಿಯುವುದು. ಎರಡಾಣೆಯವರಿಗೆ ಬೀಳು ಸಾಬೂನು. ಒಂದಾಣೆಯವರಿಗೆ ಬರಿಯ ನೀರು. ಒಂದಾಣೆಯವರಿಗೆ ನಿಂತುಕೊಳ್ಳುವುದಿಲ್ಲ. ಎರಡಾಣೆಯವರಿಗೆ ನಿಲ್ಲುವುದೂ ಬಿಡುವುದೂ ಆಸಾಮಿಯ ಮುಖ ನೋಡಿ. ಕೊಡುವುದು ಎರಡಾಣೆಯೇ ಆದರೂ ಜರುಬು ಹೆಚ್ಚು ಎನ್ನುವ ಮನುಷ್ಯನಾದರೆ ಅರ್ಧ ನಿಂತುಕೊಳ್ಳುವುದು ಮಾಡುವುದು. ಜರುಬು ಹೌದೊ ಅಲ್ಲವೊ ಎನ್ನುವುದು ತಿಳಿಯುವುದು ಹೇಗೆಂದರೆ, ಮುಂದುಗಡೆ ಕ್ಷೌರ ಮುಗಿದ ಮೇಲೆ ತಲೆಯನ್ನು ಬಗ್ಗಿಸುವುದಕ್ಕೆ ಕೈಯಿಂದ ಸ್ವಲ್ಪ ಅವುಕುವುದು: ಬಗ್ಗಿಸಿದನೇ ಒಳ್ಳೆಯದಾಯಿತು; ಚೆನ್ನಾಗಿ ಬಗ್ಗಿಸಿ ಕೂತುಕೊಂಡೇ ಹಿಂದುಗಡೆಯ ಕ್ಷೌರಮಾಡುವುದು. ತಲೆಯನ್ನು ಬಗ್ಗಿಸದೆ ತಡೆದರೆ, ತಾನೇ ಏಳುವುದು, ಎದ್ದು ಹಿಂದುಗಡೆ ಕ್ಷೌರಮಾಡುವುದು.

ಕೆಲವು ದೊಡ್ಡ ಮನುಷ್ಯರು ಕತ್ತಿಯ ಅಲಗಿನಿಂದ ಕ್ಷೌರ ಮಾಡಿದರೆ ತಾವು ಬಹಳ ನಯದ ಮನುಷ್ಯರು ಎಂದು ತೋರಿಸಿಕೊಳ್ಳುವುದಕ್ಕಾಗಿ ಸುಮ್ಮ ಸುಮ್ಮನೆಯೇ '...ಹು ಹು.' ಎಂದು ಶಬ್ದ-ಮಾಡುವರು. ಅಂತಹವರಿಗೆ ಕತ್ತಿಯ ಹಿಂದುಗಡೆಯಿಂದ ಕ್ಷೌರಮಾಡುವುದುಂಟು. ಕೂದಲೇ-ನೋ ಹೋಗುವುದಿಲ್ಲ; ಆದರೆ ನೋಯದ ಹಾಗೆ ಇದ್ದರೆ ಆಯಿತು, ದೊಡ್ಡ ಮನುಷ್ಯರ ಕ್ಷೌರ. ಹು-ಹು ಎಂದು ನಯವಂತಿಕೆ ಬೂಟ ಮಾಡಿದವರೂ ಒಂದೊಂದು ಸಲ 'ಏನಯ್ಯಾ ಇದು? ಕ್ಷೌರ ಮಾಡಿದರೆ ಕೂದಲು ಸ್ವಲ್ಪವಾದರೂ ಹೋಗಲಿಲ್ಲ' ಎಂದು ತಂಟೆ ಮಾಡುತ್ತಾರೆ. ಕ್ಷೌರಮಾಡಿದರೆ ಕೂದಲು ಹೋಗಬೇಕಾದ್ದಿಲ್ಲ, ಸಾಬೂನು ಹೋದರೆ ಸರಿ, ಎಂದು ಅವರಿಗೆ ತಿಳಿವಳಿಕೆ ಹೇಳಬೇಕು. ಒಪ್ಪಲಿಲ್ಲ, ಆಗ "ಸಾಹೇಬ ಜನಗಳು ಕ್ಷೌರ ಮಾಡಿಸಿಕೊಳ್ಳುವುದು ಹೀಗೆಯೇ" ಎಂದು ಹೇಳಿದರೆ "ಹಾಗೆಯೇ ಅದು. ಹಾಗಾದರೆ ಇರಲಿ," ಎಂದು ಅವರು ಸುಮ್ಮನಾಗುತ್ತಾರೆ.

ಸಾಹೇಬ ಜನರ ಈ ಕ್ಷೌರದ ಹೆಸರು ಕರಾಪು. ನಾಗಪ್ಪ ಸಾಹೇಬ ಜನಗಳಿಗೂ ಕ್ಷೌರಮಾಡು-ವುದು ಉಂಟು. ಅವರ ಮುಖದ ಕೂದಲೂ ನಮ್ಮ ಮುಖದ ಕೂದಲಿನ ಹಾಗೆಯೇ ಇರುವುದು: ಬಣ್ಣ ಸ್ವಲ್ಪ ವ್ಯತ್ಯಾಸ. ಸಾಹೇಬ ಜನಗಳ ಹತ್ತಿರ ಸಾರಾಯ ವಾಸನೆ. ಅವರಿಗೆ ಸ್ವಲ್ಪವೂ ನೋಯ-ಕೂಡದು. ನೊಂದರೆ ಪೂರಾ ಪರಂಗಿಯವರು 'ಡ್ಯಾಂ ಬಿಗಾರ್', ಅರ್ಧ ಪರಂಗಿಯವರು 'ಡ್ಯಾಂ ನಿಗಾರ್', ಎನ್ನುವರಂತೆ. ನಾಗಪ್ಪನಿಗೆ 'ಡ್ಯಾಂ ಬಿಗಾರ್, ಡ್ಯಾಂ ನಿಗಾರ್' ಪದಗಳ ಅರ್ಥ ತಿಳಿಯದು. ಸುಮಾರಾಗಿ ಅವು ಒಳ್ಳೆಯ ಮಾತಲ್ಲ ಎಂದು ನಾಗಪ್ಪನ ಅಭಿಪ್ರಾಯ.

ಸಂಜೀವ ನಾಗಪ್ಪನ ಹತ್ತಿರ ಇದನ್ನೆಲ್ಲ ತಿಳಿದುಕೊಂಡು ಊರಿಗೆ ಹಿಂದಕ್ಕೆ ಬಂದ ಬಹಳದಿನ ಅದೇ ಮಾತೇ, ಬೆಂಗಳೂರಿನ ಕ್ಷೌರದ ಹುಚ್ಚು ಬಹಳ ಹಿಡಿಯಿತು. ಈ ಹುಚ್ಚು ಇವನ ಸ್ವಪ್ನದ ಎರ-ಡನೆಯ ಎಳೆ.

ನಮ್ಮೂರಲ್ಲಿ ಕ್ಷೌರ ಮಾಡಿಸಿಕೊಳ್ಳುವುದು ಎಂದರೆ ಸ್ವಲ್ಪ ಕಷ್ಟ. ದಿನ, ವಾರ, ನಕ್ಷತ್ರದ ಕಾಯಿದೆ ಒಂದು ಕಾರಣ. ಒಳ್ಳೆಯ ದಿನ ಸಿಕ್ಕಿದರೂ ಕ್ಷೌರಿಕ ಸಿಕ್ಕದ್ದು ಒಂದು ಕಾರಣ. ಅಂತೂ ಯಾರಾದರೂ ನಮ್ಮ ಊರಿಗೆ ಬಂದು ನೋಡಿದರೆ ಎಷ್ಟೊಂದು ಜನಕ್ಕೆ ಪುತ್ರೋತ್ಸವ ಕಾದಿದೆ ಎಂದುಕೊಳ್ಳುವರು. ಎಲ್ಲರೂ ದೀಕ್ಷೆ ಬೆಳಸಿದ ಹಾಗಿರುವುದು. ಪಾಡ್ಯಮಿ ದಿನ ಆಗಬಹುದು; ಆದರೆ ಮಂಗಳವಾರ.

ಬಿದಿಗೆ ದಿನ ಅಣ್ಣ ಮಾಡಿಸಿಕೊಳ್ಳುವನು. ತದಿಗೆ ದಿನ ಗುರುವಾರ: ಅಣ್ಣನಿಗೆ ಕೆಟ್ಟದ್ದು. ಶುಕ್ರವಾರ ಹೆಂಡತಿಗೆ ಕೆಟ್ಟದ್ದು, ಶನಿವಾರ ಕೂಡದು. ಭಾನುವಾರ ಷಷ್ಠಿ, ಸೋಮವಾರ ಸಪ್ತಮಿ ಆಗಬೇಕಲ್ಲ; ಇಲ್ಲ ಅಷ್ಟಮಿ. ಮಂಗಳವಾರ ಅಂತೂ ಕೂಡದಲ್ಲ. ಬುಧವಾರ ಏಕಾದಶಿ, ಗುರುವಾರ ಅಮಾವಾ-ಸ್ಯೆ, ಶುಕ್ರವಾರ ಪೌರ್ಣಮಿ, ಹೀಗೂ ಹಾಗೂ ಕ್ಷೌರ ಮಾಡಿಸಿಕೊಳ್ಳುವುದಕ್ಕೆ ಸರಿಯಾಗಿರುವ ದಿನವೇ ಇಲ್ಲ. ಹೀಗೆ ಕ್ಷೌರಕ್ಕೆ ದಿನ ಸಿಕ್ಕುವುದು ಕಷ್ಟ ಎನ್ನುವುದರಿಂದ ನಮ್ಮೂರಲ್ಲಿ ಗಂಡ ಹೆಂಡಿರ ಒಂದು ಹಾಸ್ಯ ಸಂಪ್ರದಾಯವಾಗಿ ಬಂದಿದೆ. 'ಮುನಿಯಪ್ಪ ಬಂದಿದಾನಂತಲ್ಲ, ಕ್ಷೌರ ಮಾಡಿಸಿಕೊಳ್ಳಬಾರ-ದೆ' ಎಂತ ಹೆಂಡತಿ ಹೇಳಿದರೆ ಸರಸಿಯಾದ ಗಂಡ, ತನಗೆ ದಿನ ಚೆನ್ನಾಗಿಲ್ಲ ಎಂದು ಹೇಳಿ ಕ್ಷಣಬಿಟ್ಟು 'ನೀನು ಸ್ವಲ್ಪ ಬಸುರಾದರೆ ತಿಂಗಳದಿನ ಈ ಕಷ್ಟ ತಪ್ಪುತ್ತೆ' ಎನ್ನಬೇಕು. ಹೆಂಡತಿಯಾದವಳು ಅವಳ ವಯಸ್ಸು, ಸ್ವಭಾವ, ಆ ಕ್ಷಣದ ಮನಸ್ಸು, ಇದರ ಪ್ರಕಾರ 'ಇಷ್ಟು ವಯಸ್ಸಾದರೂ ನಿಮಗೆ ಈ ಭಂಡ ಮಾತು ಬಿಡಲಿಲ್ಲ' ಎಂತಲೊ 'ನೀವು ಸ್ವಲ್ಪ ಹೆರೋದಾದರೆ ನಾನು ಸ್ವಲ್ಪ ಬಸುರಾಗುತ್ತೇನೆ' ಎಂತ-ಲೋ 'ಒಳ್ಳೆ ಮಾತಾಡಿದಿರಿ, ಹೆಂಡತಿ ಬಸುರಾದಳು ಅಂತ ಗಂಡ ದೀಕ್ಷೆ ಬೆಳಸುವುದುಂಟಲ್ಲ, ಗಂಡ ದೀಕ್ಷೆ ಬೆಳೆಸಲಿ ಎಂತ ಹೆಂಡತಿ ಬಸುರಾಗುವುದುಂಟೆ?' ಎನ್ನಬೇಕು.

ಹಾಗೂ ಎಂದಾದರೂ ಒಂದುದಿನ ಸರಿಯಾಗಿದ್ದರೆ ಕ್ಷೌರಿಕನನ್ನು ಸಂಪಾದಿಸುವುದು ಕಷ್ಟ. ನಮ್ಮೂ-ರಿಗೆ ಕ್ಷೌರಿಕರು ಮುನಿಯಪ್ಪ, ಗಿರಿಯ, ಇಬ್ಬರು. ನಮ್ಮೂರಲ್ಲಿ ಇವರಿಗೆ ದುಡ್ಡು ಕೊಡುವವರಿಲ್ಲ. ಏನಿದ್ದರೂ ವರ್ಷಕ್ಕೆ ಒಂದು ಸಲ ಬೆಳೆಯ ಅಳತೆಯ ಕಾಲದಲ್ಲಿ ನೌಕರರಿಗೆ ವರ್ಷ ವರ್ಷದ ಆಯ-ವನ್ನು ಕೊಟ್ಟು ಬಿಡುವರು. ಮುನಿಯಪ್ಪನ ಅಪ್ಪನಕಾಲ ಸರಿಯಾಗಿಯೇ ಇತ್ತು. ಯಾವಾಗಲೂ ಹೀಗೆಯೇ. ಆ ಕಾಲ ಒಳ್ಳೆಯದು ಈ ಕಾಲ ಕೆಟ್ಟದ್ದು. ಮೇಲಾಗಿ ಮುನಿಯಪ್ಪ ಅಪ್ಪ ಆಗಿನ ಕಾಲಕ್ಕೆ ಸರಿಯಾದ ಮನುಷ್ಯ. ಅಲ್ಲದೆ ಧಾನ್ಯ ಅಷ್ಟು ಬೆಲೆಯಾಗಿರಲಿಲ್ಲ. ಧರ್ಮ ಚೆನ್ನಾಗಿತ್ತು, ಬೆಳೆ ಬೆಳೆ-ಯುತಿತ್ತು. ಕೊಡುವುದನ್ನು ಚೆನ್ನಾಗಿ ಕೊಡುತ್ತಿದ್ದರು. ಆಮೇಲೆ ಧರ್ಮ ಕಡಮೆಯಾಯಿತು: ಧಾನ್ಯ ಬೆಳೆಯುವುದು ಕಡಿಮೆಯಾಯಿತು. ಬೆಳೆ ಕಡಮೆಯಾಯಿತು: ಕೊಡುವುದು ಕಡಿಮೆಯಾಯಿತು. ಕೊಡುವುದು ಕಡಿಮೆಯಾಯಿತು: ಧರ್ಮ ಕಡಮೆಯಾಯಿತು. ಅಂತೂ ಧರ್ಮ ಕಡಿಮೆಯಾದ್ದ-ರಿಂದ ಕೊಡುವುದು ಕಮ್ಮಿ, ಕೊಡುವುದು ಕಮ್ಮಿ, ಆದ್ದರಿಂದ ಧರ್ಮ ಕಮ್ಮಿ, ಹೀಗೆ ವಿಷಚಕ್ರ ಸುತ್ತಿ-ಕೊಂಡು ಈಗ ದರಿದ್ರಕ್ಕೆ ಕೊನೆ ಮೊದಲಿಲ್ಲದೆ ಆಗಿದೆ.

ಈ ಎಲ್ಲ ಮಾತಿನ ತೇರೀಜು ಏನು ಎಂದರೆ ಮುನಿಯಪ್ಪನಿಗೆ ನಮ್ಮ ಜನ ಕೊಡುವ ಧಾನ್ಯ ಎಲ್ಲಿ-ಗೂ ಸಾಲದು. ಹೀಗಾಗಿ ಒಂದು ದಿನ ಚೆನ್ನಾಗಿದೆ ಎಂದು ತಿಳಿದಾಗ ಜನ ಒಬ್ಬರಲ್ಲದಿದ್ದರೊಬ್ಬರು ಮೊದಲೇ ಹೋಗಿ ಅವನಿಗೆ ಹೇಳಬೇಕು. ಅವನು, 'ನೀನು ನನಗೆ ಕೊಟ್ಟಿರುವುದಕ್ಕೆ ನಾನು ಬೆಳಗ್ಗೆ ಎದ್ದು ಬಂದು ನಿನ್ನ ಗಡ್ಡ ಕೆರೆಯುತ್ತ ಕುಳಿತುಕೊಳ್ಳಬೇಕಲ್ಲವೆ?' ಎನ್ನುವನು. 'ಹಾಗಂದರೆ ಹೇಗಪ್ಪ! ನಾವು ನಂಬಿಕೊಂಡಿರುವುದು ನಿನ್ನನ್ನು. ನೀನು ನಮ್ಮನ್ನು ಕೈಬಿಟ್ಟರೆ ನಮಗೆ ಯಾರು' ಎಂತ ಇವರು ಹೇಳಬೇಕು. 'ಕೈ ಬಿಡದೆ ಏನು ನೀ ನನ್ನ ಕೈ ಬಿಡಲಿಲ್ಲವೆ? ಕಳದಲ್ಲಿ ನಾ ಬಂದಾಗ ಕೈ ಬಿಡುವುದು ಯಾಕೆ ಜ್ಞಾಪಕ ಬರುವುದಿಲ್ಲ?' ಎಂತ ಅವನು ಕೇಳಬೇಕು.

ಗೇಣುದ್ದದ ಗರಿಕೆ, ಮಾರುದ್ದ ಬೇರು. ಕಳದಲ್ಲಿ ಆಗಿರುವುದು ಏನು? ರಾಗಿ ಹತ್ತು ಖಂಡುಗ ಬೆಳೆಯುವ ಕಡೆ ನಾಲ್ಕು ಖಂಡಗ ಬೆಳೆದಿರುತ್ತದೆ. ಬೆಳೆಯನ್ನು ಭಾಗಮಾಡಿ ಈ ಕಡೆ ಒಂದೂ ಮು-ಕ್ಕಾಲು ಖಂಡುಗ ಆ ಕಡೆ ಒಂದೂ ಮುಕ್ಕಾಲು ಖಂಡುಗ, ಮಿಕ್ಕದ್ದರಲ್ಲಿ ಸ್ವಲ್ಪ ಬೀಜಕ್ಕೆ ಎಂತ ಬಿಟ್ಟು ಮಿಕ್ಕದ್ದರಲ್ಲಿ ದೇವರಿಗೆ, ದಿಂಡರಿಗೆ, ಬೇಡುವವರಿಗೆ, ನೌಕರ ಮಾನೇರಿಗೆ ಇಡಬೇಕು. ದೇವರು ಬಂದಿಲ್ಲವಲ್ಲ, ಅವನ ಪಾಲು ಇಲ್ಲದಿದ್ದರೆ ಹೋಗಲಿ, ಎನ್ನುವ ಹಾಗಿಲ್ಲ. ಪೂಜಾರಿ ಬಂದಿದ್ದಾನೆ: ದೇವರಿಗೆ ಕಮ್ಮಿ ಮಾಡಬೇಡಿ ಎಂದು ಬಹಳ ಶ್ರದ್ಧೆಯಿಂದ ಬುದ್ಧಿ ಹೇಳುತ್ತಾನೆ. ದಿಂಡರಿಗೆ ಇಲ್ಲದಿ-ದ್ದರೆ ಹೋಗಲಿ; ಬೇಡುವವರಿಗೆ ಕೊಡಲೇ ಬೇಕು. ಕೊಡದೆ ಇದ್ದರೆ ಬೈದುಕೊಂಡು ಹೋಗುವರು. ಇದು ಕೊಳಗದಲ್ಲಿ ಉಳಿದ ಮೂರು ಕೊಳಗದಲ್ಲಿ ನೌಕರರಿಗೆ ಏನು ಕೊಡುವುದು? ಮುನಿಯಪ್ಪ ಬಂದು 'ಏನಪ್ಪಾ ಎಷ್ಟಾಯಿತು?' ಎಂತ ಕೇಳುವನು. ರೈತನಿಗೆ ಕಣ್ಣು ಕೆಂಪು. ನೆಲದವನಿಗೆ ಇನ್ನೂ ಕೆಂಪು. ಹೊಲ ಇವನದು ಎನ್ನೋ ಹಾಗೆ ಬೆಳೆ ಎಷ್ಟಾಯಿತು ಅಂತಾನೆ ಎಂತ. ಮುನಿಯಪ್ಪನ ಮಾತಿಗೆ ಉತ್ತರ ಇಲ್ಲ. 'ಎಲ್ಲಿ ಹಾಕಪ್ಪ' ಎಂದು ಮುನಿಯಪ್ಪ ಚೀಲವನ್ನು ಹಿಡಿಯುವನು. ರೈತ ಮೊರ ರಾಗಿಯನ್ನು ಎತ್ತಿ ಅದರಲ್ಲಿ ಹಾಕುವನು. ಮೊರ ರಾಗಿ ಎಂದರೆ ಮೊರದ ತುಂಬ ರಾಗಿ ಅಲ್ಲ. ಮೊರವನ್ನು ಕೆಳಗೆ ಇಟ್ಟು, ರೈತ ರಾಗಿಯ ರಾಶಿಯನ್ನು ಮಕ್ಕಳನ್ನು ಮೃದುವಾಗಿ ತಟ್ಟಿ ಸವರುವಂತೆ ತಟ್ಟಿ ಸವರಿ ಮೇಲಕ್ಕೆ ಹಾಕಿ ಗುಪ್ಪೆಮಾಡುವನು. ಅವನಿಗೆ ತಾನು ಬೆಳೆದ ರಾಗಿ ಎಂದು ಅದರ ಮೇ-ಲೆ ಪ್ರೀತಿ: ತಾನು ಹೆತ್ತು ಸಾಕಿದ ಮಕ್ಕಳಮೇಲೆ ಹೇಗೆಯೋ ಹಾಗೆಯೆ. ಆದರೆ ರಾಗಿಗೂ ಮಕ್ಕಳಿಗೂ ಒಂದು ವ್ಯತ್ಯಾಸ. ಮಕ್ಕಳ ಮೇಲೆ ಅವುಗಳನ್ನು ಹೆತ್ತು ಸಾಕಿದವರಿಗೆ ಮಾತ್ರ ಪ್ರೀತಿ. ರಾಗಿಯ ಮೇಲೆ

ಅದನ್ನು ಬೆಳೆದವನಿಗೆ ಹೇಗೋ ಹಾಗೆ ಬೆಳೆಯದವನಿಗೂ ಪ್ರೀತಿ, ಮುನಿಯಪ್ಪನಿಗೆ ಮೊರ ರಾಗಿ ಸಾಲದು. ರಾಗಿಯ ಮೇಲಿನ ಅವನ ವಿಶ್ವಾಸ ಅಷ್ಟರಿಂದ ತೃಪ್ತಿ ಹೊಂದತಕ್ಕದ್ದಲ್ಲ. ಅವನು 'ಏನಪ್ಪ ಮೊರ ಕೆಳಗೆ ಇಟ್ಟು ಬಿಟ್ಟೆ,' ಎನ್ನುವನು. ಏನಯ್ಯ ಇನ್ನೂ ಬೇಕೆ ಎಂದು ರೈತ ಕೇಳುವನು. 'ಇರಲಿ ಹಾಕು, ನೀನು ಧಣಿ, ನೆಲ ಉತ್ತು ಬೆಳೆಯುವವನು. ಕೊಡದೇ ಇದ್ದರೆ ನನ್ನ ಪಾಡೇನು' ಎಂದು ಮುನಿಯಪ್ಪಹೇಳುವನು. 'ಅದೆಲ್ಲಾ ಹಾಗಿರಲಿ ಬಿಡಯ್ಯ, ಬರುತ್ತ ಬರುತ್ತ ಬೆಳೆ ಕಡಮೆಯಾಗುತ್ತಿದೆ. ನೀವು ಕೇಳುವುದೇನೋ ಹೆಚ್ಚಾಗಿದೆ' ಎಂದು ರೈತನ ಉತ್ತರ. ಹಾಗಾಗಿ ಹೀಗಾಗಿ ಮುನಿಯಪ್ಪನಿಗೆ ಇನ್ನೊಂದು ಮೊರ ರಾಗಿ ಬರುವವೇಳೆಗೆ ಕೃತಾವಸ್ಥೆ. ಇದೆಲ್ಲಾ ಮುನಿಯಪ್ಪನಿಗೆ ಜ್ಞಾಪಕ. ಕ್ಷೌರಕ್ಕೆ ಕರೆಯುವುದಕ್ಕೆ ಬಂದಾಗ 'ಕಳದಲ್ಲಿ ಈ ನಯದ ಮಾತೆಲ್ಲ ಎಲ್ಲಿ ಹೋಗುತ್ತದೆ' ಎನ್ನುವುದರ ಅರ್ಥ-ದಲ್ಲಿ ಈ ನೆನಪೆಲ್ಲ ಸೇರಿರುತ್ತದೆ. ಕರೆಯಹೋಗಿರುವವರಿಗೂ ಅದರ ನೆನಪು ಉಂಟು. ಆದ್ದರಿಂದ ಇವರು ಅವನಿಗೆ ಮೆಲ್ಲನೆ 'ಇರಲಿ ಬಾ ಅಥವಾ ಅಷ್ಟಕ್ಕೂ ನೀನು ಬಂದು ನನ್ನನ್ನು ಒಂದಿಷ್ಟು ರಾಗಿ ಕೊಡು ಅಂದರೆ ಕಣವೇ ಆಗಬೇಕೆ, ಈಗ ಇಲ್ಲ ಎಂತ ನಾನು ಹೇಳುತ್ತೇನೆಯೆ? ಬಾ' ಎಂದು ಹೇಳಿ ಬರುವರು. ಅವನು ಆ ದಿನ ಬರುತ್ತಾನೋ ಇಲ್ಲವೋ ಸಂದೇಹ. ಅವನು ಅಂದು ಬಾರದೆ ಇದ್ದರೆ, ಇನ್ನು ಒಂದು ತಿಂಗಳೋ ಎರಡು ತಿಂಗಳೋ ಕ್ಷೌರಕ್ಕೆ ದಿನ ಇಲ್ಲ.

ಹಾಗೂ ಅವನು ಆ ದಿನ ಬಂದ ಎಂತ ಇಟ್ಟುಕೊಳ್ಳಿ. ಒಬ್ಬೊಬ್ಬನ ಮನೆಗೂ ತಾನೇ ಹೋ-ಗುವಂತಿಲ್ಲ. ಮಾಡಿಸಿಕೊಳ್ಳುವರಲ್ಲಿ ದೊಡ್ಡ ಮನುಷ್ಯರು ಕೆಲವರು, ಚಿಕ್ಕ ಮನುಷ್ಯರು ಕೆಲವರು. ಚಿಕ್ಕ ಮನುಷ್ಯರೆಲ್ಲಾ ಚಾವಡಿಯ ಬಳಿಯೇ ಬಂದು ಕ್ಷೌರ ಮಾಡಿಸಿಕೊಳ್ಳುವರು. ಅಂದರೆ ಅದು ಮಂಗಮೋರೆ ಸಾಹೇಬ ಕೋಲಾರದಲ್ಲಿ ನಡಸೋ ಸೆಷನ್ ಕೋರ್ಟಿನ ಹಾಗೆ. ಮುನಿಯಪ್ಪ ಅಲ್ಲಿ ಬಂದು ಕೂತರೆ ಊರಿನಲ್ಲಿ ಬಹು ಸಂಭ್ರಮ. ಯಾಕೆ? ಹೋಗಿ ಕರೆದವ ಒಬ್ಬನಾದರೆ ಮಾಡಿಸಿ-ಕೊಳ್ಳುವವರು ಇಪ್ಪತ್ತು ಜನ. ಎಲ್ಲರೂ ಬಂದು ಚಾವಡಿ ಕಲ್ಲಿನಮೇಲೆ ಕುಳಿತು ಏನಾದರೂ ಮಾತ-ನಾಡುತ್ತ ಮುನಿಯಪ್ಪನ ಮುಂದೆ ವಿಚಾರಣೆಯಲ್ಲಿರುವವನ ಕ್ಷೌರ ಎಷ್ಟು ಹೊತ್ತಿಗೆ ಮುಗಿಯುತ್ತದೆ ಎಂತ ಎದುರು ನೋಡುತ್ತಿರುವರು. ಕ್ಷೌರ ಮುಗಿದ ಹಾಗೆಲ್ಲ, ಅವರವರ ಯೋಗ್ಯತೆಗೆ ತಕ್ಕ ಹಾಗೆ ಮುನಿಯಪ್ಪ 'ಏಳತ್ತ' 'ತೆಗೆಯತ್ತ' 'ಏಳಪ್ಪೋ' 'ಆಯ್ತಲ್ಲ', 'ಎಲ್ಲಿ ಸರಿ' ಎನ್ನುವನು. ಯಾರಾದರೂ ಒಬ್ಬ 'ಏ, ಇಲ್ಲಿನೋಡು, ಇಲ್ಲಿ ಕೂದಲು ಬಿಟ್ಟು ಬಿಟ್ಟಿದೀಯೆ' ಎಂದರೆ ಇವನು 'ಎಲಾಪ್ಪ ಸಾಕು ಬಿಡು

ನಿನಗೆ ಯಾರು ಹೆಣ್ಣು ಕೊಡಬೇಕಾಗಿದೆ' ಎಂತ ಕತ್ತಿಯಿಂದ ಹಾಗೆನ್ನುವನು. ಹೀಗೆ ಒಬ್ಬರಾಗುತ್ತ ಒಬ್ಬರು ಅವನ ಸೆಷನ್ ಮುಂದೆ ಹಾಯಬೇಕು. ನಮ್ಮ ಒಕ್ಕಲು ಮಕ್ಕಳಾದರೆ ಪರವಾಯಿಲ್ಲ. ಬಿರಾಂ ಸಾಬಿ ಆದರೆ ಸಾವಕಾಶ (ಬಿರಾಂ ಸಾಬಿ ಗಾರೆ ಉಸ್‌ಮಾನ್ ಸಾಬಿಯ ಮಗ). ಮಿಕ್ಕವರಾದರೆ ಮುನಿಯಪ್ಪನ ಕತ್ತಿ ಅರ್ಧ ತಲೆ ಮಾತ್ರ ಪ್ರಯಾಣ ಮಾಡಬೇಕು. ಸಾಬಿ ಬಂದರೆ ತಲೆಯಗಲಕ್ಕೂ ಕತ್ತಿ ಆಡಬೇಕು. ಬಿರಾಂ ಸಾಬಿಯನ್ನು ನೋಡಿ ಮುನಿಯಪ್ಪ 'ಇನ್ನು ಬಂದನಪ್ಪ. ಈ ಸಾಬಿ, ಎಷ್ಟು ಹೊತ್ತಿಗೂ ಆಗೋಕಿಲ್ಲ' ಎನ್ನಬೇಕು. ಇವನು 'ಬಿಡು, ಬಿಡು ಮುನಿಯಪ್ಪ, ನಾ ಗಡ್ಡ ಬಿಡತೇನೆ. ಇವರು ಜುಟ್ಟು, ಬಿಡತಾರೆ. ಎಲ್ಲ ಒಂದೇ ಆಗತದೆ' ಎಂದು ಹೇಳಬೇಕು. ತಲೆಯೋ ಗಡ್ಡವೊ, ಈ ಬಂದ ಗುಂಪೆಲ್ಲ ಕೆಲಸ ಮುಗಿಸಿಕೊಂಡು ಬಾವಿಗೆ ಹೋಗುವವೇಳೆಗೆ ನಡು ಮಧ್ಯಾಹ್ನ.

ಸಂಜೀವನ ತಾಯಿ ಹಣ್ಣು ಮುದುಕಿ. ಇನ್ನೂ ಇದಾಳೆ. ಇದರಿಂದ ಅವನ ಜೊತೆಯ ಬಹು ಜನರಿಗೆ ಸರಿ ಹೋಗುವ ದಿನ ಅವನಿಗೆ ಸರಿಯಲ್ಲ. ಅವಳು 'ಎಲಾ ಅಪ್ಪ, ನೀನು ಕ್ಷೌರ ಮಾಡಿಸಿ-ಕೋ, ನಾನು ಒಂದು ಮುದಿಗೊಡ್ಡು ಹೋದರೆ ಏನು ನಷ್ಟ, ಮಾಡಿಸಿಕೊಪ್ಪ' ಎನ್ನುವಳು. ತಾಯಿ ಎಷ್ಟು ಹೇಳಿದರೂ ಅವನು ಅಂಥ ದಿನದಲ್ಲಿ ಕ್ಷೌರ ಮಾಡಿಸಿಕೊಳ್ಳ. 'ನೀನು ನನ್ನ ಹೆತ್ತು ಸಾಕಿದ್ದ-ಕ್ಕೆ ಒಳ್ಳೆಯ ಸಾರ್ಥಕ ಆಯಿತು' ಎಂದು ಅವನು ಹೇಳುವನು. ಅಥವಾ ಅವನು ಮಾಡಿಸಿಕೊಂ-ಡೇನೆಂದರೂ ಅವನ ಹೆಂಡತಿ ಬಿಡಳು. 'ಇದೇನಿದು? ಅತ್ತೆಮ್ಮನವರಿಗೆ ಕೆಟ್ಟದ್ದು ಇಂದು ಕ್ಷೌರ ಮಾಡಿಸಿಕೊಂಡರೆ, ಮಂಕರ ಹಾಗೆ ಮಾಡಿಸಿಕೊಂಡೀರಿ' ಎಂದು ಜ್ಞಾಪಕ ಕೊಡುವಳು. ಮೇಲಾಗಿ ಈಚೆಗೆ ಸಂಜೀವನಿಗೂ ಮುನಿಯಪ್ಪನಿಗೂ ಸ್ವಲ್ಪ ಹಾಗೆಹಾಗೆ. ಎಂದರೆ ಸಂಜೀವನಿಗೆ ಮುನಿಯ-ಪ್ಪನನ್ನು ಕಂಡರೆ ಸ್ವಲ್ಪ ಭಯ. ಸಾಧ್ಯವಾದಷ್ಟು ಅವನು ಗಿರಿಯನಿಂದ ಕ್ಷೌರ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುವನು. ಗಿರಿಯನ ಸಮಾಚಾರ ಈಗ ಬೇಡಿ. ಇನ್ನು ಯಾವಾಗಲಾದರೂ ಹೇಳುತ್ತೇ-ನೆ. ಸಂಜೀವನಿಗೆ ಮುನಿಯಪ್ಪನನ್ನು ಕಂಡರೆ ಭಯಕ್ಕೆ ಕಾರಣವೇನೆಂದರೆ ಒಂದುಸಲ ಸಂಜೀವನ ಸಾಹುಕಾರನ ಅಂಗಡಿಯಲ್ಲಿ ಮುನಿಯಪ್ಪ ಏನೋ ಸಾಮಾನು ತೆಗೆದುಕೊಂಡು ಹೋಗಿ ದುಡ್ಡು ಕೊಡುವುದರಲ್ಲಿ ಸಾವಕಾಶ ಮಾಡಿದ. ಸಂಜೀವನ ಕೈಲಿ ಸಾಹುಕಾರ ಖಂಡಿತದ ಮಾತು ಹೇಳಿ ಕಳುಹಿಸಿದ. ಅವನು ಹೋಗಿ ಮುನಿಯಪ್ಪನನ್ನು 'ದುಡ್ಡು ಕೊಡು' ಎಂತ ಸ್ವಲ್ಪ ಜೋರಾಗಿ ಕೇಳಿದ. ಅದಕ್ಕೆ ಅವನು, 'ಆಗಲಿ, ಇರಲಿ ನಿನಗೆ ಮಾಡತೀನಿ' ಎಂದ. ಸಂಜೀವ ಮನಸ್ಸಿನಲ್ಲಿ 'ದುಡ್ಡು ಏನು

ಇವನಪ್ಪನ ಮನೆ ಗಂಟೆ? ಯಜಮಾನನ ದುಡ್ಡು ಕೊಡು ಎಂತ ಕೇಳಿದರೆ ಇವನ ಕೋಪ ಎಷ್ಟು? ಇವನು ನನಗೆ ಮಾಡುವುದೇನು? ಕ್ಷೌರ ಮಾಡುವುದಿಲ್ಲ, ಎಂತ ಅಲ್ಲವೆ ಹೇಳುತ್ತಾನೆ. ಇವನು ಬೇಡಲೇಬೇಡ' ಎಂದುಕೊಂಡ. ಆಮೇಲೆ ಒಂದುದಿನ ಕೆಲಸಕ್ಕೆ ಬಂದಾಗ ಮುನಿಯಪ್ಪ 'ಬಾ ಸಂ-ಜೀವಪ್ಪ' ಎಂದು ವಾಡಿಕೆಗಿಂತ ಹೆಚ್ಚಿನ ಅಕ್ಕರೆಯಿಂದ ಕರೆದ. ಸಂಜೀವ ಹೋಗಿ ಕುಳಿತುಕೊಂಡ. ಕ್ಷೌರವೆಲ್ಲ ಆಗಿ ಇನ್ನೇನು ಏಳಬೇಕು ಆಗ ಮುನಿಯಪ್ಪ 'ಹತಂ, ನಿನ್ನ ತುರುಕನ್ನ ಮಾಡಿಬಿಡುತ್ತೇನೆ ನೋಡು' ಎಂದು ಇವನ ಜುಟ್ಟನ್ನು ಪಟ್ಟಾಗಿ ಹಿಡಿದುಕೊಂಡ. ಅವನು ಹೇಳಿದ್ದು ಹಾಸ್ಯಕ್ಕೆ. ಇವನ ಗಿಲಿ ಸಂಗತಿ ಅವನು ಬಲ್ಲ. ಸಂಜೀವನಿಗೆ ಎದೆ ಬಿರಿದು ಹೋಯಿತು. ಮುನಿಯಪ್ಪ ಜುಟ್ಟನ್ನು ಹಿಡಿದನೋ ಇಲ್ಲವೋ ಸಂಜೀವ 'ಅಯ್ಯೋ ಅಯ್ಯೋ' ಎಂದು ಕೂಗಿಕೊಂಡು ಬಿಟ್ಟ. ಎಲ್ಲರೂ, 'ಏನಯ್ಯ ಅದು?' ಎಂದರು. ಆಮೇಲೆ ಏನೋ ಹೇಳಿ ಇಬ್ಬರಿಗೂ ಸಮಾಧಾನ ಮಾಡಿದರು. ಎಲ್ಲಾ ಸರಿಹೋಯಿತು. ಆದರೆ ಮುನಿಯಪ್ಪನ ಈ ಆಟ ಸಂಜೀವನ ಮನಸ್ಸಿನಲ್ಲಿ ಚೆನ್ನಾಗಿ ನಾಟಿ ನಿಂತಿತು.

ಇದಾದ ಕೆಲವು ದಿನದಲ್ಲಿ ಸಂಜೀವ ಬೆಂಗಳೂರಿನಲ್ಲಿ ನಾಗಪ್ಪ ಮಾಡಿದ ಕ್ಷೌರವನ್ನು ನೋಡಿ-ಬಂದ. ಆ ತರುಣದಲ್ಲಿ ಒಂದು ಒಳ್ಳೆಯ ದಿನ ಮುನಿಯಪ್ಪ ಊರಜನಕ್ಕೆ ಕ್ಷೌರ ಮಾಡಿದ. ಆದಿನ ಸಂಜೀವನೂ ಕಾದ. ಒಬ್ಬನ ಕ್ಷೌರ ಆಯಿತು. ಇನ್ನೊಬ್ಬನ ಕ್ಷೌರ ಆಯಿತು. ಮತ್ತೊಬ್ಬನ ಕ್ಷೌರ ಆಯಿತು, ಎಲ್ಲರದೂ ಆಯಿತು, ಸಂಜೀವನದು ಆಗಲಿಲ್ಲ. ಕೊನೆಗೆ ಇವನು ಇನ್ನೂ ಕಾದಿರುವಾಗ ಮುನಿಯಪ್ಪ 'ಇನ್ನು ನನ್ನಿಂದ ಆಗೋಲ್ಲಪ್ಪ, ಇನ್ನೊಂದು ದಿನ ಬರ್ತೀನಿ' ಎಂದ;. ಹಡಪವನ್ನು ಸುತ್ತಿ ಎದ್ದೇಬಿಟ್ಟ. ಸಂಜೀವ 'ಇದೇನು ಮುನಿಯಪ್ಪ, ನನ್ನನ್ನು ಬಿಟ್ಟೆಬಿಟ್ಟೆಯಲ್ಲ' ಎಂದ. ಮುನಿಯಪ್ಪ 'ನಾ ಚೌರ ಮಾಡಿದರೆ ನೀ ಅಂಜತೀಯಪ್ಪ; ಗಿರಿಯನತಾವ ಮಾಡಿಸಿಕೊ' ಎಂದ. ಸಂಜೀವ ಹಾಗೆಯೇ ಬಂದ. ಕ್ಷೌರ ಮಾಡಿಸಿಕೊಳ್ಳದೆಯೇ ಮಾಡಿಸಿಕೊಂಡದ್ದಕ್ಕಿಂತ ಹೆಚ್ಚಾಗಿ ಹೊತ್ತು ಕಳೆದು ಊಟಮಾ-ಡಿದ.

ಈ ಸುಮಾರಿನಲ್ಲಿ ಗಾರೆ ಬಿರಾಂ ಸಾಬಿ ಸಂಜೀವನ ಸಾಹುಕಾರನ ಮನೆಯಲ್ಲಿ ಸುಣ್ಣ ಬಳಿಯು-ತ್ತಾ ಇದ್ದ. ಅದನ್ನು ಸಂಜೀವ ನೋಡಿಕೊಳ್ಳುತ್ತಾ ಇದ್ದ. ಇಲ್ಲಿ ಗಾರೆ ಹಾಕಬೇಕಾಗಿತ್ತು ಎಂತಲೋ ಅಲ್ಲಿ ಸುಣ್ಣ ಸಾಲದು ಎಂತಲೋ ಇವನು ಹೇಳಿರಬೇಕು. ಅವನು ಏನೋ ಉತ್ತರ ಕೊಟ್ಟಿರಬೇಕು. ಅದು ಏನೋ ಇವನ ತಲೆಯಲ್ಲಿ ನಿಂತಿತು.

ಹೀಗಿರುತ್ತಾ ಆ ಹೊತ್ತೋ ಮಾರನೆಯ ದಿನವೊ ಸಂಜೀವನಿಗೆ ಸ್ವಲ್ಪ ಜ್ವರ ಬಂದಿತು. ಸಂಜೀ-ವನಿಗೆ ಸ್ವಲ್ಪ ಜ್ವರ ಬಂದರೂ ಕಳವಳ ಹೆಚ್ಚು. ಆ ಜ್ವರದಲ್ಲಿ ರಾತ್ರಿ ಇವನಿಗೆ ಸ್ವಪ್ನ.

ಇವನು ಕ್ಷೌರ ಮಾಡಿಸಿಕೊಳ್ಳುವುದಕ್ಕೆ ಎಂತ ಚಾವಡಿಯ ಬಳಿ ಕಾದಿದಾನೆ. ಮುನಿಯಪ್ಪ ಬಂ-ದು ಕುಳಿತ. ಸ್ವಲ್ಪ ಹೊತ್ತಿನಲ್ಲಿ ಬೆಂಗಳೂರಿನ ನಾಗಪ್ಪ ಬಂದು ತಾನೂ ಕ್ಷೌರಮಾಡುವುದಾಗಿ ಹೇಳಿದ; ಜನರನ್ನು ಕರೆದ. ಯಾರೋ ಬಂದು 'ಮಾಡಿಸಿಕೊ ಸಂಜೀವಪ್ಪ' ಎಂದರು. ಇವನು ಯೋಚನೆ ಮಾಡುತ್ತಿದಾನೆ. ನಾಗಪ್ಪ ಇವನು. ಇರುವ ಸ್ಥಳಕ್ಕೆ ಬಂದು ಎದುರಿಗೆ ಕುಳಿತ. ಹಡಪ ಬಿಚ್ಚಿದ. ಕುಚ್ಚು ಮಟ್ಟಿ ತೆಗೆದ. ಇವನ ಮುಖಕ್ಕೆ ಸುಣ್ಣ ಬಳಿಯಲು ಆರಂಭಿಸಿಯೇ ಬಿಟ್ಟ. ಸಂಜೀವ ಇದರ ಸುಖ ಏನೂ ಅಂತ ಯೋಚಿಸುತ್ತಿದಾನೆ. ನಾಗಪ್ಪನ ಮುಖ ಬಿರಾಂ ಸಾಬಿ ಮುಖ ಆಯಿತು. ಅವನು 'ಇದೋ ನಿನ್ನ ಮುಸಲ್ಮಾನನ್ನ ಮಾಡಿದೆ' ಎಂದು ಕೂಗಿದ್ದೆ ಇವನ ಜುಟ್ಟನ್ನು ಹಿಡಿದುಬಿಟ್ಟ.

ಸಂಜೀವ 'ಪ್ರಾಣ ಬೇಕಾದರೆ, ತಕ್ಕೊ, ನಾ ಜಾತಿ ಕೆಡೋಲ್ಲ' ಎಂತ ಕಿರಿಚಿದ್ದೆ ಹಾರಿ ನಿಂತ.

ಹಾರಿ ನಿಲ್ಲುವುದರಲ್ಲಿ ಸಂಜೀವನಿಗೆ ಎಚ್ಚರ ಆಯಿತು. ಎಚ್ಚರವಾದರೇನು? ಜುಟ್ಟನ್ನು ಯಾ-ರೋ ನಿಜವಾಗಿ ಹಿಡಿದೇ ಇದ್ದಾರೆ. ಇವನು 'ಲೋ ಬೇಡ, ಬೇಡ ನಿನ್ನ ದಮ್ಮಯ್ಯ, ನನ್ನ ಜಾತಿ ಕೆಡಿಸ-ಬೇಡ' ಎಂತ ಕೂಗಿದ್ದೂ ಕೂಗಿದ್ದೆ.

ಸಂಜೀವನ ಹೆಂಡತಿ, 'ಅಯ್ಯೋ ಯಾಕೆ ಹೀಗೆ ಅರಚುತೀರಿ. ಸ್ವಲ್ಪ ತಡೀರಿ. ಜ್ವರಬಿಟ್ಟಿತೇ ನೋ-ಡಿದವಳು ಜುಟ್ಟು, ಬಿಚ್ಚಿ ಹೋಗಿತ್ತು ಗಂಟು ಹಾಕೋಣ ಎಂತ ನಾ ಹಿಡಿದೆ' ಎಂದಳು.

ಇಷ್ಟು ಹೊತ್ತಿಗೆ ಸಂಜೀವನಿಗೆ ನಿದ್ದೆ ತಿಳಿಯಿತು. ತನ್ನ ಜುಟ್ಟನ್ನು ಹಿಡಿದಿರುವುದು ತನ್ನ ಹೆಂಡತಿ, ನಾಗಪ್ಪ ಅಲ್ಲ, ಬಿರಾಮ್ ಸಾಬಿಯೂ ಅಲ್ಲ ಎನ್ನುವುದು ಕಂಡಿತು. ಅವನು ಕೂಗುವುದನ್ನು ನಿಲ್ಲಿಸಿ ಸ್ವಸ್ಥವಾಗಿ ಮಲಗಿದನು.

ಮಾರನೆಯ ದಿನ ನಮ್ಮ ಶಾಸ್ತ್ರಿಯನ್ನು ಇದರ ಫಲ ಏನೆಂದು ಕೇಳಿದರೆ ಶಾಸ್ತ್ರಿ 'ಊರೆಲ್ಲ ತಲೆ ಬೋಳಿಸಿಕೊಳ್ಳಲಿ, ನಿನ್ನ ಚಂಡಿಕೆಗೆ ಭಯ ಇಲ್ಲ' ಎಂದನಂತೆ. ಸ್ವಪ್ನದಲ್ಲಿ ಯಾರೋ ಹಿಡಿದಂತೆ

ಕಂಡು ನಿಜದಲ್ಲಿ ಹೆಂಡತಿ ಹಿಡಿದಿದ್ದಳು ಎನ್ನುವುದೂ ಸ್ವಪ್ನಶಾಸ್ತ್ರ ನಿಜ ಎನ್ನುವುದನ್ನು ತೋರಿಸುತ್ತದೆ ಎನ್ನಬೇಕು: ಆದರೆ ನಮ್ಮ ಶಾಸ್ತ್ರಿಗೆ ಇದೆಲ್ಲ ತೋಚುವುದಿಲ್ಲ. ಉಳಿದ ಮಾತು ನಿಜವೋ ಸುಳ್ಳೋ; ಶಾಸ್ತ್ರಿ ಹೇಳಿದ ಮಾತಂತೂ ನಿಜವಾಗಿದೆ. ನಾ ಮುದುಕನಾಗಿದೇನೆ; ಸಂಜೀವನಿಗೆ ವಯಸ್ಸಾಗುತ್ತಾ ಇದೆ; ಆದರೆ ಅವನ ತಲೇಲಿ ಈಗಲೂ ಆ ಹತ್ತು ಕೂದಲ ಸಣ್ಣ ಗಂಟು ಭದ್ರವಾಗಿದೆ.

೩

ಅಜ್ಜ ಶಾಮಣ್ಣನವರು ಹೇಳಿದ ಹಳೆಯ ಕತೆಗೆ ಮೊಮ್ಮಗ ಶಾಮಣ್ಣ ಎರಡು ಹೊಸ ಮಾತನ್ನು ಸೇರಿಸುತ್ತೇನೆ. ಅಜ್ಜನವರ ಸಂಜೀವ ಈಗ ಊರಿಗೆಲ್ಲ ಸಂಜೀವಯ್ಯ ಆಗಿದ್ದಾನೆ. ಮುನಿಯಪ್ಪನ ಮಗ ಮುನಿಶಾಮಿ ಈಗ ನಮ್ಮ ಕೆಲಸಿ. ಅವನು ಸಂಜೀವಯ್ಯನನ್ನು ಮರ್ಯಾದೆಯಿಂದ ಕಾಣು-ತ್ತಾನೆ: ಅವನೊಂದಿಗೆ ಹುಡುಗಾಟ ಮಾಡುವಂತಿಲ್ಲ. ಇದಕ್ಕೆ ಮುಖ್ಯ ಕಾರಣ, ಈಗ ನಮ್ಮೂರಲ್ಲಿ ಮುನಿಶಾಮಿಯನ್ನು ಕರೆಯುವವರು ನಾಲ್ಕೂ ಆರೋ ಜನ ಅಷ್ಟೆ. ಸಂಜೀವಯ್ಯ ಅವರಲ್ಲಿ ಒಬ್ಬ. ಒಳ್ಳೆಯ ದಿನ ಅಂತ ಮುನಿಶಾಮಿ ತಾನೇ ಬರುತಾನೆ; ಚಾವಡಿ ಬಳಿ ಕೂರುವುದಿಲ್ಲ, ಮನೆಗೇ ಬಂ-ದಾನು. ಅವನನ್ನು ಕೇಳುವರಿಲ್ಲ. ಎಲ್ಲರೂ ಒಳ್ಳೆಯದಲ್ಲದ ದಿನ ಮಾದಾವರಕ್ಕೆ ಹೋಗಿ ಅಂದ-ವಾಗಿ ಕ್ರಾಪ್ ಮಾಡಿಸಿಕೊಂಡು ಬಂದಿರುವವರೇ, ಮುನಿಶಾಮಿ ಇವರನ್ನು ನೋಡಿ, “ಏನಪ್ಪಾ ಎಲ್ಲಿ ಮಾಡಿಸಿಕೊಂಡೆ ಈ ಕ್ರಾಪು? ಡೀಸೆಂಟ್ ಹೇರಲ್ಲೊ, ಮೆಜಸ್ಟಿಕ್ ಹೇರಲ್ಲೊ,” ಎನ್ನುವನು. ಹೀ-ಗೆಂದರೆ ‘Decent Hair Cutting Saloon, Majestic Hair Cutting Saloon’ ಎಂತ. ಇವು ಮಾದಾವರದಲ್ಲಿರುವ ಎರಡು ಆಯುಷ್ಕರ್ಮ ಶಾಲೆಗಳು. ಇವು ಎದುರುಬದುರಾಗಿ-ವೆ. ‘Decent Hair’ ಮೊದಲು ಬಂದಿತು. ಬಾಗಿಲ ಮುಂದಿನ ಹೆಸರುಪಟ್ಟಿಯಲ್ಲಿ ಮೊದಲ ಪಂ-ಕ್ತಿಯಲ್ಲಿ ದೊಡ್ಡ ಅಕ್ಷರದಲ್ಲಿ ಮೊದಲ ಎರಡು ಪದವನ್ನು, ಎರಡನೆಯ ಪಂಕ್ತಿಯಲ್ಲಿ ಸಣ್ಣ ಅಕ್ಷರವಾ-ಗಿ ‘Cutting Saloon’ ಎನ್ನುವುದನ್ನು ಬರೆಸಿತ್ತು. ಆಮೇಲೆ ಬಂದ ಎದುರಾಳಿ ಇದರಂತೆಯೇ ಹೆಸರುಪಟ್ಟಿ ಬರೆಸಿದ. ‘Decent Hair’ಗೆ ಪ್ರತಿ ‘Majestic Hair’ ಆಯಿತು. Cutting Saloonಗೆ Cutting Saloon. ಅಂತೂ, ಮಾದಾವರ ಅದರ ಜೊತೆಗೆ ಹೊಸಹಳ್ಳಿ, ‘ನಾವೂ ನಾಗರಿಕ ಗ್ರಾಮಗಳು- ಕ್ಷೌರದ ಮನೆಗೆ ಕೂಡ ಇಂಗ್ಲೀಷ್ ಹೆಸರು ಹಾಕುತ್ತೇವೆ’ ಎನ್ನಬಹುದಾಗಿದೆ. ಇದೇನಾದರೂ ನಮ್ಮ ಸಂಜೀವಯ್ಯನಿಗೆ ಬಿದ್ದ ಸ್ವಪ್ನದ ಫಲವೋ ಎಂದು ನನಗೆ ಒಂದೊಂದು ಸಲ

ಸಂದೇಹವಾಗುತ್ತದೆ. ಸಂಜೀವಯ್ಯನನ್ನೇ ಒಮ್ಮೆ ಈ ಮಾತು ಕೇಳಿದೆ. ಅವನು 'ಇರಬಹುದು, ಅಲ್ಲ-ವೆನ್ನುವುದು ಹ್ಯಾಗೆ' ಎಂದ. ಕ್ಷಣಬಿಟ್ಟು, 'ಅಲ್ಲದೆ ಇರಬಹುದು, ಹೌದು ಎನ್ನುವುದು ಹ್ಯಾಗೆ' ಎಂದ. ಇದರಾಚೆ ಮಾತೇನಿದೆ? ನಾನು ಸುಮ್ಮನಿದ್ದೆ.

ನಾಯಿ ಬಾಳು

೧

ಚೀನು ನಿನ್ನೆ ನನಗೆ ಹೇಳಿದ: "ಮನು ನಮ್ಮ ಮದುವೆಮಾತು ಸದ್ಯಕ್ಕೆ ಬೇಡ ಎನ್ನುತಾಳೆ" ಎಂತ.

ನಾನೂ ಲೀಲೂ ಯೋಚನೆ ಮಾಡಿ ಇವರಿಬ್ಬರೂ ಸುಖವಾಗಿರಲಿ ಎಂತ ಮಾಡಿದ ಏರ್ಪಾಡು ವ್ಯರ್ಥವಾಯಿತು. ಒಂದು ವರ್ಷ ಕಾದಾಗಿತ್ತು. ಈ ಸೌಭಾಗ್ಯಕ್ಕೆ ಒಂದು ವರ್ಷ ಕಾದಾಗಿತ್ತು.

ನಾನು ಚೀನೂನ 'ಯಾಕೆ ಎಂತ ಹೇಳತಾಳೆಯೆ' ಎಂತ ಕೇಳಿದೆ. ಅವನು 'ಅಂಥಾದ್ದೇನು ಕಾರಣ ಇಲ್ಲ' ಎಂದ; ಒಂದು ಕ್ಷಣ ಬಿಟ್ಟು, "ಭೈರೂಗೆ ನನ್ನ ಕಂಡರೆ ಆಗತಾ ಇಲ್ಲ, ಅದಕ್ಕಾಗಿ ಬೇಡ ಅಂದಳು" ಎಂದ.

ನನಗೆ ತುಂಬಾ ಆಶ್ಚರ್ಯ. ಇದೇನು ಚೀನು! ನನಗೆ 'ಬೇಕಾದೋನು, ಆದರೆ ನನ್ನ ನಾಯೀಗೆ ಬೇಡ, ಆದ್ದರಿಂದ ನಾ ಮದುವೆಯಾಗೋಲ್ಲ' ಎಂತಾಳೆಯೇ?" ಎಂದೆ.

ಚೀನು "ನೀ ಕೋಪಿಸಿಕೋ ಬೇಡ, ಅಣ್ಣ. ಲೀಲು ಸಂಗಡ ಮಾತಾಡು; ಅವಳೆಲ್ಲಾ ಹೇಳುತಾಳೆ" ಎಂದ.

ಮನೆಗೆ ಬಂದವನು ಲೀಲೂನ, "ಇದೇನು, ಮನು ಆಡುತಿರೋ ಮಾತು? ತನ್ನ ನಾಯಿಗೆ ಚೀನೂನ ಕಂಡರೆ ಆಗೋದಿಲ್ಲ ಅಂತ ತಾನು ಅವನ್ನ ಮದುವೆ ಆಗೋದಿಲ್ಲ ಎಂತಾಳಂತಲ್ಲ," ಎಂತ ಕೇಳಿದೆ. ಲೀಲೂ, "ಅದರ ಸಂಗತಿ ಸ್ವಲ್ಪ ಇದೆ; ನಾಳೆ ಹೇಳುತ್ತೇನೆ," ಎಂದಳು.

ನನಗೆ ಮತ್ತೂ ಬೇಸರವಾಯಿತು. "ಇದೇನು ಬುದ್ಧಿವಂತಿ? ಮನೂಗೆ ಮನಸ್ಸಿದೆ, ಆದರೆ ಭೈರು

ಬೇಡ ಅನ್ನುತ್ತೆ ಅಂತ ಈ ಮದುವೆ ನಿಲ್ಲಬೇಕೆ? ಈ ನಿರ್ಣಯಾನ ಮನೂ ಮಾಡಿ ಚೀನೂ ಒಪ್ಪಿ ನೀನು ಅನುಮೋದಿಸುತ್ತೀಯಾ," ಎಂತ ಕೇಳಿದೆ.

ಲೀಲು, "ನಾನು ಬುದ್ಧಿವಂತಿ ಅಲ್ಲ ಬಿಡಿ; ಗಂಡಸರು ನೀವೇ ಬುದ್ಧಿವಂತರು. ಸ್ವಲ್ಪ ತಡಕೊಳ್ಳಿ. ನಾಳೆ ನೀವೇ ಹೇಳುವಿರಂತೆ," ಎಂದಳು.

೨

ನಾನು, ಚಾಮು, ಚೀನು ಜೊತೆಯಾಗಿ ಬೆಳೆದ ಹುಡುಗರು; ಜೊತೆಯಾಗಿ ಓದಿದವರು. ಬೆಂಗಳೂರಲ್ಲಿ ಓದೋಕೆ ಬಂದಾಗ ಚಾಮು ಅವರಕ್ಕ ಸುಬ್ಬಮ್ಮನ ಮನೇಲಿ ನಿಂತ. ಅಕ್ಕ ಅಂದರೆ ಸದ್ಯ ಅಕ್ಕ ಅಲ್ಲ; ದೊಡ್ಡಮ್ಮನ ಮಗಳು. ಸುಬ್ಬಮ್ಮನ ಯಜಮಾನರು ಜನ್ನಪ್ಪ ಪುಣ್ಯವಂತರು. ಚಾಮರಾಜಪೇಟೇಲಿ ಇದ್ದರು. ಚಾಮೂ ಹತ್ತಿರ ಇರೋಣ ಎಂತ ನಾನೂ ಚೀನೂ ಅಲ್ಲೇ ಒಂದು ರೂಮ್ ಮಾಡಿ ಕೊಂಡೆವು. ಜನ್ನಪ್ಪ ಸುಬ್ಬಮ್ಮನಿಗೆ ಮನು ಒಬ್ಬಳೇ ಮಗಳು. ಮನು ಮದುವೆ ಮಾತು ಬಂದಾಗ ಜಾತಕ ನೋಡಿಸಿದರು. ಚಾಮೂ ಜಾತಕ ಅಷ್ಟಾಗಿ ಹೊಂದಲಿಲ್ಲ; ಚೀನೂ ಜಾತಕ ಅದಕ್ಕಿಂತ ಮೇಲು; ಎಲ್ಲಕ್ಕಿಂತ ಚೆನ್ನಾಗಿ ಹೊಂದಿದ್ದು ನನ್ನ ಜಾತಕ. ಏನು ಮನುವನ್ನು ನಾನೇ ಮದುವೆಯಾಗತೇನೋ ಚೀನೂನೇ ಮದುವೆಯಾಗತಾನೋ ಅನ್ನೋವರೆಗೆ ಬಂದಿತ್ತು. ಆದರೆ ಚಾಮು ಏನಂದರೂ ಸುಬ್ಬಮ್ಮನಿಗೆ ತಮ್ಮ; ನಾವು ಸ್ವಲ್ಪದೂರ. ಯಾರೋ ಜೋಯಿಸರು ಸಿಕ್ಕಿದರು, "ಜಾತಕ ಮೊದಲು ಗುಣಿಸಿದ್ದು ತಪ್ಪು, ಚಾಮೂ ಜಾತಕ ಮನೂ ಜಾತಕ ಚೆನ್ನಾಗಿ ಹೊಂದುತ್ತೆ," ಎಂದರು. ಅದರ ಮೇಲೆ ಚಾಮೂನೇ ಮನೂನ ಮದುವೆ ಆದ.

ಲೀಲೂ ಸರೂ ಮನೂ ಸ್ನೇಹಿತರು. ನಾನು ಲೀಲೂನ ಮದುವೆಯಾದೆ; ಚೀನು ಸರೂನ ಮದುವೆಯಾದ. ಮನೂನೇ ಗೆಳತಿಯರನ್ನು ಒಪ್ಪಿಸಿ ಗಂಡನ ಗೆಳೆಯರು ನಮ್ಮನ್ನು ಸಂಸಾರಿಗಳನ್ನಾಗಿ ಮಾಡಿದಳು.

ವರ್ಷದ ದಿನ ನಾವು ಅದೆಷ್ಟು ಸಂತೋಷವಾಗಿದ್ದೆವೋ ಹೇಳುವಂತಿಲ್ಲ. ನಮ್ಮ ಸಲಿಗೆ, ನಮ್ಮ ಸರಸ, ನಮ್ಮ ಚೆಲ್ಲಾಟ, ಅದರ ಸೊಗಸೇ ಸೊಗಸು. ಆದರೆ ಅಷ್ಟರಲ್ಲಿ ಚಾಮು ಏನೋ ಬೇಸರಪ-

ಟ್ಟುಕೊಂಡಂತೆ ಕಂಡಿತು. ನಾನೂ ಚೀನೂ ಮನೂ ಹತ್ತಿರ ಸಲಿಗೆಯಿಂದ ಮಾತನಾಡಿದರೆ ಅವನು ಮುಖಕೆಡೋನು; ತಾನು ಮಾತ್ರ ಲೀಲೂ ಹತ್ತಿರ ಸರೂ ಹತ್ತಿರ ಸಲಿಗೆಯಿಂದಲೇ ಮಾತನಾಡೋ-ನು. ನಾನಾಗಲೀ ಚೀನು ಆಗಲಿ ಮನುವನ್ನ ಮದುವೆ ಆಗಬಹುದಾಗಿದ್ದವರು ಅನ್ನೋದರ ಮೇಲೆ ಅವನು ಹೀಗೆ ಅಸಮಾಧಾನ ಮಾಡಿಕೊಂಡ ಅಂತ ಕಾಣುತ್ತೆ. ನಮಗೇನಂತೆ? ಮನು ಸುಖವಾ-ಗಿರೋದು ಮುಖ್ಯ ಅಂತ ನಾನೂ ಚೀನೂ ಮಾತನಾಡಿಕೊಂಡು ಅಮೇಲೆ ಚಾಮೂ ಮನೇಲಿ ಇನ್ನು ಸ್ವಲ್ಪ ಹಿಡಿತದಿಂದ ನಡೆದುಕೊಂಡೆವು.

೩

ಮದುವೆ ಆದ ಮೂರು ವರ್ಷಕ್ಕೆ ಸರೂ ಮೊದಲ ಹೆರಿಗೆ ಹೊತ್ತಿನಲ್ಲಿ ತೀರಿಕೊಂಡಳು. ಚೀ-ನು ಒಂಟಿಯಾದ. ಸುಮಾರು ಈ ಸಮಯಕ್ಕೆ ಸುಬ್ಬಮ್ಮ ತೀರಿಕೊಂಡು, ಚಾಮು ಮನು, ಜನ್ನಪ್ಪನ ಮನೆಗೆ ಬಂದು, ಅವರನ್ನ ನೋಡಿಕೊಳ್ಳಬೇಕಾಯಿತು. ಆಗ್ಗೆ ಚಾಮೂಗೆ ಅಜೀರ್ಣ ಸಂಬಂಧದ ಏನೋ ವ್ಯಾಧಿ. ನಾಲ್ಕು ದಿನ ಪಥ್ಯವಾಗಿದ್ದರೆ ವಾಸಿ ಆಗುತ್ತೆ ಅಂತ ಡಾಕ್ಟರು ಹೇಳಿದರು. ಪಥ್ಯ ಒಂದ-ನ್ನು ಮಾಡಲಿಲ್ಲ ಚಾಮು. ಕಾರ ಕಡಿಮೆಯಾಗಿರಲಿ ಅಂತ ಮನೆಯಲ್ಲಿ ಬೇರೆ ಸಾರಿನ ಊಟ ಮಾಡಿ-ದವನು ಹೋಟಲಿಗೆ ಹೋಗಿ ಎರಡು ಪ್ಲೇಟ್ ಪಕೋಡಾ ಮುಗಿಸುತ್ತಾ ಬಂದ. ಬುದ್ಧಿ ಇಲ್ಲದವನಲ್ಲ; ಆದರೆ ಬದುಕೋದಾರಿ ಬಿಟ್ಟ. ಎರಡು ವರ್ಷದಲ್ಲಿ ಕಣ್ಣು ಮುಚ್ಚಿಕೊಂಡ.

ಮೂರು ಜೊತೆ ನಾವು ಸಂತೋಷವಾಗಿ ಬಾಳೋಣ ಅಂತ ಮಾಡಿದರೆ ಇಲ್ಲಿ ಚೀನು, ಇಲ್ಲಿ ಮನು ಒಂಟಿ ಒಂಟಿ ನಿಂತರು. ನಾಲ್ಕು ತಿಂಗಳು ಬಿಟ್ಟು ನಾನು ಲೀಲೂಗೆ ಹೇಳಿದೆ, “ನಾವೇನು ಹಳೇ ತರದ ಮನುಷ್ಯರಲ್ಲ; ಮನೂ ಚೀನೂನ ಮದುವೆ ಆಗಲಿ. ನೀನು ಅವಳಿಗೆ ಹೇಳು,” ಅಂತ. ಚೀನೂಗೆ ನಾನೇ ಹೇಳಿದೆ. ಚೀನು, “ಆಗಲಿ ಅಣ್ಣ,” ಅಂದ. ಮನು, “ಸ್ವಲ್ಪ ತಡಿ,” ಅಂದಳಂತೆ; “ಒಲ್ಲೆ” ಎನ್ನಲಿಲ್ಲ. ಜನ್ನಪ್ಪನಿಗೆ ಹೇಳಿದರೆ ಅವರು ಮಗಳನ್ನು ಕೇಳಿ, ಸ್ವಲ್ಪ ತಡೆಯೋಣಲ್ಲ, ಎಂದ-ರು. ಅದಕ್ಕೇನು ಎಂತ ನಾನು ಆಗ ಸುಮ್ಮನಾದೆ.

ವರ್ಷ ಬಿಟ್ಟು ನಮ್ಮ ಗ್ರಹಚಾರಕ್ಕೆ ಜನ್ನಪ್ಪನೂ ಕಣ್ಣು ಮುಚ್ಚಿ ಕೊಂಡರು. ಆ ಮನೆಗೆಲ್ಲಾ ಮನು ಒಬ್ಬಳೇ ಆಗಿಬಿಟ್ಟಳು. ನೋಡಿಕೊಳ್ಳೋರು ಯಾರು ಎಂದರೆ ಒಂದು ನಾಯಿ ಈ ಭೈರು.

ನಾಲ್ಕು ತಿಂಗಳು ಬಿಟ್ಟು ನಾನು ತಿರುಗಿ ಲೀಲೂಗೆ, “ಎರಡು ವರುಷದ ದಿನ ತಡೆದದ್ದಾಯಿತು; ಈಗ ಮದುವೆ ಆಗಲಿ, ಮನೂಗೆ ಹೇಳು,” ಅಂತ ಹೇಳಿದೆ.

“ಆಗಲಿ ನೋಡೋಣ,” “ಸ್ವಲ್ಪ ತಡಿ, ನೋಡೋಣ” ಅನ್ನುತ್ತಾ ಇದ್ದು ಕೊನೆಗೆ ಮನು ನಿನ್ನೆ ದಿನ ಈ ನಿರ್ಣಯಕ್ಕೆ ಬಂದಿದ್ದಳು.

ರಾತ್ರಿ ಹಾಸಿಗೆಯಲ್ಲಿ ನನಗೆ, “ಎಲಾ, ಈ ನಾಯಿಯ ಪ್ರಭಾವ ನೋಡಿದೆಯಾ ಇದೇನು ವಿಚಿತ್ರ,” ಎಂತ ಯೋಚನೆ.

ಭೈರು ಒಂದು ಜಾತಿ ಟೆರಿಯರ್. ಚಾಮೂ ತೀರಿಕೊಂಡ ತಿಂಗಳು ಅರೆ ದಿನದಲ್ಲಿ ಜನ್ನಪ್ಪ ಅದನ್ನ ಮನೆ ಕಾವಲಿಗಿರಲಿ ಅಂತ ತಕೊಂಡು ಬಂದರು. ಅದಕ್ಕೆ ಮನು ಮೇಲೆ ತುಂಬ ಪ್ರೀತಿ; ಯಾವಾಗಲೂ ಅವಳ ಹತ್ತಿರಲೇ ಕೂತಿರುತ್ತೆ. ಅವಳೂ ಅದನ್ನ ತುಂಬ ಕನಿಕರದಿಂದ ನೋಡಿಕೋತಾಳೆ. ಆದರೂ ಈ ನಿರ್ಣಯ ಸ್ವಲ್ಪ ಅತಿ ಎಂತಲೇ ನನಗೆ ಅನ್ನಿಸಿತು.

೪

ಬೆಳಗಿನ ಕಾಫಿ ಆದಮೇಲೆ ಲೀಲು, “ಸ್ವಲ್ಪ ಮನು ಮನೆಗೆ ಹೋಗಿ ಬರೋಣವೇ,” ಎಂದಳು. ಹೊರಟೆವು. ದಾರೀಲಿ ಚೀನೂ ಮನೆ. ಲೀಲೂ, “ಚೀನುವನ್ನೂ ಕರೆಯಿರಿ,” ಎಂದಳು. ನಾನು ಒಂದು, ಕ್ಷಣ ಒಳಗೆ ಹೋಗಿ ಅವನನ್ನ ಕರೆದೆ. ಚೀನೂ ಬಾಗಿಲಿಗೆ ಬಂದು ಲೀಲೂಗೆ, “ನಾ ಬರೋದು ಬೇಡ ಅಲ್ಲ?” ಎಂದ. ಲೀಲೂ, “ಬಂದರೆ ಒಳ್ಳೇದು. ನಿಮ್ಮ ಅಣ್ಣನಿಗೆ ತಿಳಿಯುತ್ತೆ,” ಎಂದಳು.

ಮೂವರೂ ಜನ್ನಪ್ಪನ ಮನೆಗೆ ಹೋದೆವು. ಬಾಗಿಲಲ್ಲಿ ನಿಂತು ಲೀಲು “ಮನೂ” ಎಂತ ಕರೆದಳು. ಭೈರು ಕೈಸಾಲೆಯಲ್ಲಿ ಕುಳಿತಿತ್ತು; ಸಂತೋಷದಿಂದ ಬಾಲವಾಡಿಸುತ್ತ ಬಾಗಿಲಿಗೆ ಬಂದಿತು; ಚೀನುವನ್ನು ನೋಡಿ ಘೋರವಾಗಿ ಬಗುಳುವುದಕ್ಕೆ ಪ್ರಾರಂಭಿಸಿತು. ಲೀಲು ಮೆಲ್ಲಗೆ ಮಾತನಾಡಿ ಅದನ್ನ ತಟ್ಟಿ ಸಮಾಧಾನಪಡಿಸಿದಳು. ಮನು ಬಂದು ನಮ್ಮನ್ನು ಒಳಕ್ಕೆ ಕರೆದಳು. ನಾನೂ ಲೀಲೂ ಒಳಗೆ ಹೋದೆವು. ಭೈರು ಚೀನುವನ್ನ ಒಳಗೆ ಬಿಡುವುದಿಲ್ಲ ಎಂಬಂತೆ ಬಾಗಿಲಲ್ಲಿ ಅಡ್ಡಲಾಗಿ

ನಿಂತಿತು. ಎಷ್ಟೋ ಸಮಾಧಾನ ಮಾಡಿದ ಮೇಲೆ ಸುಮ್ಮನಾಗಿ ಒಳಕ್ಕೆ ಬಂದಿತು, ಲೀಲು ಪಕ್ಕದಲ್ಲಿ ಕುಳಿತಿತು. ಆಮೇಲೆ ಚೀನು ಒಳಗೆ ಬಂದು ನಮ್ಮೊಡನೆ ಕುಳಿತ.

ಮನು ಒಳಗೆ ಹೋಗಿ ಕಾಫಿಗೆ ಹೇಳಿ ಬಂದಳು. ಅದು ಬರುವವರೆಗೆ ನಾವು ಲೋಕಾಭಿರಾಮವಾಗಿ ಯಾವುದೋ ನಾಲ್ಕು ಮಾತನ್ನಾಡುತ್ತಿದ್ದೆವು.

ಕಾಫಿ ಆದಮೇಲೆ ಚೀನು ಎದ್ದು, "ಇನ್ನು ನಾನು ಹೊರಡಬಹುದಲ್ಲ," ಎಂದು ಲೀಲುವನ್ನು ಕೇಳಿದ. "ಆಗಬಹುದು" ಎಂದು ಅವಳು ತಲೆ ಆಡಿಸಿದಳು.

ಚೀನು ಎದ್ದಾಗ ಭೈರು ಗೊರ್ರೆಂದಿತು. ಆದರೆ ಅವನು ಹೊರಟದ್ದನ್ನು ನೋಡಿ ಸಮಾಧಾನವಾಯಿತು.

೫

ಒಂದು ಕ್ಷಣ ಆ ಮಾತು ಈ ಮಾತು ಆಡುತ್ತಿದ್ದು ಲೀಲು ಮನೂಗೆ, "ನೋಡು ಮನು, ಅಡಿಗೆ ಮುದುಕಿ ನಿನ್ನ ಕರೆದ ಹಾಗೆ ಇತ್ತು," ಎಂದಳು. ಮುದುಕಿ ಕರೆದಿರಲಿಲ್ಲ. ಇದು, ಮನು ಸ್ವಲ್ಪ ಒಳಗೆ ಹೋಗಲಿ ಅಂತ, ಲೀಲೂ ಮಾಡಿದ ಉಪಾಯ.

ಮನು ಒಳಗೆ ಹೋದಮೇಲೆ ಲೀಲೂ ನನಗೆ, "ಇಲ್ಲಿ ಬನ್ನಿ, ಎದುರಿಗೆ ಕುಳಿತುಕೊಳ್ಳಿ, ಭೈರು ಕಣ್ಣು ಇದೆಷ್ಟು ಚೆನ್ನಾಗಿದೆ ಸ್ವಲ್ಪ ನೋಡಿ," ಎಂದಳು.

ಇದೇನು ಹೀಗೆ ಹೇಳುತ್ತಾಳೆ ಅಂತ ನನಗೆ. ಆದರೆ ಯಾವುದೊ ಉದ್ದೇಶದಿಂದ ಇದನ್ನು ಹೇಳುತ್ತಿದಾಳೆ ಎಂತ ನಾನು ಬಲ್ಲೆ. ಹೋಗಿ ಎದುರಿಗೆ ಕುಳಿತೆ. ಭೈರು ಕಣ್ಣನ್ನು ನೋಡಿದೆ.

ಭೈರು ಲೀಲೂ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು ಒಂದೇ ಸಮ ನನ್ನ ಕಡೆ ನೋಡುತ್ತಿತ್ತು.

ಕಣ್ಣನ್ನು ನೋಡಿದೆನೆ ನನಗೆ ಇದು ಎಲ್ಲಿಯೋ ನೋಡಿದ ಕಣ್ಣು ಎನ್ನಿಸಿತು. ತುಂಬ ತಿಳಿದ ಕಣ್ಣು,

ಯಾವುದು ಎಂದು ತೋಚಲಿಲ್ಲ. "ಚೆನ್ನದ ಮಾತು ನಾನು ಕಾಣೆ, ಆದರೆ ಯಾವುದೋ ತಿಳಿದ ಕಣ್ಣಿನ ಹಾಗಿದೆ," ಎಂದೆ.

ಲೀಲೂ, 'ನಿಜವಾಗೂ', ಎಂದಳು. ನಾನು 'ನಿಜವಾಗಿಯೂ' ಎಂದೆ.

ಅಷ್ಟು ಹೊತ್ತಿಗೆ ಮನು ತಿರುಗಿ ಬಂದಳು. ಲೀಲೂ ಅವಳಿಗೆ, 'ನಿಮ್ಮಣ್ಣ ಬೈರುಕಣ್ಣು ತಮಗೆ ತಿಳಿದ ಯಾವದೋ ಕಣ್ಣಿನ ಹಾಗೆ ಇದೆ ಅನ್ನುತ್ತಾರೆ,' ಎಂದಳು.

ಮನು ಏನೋ ಹೇಳಿದ ಹಾಗೆ ಮಾಡಿದಳು; ಮಾತು ತಿಳಿಯಲಿಲ್ಲ. ನಾವು ಬೇರೆ ನಾಲ್ಕು ಮಾತನಾಡಿ ಎದ್ದು ಮನೆಗೆ ಹೊರಟು ಬಂದೆವು.

೬

ಮಧ್ಯಾಹ್ನ ಟೀ ತೆಗೆದುಕೊಳ್ಳುವ ಹೊತ್ತಿನಲ್ಲಿ ಲೀಲೂ ಒಂದು ಫೋಟೋ ಆಲ್ಬಂ ತಂದು ನನ್ನ ಪಕ್ಕದಲ್ಲಿ ಕುಳಿತು ಅದನ್ನು ತಿರಿವಿ ಹಾಕುತ್ತ, 'ನೀವು, ಬೈರೂ ಕಣ್ಣು ಯಾರದೋ ಕಣ್ಣಿನಹಾಗೆ ಇದೆ ಎಂದಿರಲ್ಲ, ಯಾರ ಕಣ್ಣಿನ ಹಾಗೆ ನೋಡಿ ಹೇಳಿ,' ಎಂದು ಕೇಳಿದಳು. ನಾನು, 'ಯಾವ ಮನುಷ್ಯರ ಕಣ್ಣು ನಾಯಿ ಕಣ್ಣಿನ ಹಾಗಿದೆ ಅಂತ ನೋಡೋದು! ಇದು ಯಾತರ ಕೆಲಸ?', ಎಂದೆ.

'ಇರಲಿ, ನೋಡಿ,' ಎಂದು ಲೀಲು ಒಂದು ಫೋಟೋ ತೋರಿಸಿದಳು. ಅದು ಚೀನೂ ಫೋಟೋ. "ಇದರಹಾಗಿದೆಯೇ" ಎಂದಳು. ನಾನು ಅದನ್ನು ದೃಷ್ಟಿಸಿ ನೋಡಿದೆ. 'ಇಲ್ಲ' ಎಂದೆ.

ಅವಳು ಇನ್ನೊಂದು ಫೋಟೋ ತೋರಿಸಿದಳು. 'ಇದರ ಹಾಗಿದೆಯೇ' ಎಂದಳು; ಅದು ನನ್ನ ಫೋಟೋ. 'ಇಲ್ಲ ಅಂತ ನಾನು ತಿಳಿದುಕೊಂಡಿದೇನೆ. ನೀನು ಹೌದು ಎನ್ನುವುದಿಲ್ಲವಲ್ಲ,' ಎಂದೆ. ಲೀಲೂ ನಕ್ಕು, 'ನನಗೂ ಹಾಗೆಯೇ,' ಎಂದು ಹೇಳಿ ಇನ್ನೊಂದು ಫೋಟೋ ತೆಗೆದು, 'ಇದರ ಹಾಗಿದೆಯೇ,' ಎಂದು ಕೇಳಿದಳು. ತೆಗೆದುಕೊಂಡು ನೋಡಿದೆ. ಮಹಾರಾಯನೇ! ತದ್ವತ್ ದೃಷ್ಟಿ. 'ಹೌದಲ್ಲಾ' ಎಂದೆ. ಅದು ಚಾಮೂ ಫೋಟೋ.

ಲೀಲೂ ನಕ್ಕಳು. ಹೇಳಿದಳು: "ನೋಡಿದಿರಾ, ಇದಕ್ಕಾಗಿಯೇ ನಾನು ಸದ್ಯ ಈ ಮದುವೆ ಮಾತು ಬೇಡ ಎನ್ನುತ್ತಿರುವುದು. ಜನ್ನಪ್ಪ ಮರೀನ ತಂದ ದಿವಸವೇ ಮನೂಗೆ ಈ ಕಣ್ಣು ಹೀಗಿದೆ ಅನ್ನೋದು ಮನಸ್ಸಿಗೆ ತಾಕಿತು. ಅದರಿಂದಲೇ ಅವಳು ನಾವು ಈ ಮಾತು ಎತ್ತಿದಾಗಲಿಂದಲೂ ಈ ಮದುವೆ ಮಾತಿಗೆ ತಡಿ, ತಡೀ ಅಂತ ಹೇಳುತ್ತಿದಾಳೆ. ತಾನು ತಿಳಿದುಕೊಂಡದ್ದು ತಪ್ಪೇನೋ ಅಂತ ಒಂದು ದಿನ ನನ್ನ ಕೇಳಿದಳು. 'ಇದರ ಕಣ್ಣು ನಿನಗೆ ತಿಳಿದ ಯಾರ ಕಣ್ಣಿನ ಹಾಗಾದರೂ ಇದೆಯೇ' ಅಂತ. ನಾನು ನೋಡಿದೆ; 'ಹೌದು' ಎಂದೆ. 'ಯಾರ ಕಣ್ಣಿನ ಹಾಗೆ' ಎಂದಳು. ನಾನು 'ಹೇಳೋದಿಲ್ಲ' ಎಂದೆ. 'ನಾನೇ ಹೇಳುತ್ತೇನೆ' ಅಂದಳು; ಹೇಳಿದಳು. ಮೂರು ದಿನದ ಹಿಂದೆ ಬ್ಯೆರೂನ ಭದ್ರವಾಗಿ ಹಿಡಿದುಕೊಂಡು ಚೀನೂಗೂ ತೋರಿಸಿದಳು. ನೋಡಿದ್ದು ತಡ ಅವನೂ ಹೌದು ಅಂದ. ಯಾರದು ಎಂದರೆ ಹೇಳೋದಿಲ್ಲ ಎಂದ. ಅವನಿಗೆ ನಾನೆ ಬೇರೆಯಾಗಿ ಹೇಳಿದೆ; ಒಪ್ಪಿಕೊಂಡ."

ನಾನು ಸುಮ್ಮನಿದ್ದೆ. ಲೀಲೂ. 'ಈ ಫೋಟೊ ತೆಗೆದ ಸಂದರ್ಭಜ್ಞಾಪಕ ಇದೆಯೇ,' ಎಂದು ಕೇಳಿದಳು.

ನಾನು, 'ಇದು ನಾನು ತೆಗೆದದ್ದೆ?' ಎಂದೆ. ಲೀಲೂ, 'ಹೌದು. ಆ ದಿನ ನಾವೆಲ್ಲ ಲಾಲ್‌ಬಾಗಿ-ಗೆ ಪಿಕ್ನಿಕ್‌ಗೆ ಹೋಗಿದ್ದಾಗ ಮಧ್ಯೆ ಮಾತು ಹೆಚ್ಚು ಕಡಮೆಯಾಗಿ ಚಾಮು ತುಂಬ ಮುನಿಸಿಕೊಂಡ. ಆಮೇಲೆ ಅವನಿಗೆ ಸಮಾಧಾನ ಮಾಡುವುದಕ್ಕೆ ನೀವು ಫೋಟೋ ತೆಗೆಯುವ ಉಪಾಯ ಎತ್ತಿದಿ-ರಿ,' ಎಂತ ಜ್ಞಾಪಿಸಿದಳು.

ನಿಜ: ನನಗೆ ಜ್ಞಾಪಕ ಬಂತು. "ಹೌದು, ಆಹೊತ್ತು ಅವನ್ನ ಒಪ್ಪಿಸೋದೇ ಕಷ್ಟವಾಯಿತು. ಚೀ-ನೂ ತಪ್ಪು ಮಾತು ಆಡಿ ಅವನನ್ನ ರೇಗಿಸಿದ ಅಲ್ಲವೆ?"

"ಆಡಿದ ಮಾತು ತಪ್ಪಲ್ಲ. ಚಾಮೂಗೆ ಅದು ತಪ್ಪಾಯಿತು. ಇದು ಏಕೋ, ಯಾವನೂ ಗಂಡ ತನ್ನ ಹೆಂಡತಿ ವಿಷಯಕ್ಕೆ ಸಂಶಯದಿಂದಲೇ ನಡೆದುಕೊಳ್ಳುತ್ತಾನೆ, ಅಂತ ಮಾತು ಬಂತು. ಚೀನಿ, 'ಗಂಡನಾದವನು ಗಂಡು ನಾಯಿ, ಹೆಂಡತೀನ ಹೆಣ್ಣು ನಾಯಿ ಅಂತ ತಿಳೀತಾನೆ, ಗಂಡಹೆಂಡಿರ ಬಾಳು ನಾಯಿ ಬಾಳು' ಎಂದ. ಸರೂ ಮನೂ ನಕ್ಕರು. ಚಾಮೂಗೆ ತುಂಬ ಕೋಪ ಬಂತು. ಚೀನು ತನ್ನನ್ನ ಮನೂನ ಮನಸ್ಸಿನಲ್ಲಿಟ್ಟುಕೊಂಡು ಈ ಮಾತು ಆಡಿದ ಅಂತ ಅವನು ತಿಳಿದುಕೊಂಡ."

“ಆಯಿತಲ್ಲಾ, ಇನ್ನು ಈ ಕಣ್ಣಿನ ನೋಟ ಆ ಕಣ್ಣಿನ ನೋಟದ ಹಾಗಿದೆ ಅಂತ ನೀವು ಮೂವ-ರೂ ಈ ಮದುವೆ ಬೇಡಾ ಅಂತೀರಾ,” ಎಂದು ನಾನು ಕೇಳಿದೆ.

“ಸದ್ಯಕ್ಕಿದು ಚಾಮೂಗೆ ಒಪ್ಪುತ್ತಿರಲಿಲ್ಲ ಅಂತ ಮನು ತೋಚಿಕೊಂಡಿದಾಳೆ.”

ನಾನು: “ಚೀನೂ ಮನೆಗೆ ಸರೂ ಹೆಣ್ಣು ಬೆಕ್ಕಾಗಿ ಬಂದು ಅವನನ್ನು ಒಂಟಿಯಾಗಿರು ಅಂತ ಮಿಯಾವ್ ಅನ್ನಲಿಲ್ಲವಲ್ಲ.”

ಲೀಲೂ: “ಸರೂ ಹೆಣ್ಣು ಬೆಕ್ಕಾಗಿ ಬಂದರೆ ಚೀನೂನ ತಿರಿಗೆ ಮದುವೆ ಆಗು ಎನ್ನುತಾಳೆ.”

ನಾನು: “ಅಲ್ಲ! ನೀವು ಹೆಂಗಸರು ಬಹು ಉದಾರಿಗಳು!”

ಲೀಲು: “ಗಂಡನಾದವನು ತನ್ನ ಯೋಚನೇನೇ ಮಾಡಿಕೊಂಡರೆ ಹೆಂಡತಿಯಾದರೂ ಗಂ-ಡನ ಯೋಚನೆ ಮಾಡಬೇಕಲ್ಲ!”

“ಹಾಗಾದರೆ ನೀವು ಹೆಂಗಸರು ಚಾಮೂನೆ ಭೈರೂ ಆಗಿ ಬಂದಿದಾನೆ ಅಂತೀರಿ?”

“ಈ ಮಾತಿಗೆ.”

“ಚೆನ್ನಾಯಿತು. ಹಾಗಾದರೆ ಇವೊತ್ತು ಬೆಳಗ್ಗೆ ನಿನ್ನ ತೊಡೆಯ ಮೇಲೆ ಸಮಾಧಾನವಾಗಿ ತಲೆ ಇಟ್ಟುಕೊಂಡು ಮಲಗಿದ್ದದ್ದು ಚಾಮೂ ಅನ್ನು.”

“ಗಂಡಸರು ಇಂಥ ಮಾತೇ ಆಡಬೇಕು.”

“ಗಂಡಸರು ಆಡುವುದು ತಪ್ಪು. ಹೆಂಗಸರು ಹೀಗೆ ಮಾಡಬಹುದಲ್ಲ!”

“ಮಾಡದೆ ಗತಿಯೇನು? ನಾಯಾದರೂ ಅದೇನು ನನ್ನ ಕಾಪಾಡಿಕೋ ಅಂದರೆ ಕಾಪಾಡದೆ ಏನು ಮಾಡೋದು?”

“ಇದೇನು ಲೀಲೂ. ನೀವೆಲ್ಲ ನಿಜವಾಗಿ ಚಾಮು ನಾಯಾಗಿ ಹುಟ್ಟಿ ಬಂದಿದಾನೆ ಅಂತ ತಿಳಿದಿ-ದೀರೋ?”

“ಇದು ಬೇರೆ ಯಾರ ಮಾತೂ ಅಲ್ಲ; ಜನ್ಮದ ಮಾತು, ನಂಬಿಕೆ ಮಾತು ಕೂಡ ಅಲ್ಲ. ಮನು ಮನಸ್ಸಿಗೆ ಈ ಮದುವೆ ಅನ್ನೋದು ಏನಂತನ್ನಿಸುತ್ತಾ ಇದೆ ಅಷ್ಟರದೆ ಮಾತು. ಈಗ ಅವಳಿಗೆ ಅದು ಬೇಡ ಅನ್ನಿಸುತ್ತಾ ಇದೆ.”

“ಯಾಕೆ ಅಂತ?”

“ಗಂಡನಾಗಿದ್ದವನ ಪ್ರೀತಿಯ ನೆನಪು ಸದ್ಯಕ್ಕೆ ಬೇರೆ ಯೋಚನೆ ಬೇಡ ಅಂತ ಮಾಡಿದೆ.”

“ಇದ್ದಷ್ಟು ದಿನ ಪ್ರಾಣ ಹಿಂಡಿ ಸತ್ತ ಮೇಲೆ ಕಾಡುವ ಈ ನೆನಪನ್ನೇ ನೀನು ಪ್ರೀತಿ ಅಂತೀಯೋ?”

“ಪ್ರೀತಿ ಅಲ್ಲದೇ ಇದ್ದರೆ ಪ್ರಾಣ ಯಾಕೆ ಹಿಂಡತಾರೆ, ಜೀವ ಯಾಕೆ ಕಾಡತಾರೆ. ಸಂತೋಷ ಪಡಿಸೋದೂ ಪ್ರೀತೀನೆ, ಇದನ್ನು ಮಾಡೋದೂ ಪ್ರೀತೀನೆ. ಅದು ಹೊಟ್ಟೆ ಒಳಕ್ಕೆ ಹೋದ ಅನ್ನ. ಇದು ಗಂಟಲಲ್ಲಿ ಸಿಕ್ಕಿಕೊಂಡದ್ದು.”

‘ಓ!’

ನಾನು ಯೋಚನೆ ಮಾಡಿದೆ. ಲೀಲೂ ಮಾತು ನಿಜ ಎನ್ನಿಸಿತು. ಆದರೂ ಮನು ಚೀನು ಒಂಟಿ-ಯಾಗಿ ಬಾಳುವುದು ಬೇಡ ಎನ್ನಿಸಿತು.

ನಾನು ಹೇಳಿದೆ: “ಭೈರೂನ ಇಲ್ಲಿ ತಂದುಬಿಡು.”

ಲೀಲು ಹೇಳಿದಳು: “ನಾನು ಆಗಲೇ ಈ ಯೋಚನೆ ಮಾಡಿದೆ. ಮನೂ ಬೇಡ ಅಂತಾಳೆ. ಯಾಕೆ ಅಂತ ಕೇಳಿದೆ, ನೀವು ಗಂಡ ಹೆಂಡತಿ ಸಂತೋಷವಾಗಿ ಬಾಳಿ ಎಂದಳು.”

ನಾನು, “ಹಾಗಂದರೆ? ಭೈರೂನ ಇಲ್ಲಿಗೆ ತಂದರೆ **ನೀನು** ಚಾಮೂ ಒಂದಿಗೆ ಸಲಿಗೆಯಾಗಿದ್ದೀ

ಅಂತ **ನಾ** ಬೇಸರ ಮಾಡಿಕೊಳ್ಳುತೇನೆ ಅಂತಲೇ?" ಎಂದೆ.

"ಅಲ್ಲ ಅಲ್ಲ. ನಿಮಗೆ ಅಂಥ ಯೋಚನೆ ಇಲ್ಲ ಅಂತ ಮನು ಬಲ್ಲಳು. ಆದರೆ ತನ್ನ ಮನಸ್ಸಿಗೆ ಸಮಾಧಾನ ಇಲ್ಲದೆ ಹೋಗುತ್ತೆ - ಅಂತ ಅವಳ ಶಂಕೆ."

ನಾನು, "ಅಂತೂ ನಾನು ಮೇಲಿನ ಕೋರ್ಟ್ಗೆ ಅಂತ ಅಪೀಲು ಮಾಡಿದ್ದಕ್ಕೆ ಅವರ ತೀರ್ಪನ್ನೇ ನೀನು ಖಾಯಂ ಮಾಡಿಬಿಟ್ಟೆ," ಎಂದೆ.

ಲೀಲೂ, "ಸದ್ಯಕ್ಕೆ ಹೌದು," ಎಂದು ಹೇಳಿ ತನ್ನ ಯಾವುದೊ ಕೆಲಸಕ್ಕೆ ಎಂತ ತಿರುಗಿದಳು.

ಬೇರೆ ಏನೂ ತೋರದೆ ನಾನು ಸುಮ್ಮನಾದೆ.

ಆಂಗ್ಲ ನೌಕಾ ಕ್ಯಾಪ್ಟನ್

೧

ಮಹಾಯುದ್ಧ ನಡೆಯುತ್ತಿದ್ದ ವರ್ಷಗಳಲ್ಲಿ ಮಧ್ಯೆ ಒಂದು ದಿನ ನಾನು ಪುಣೆಗೆ ಹೋಗಲು ಸ್ವಲ್ಪ ದೂರದ ಒಂದು ರೈಲ್ವೆ ಸ್ಟೇಷನ್ನಿನಲ್ಲಿ ರೈಲು ಹಿಡಿಯಬೇಕಾಯಿತು. ಆಗ ನಾನು ರಕ್ಷಣ ಶಾಖೆಯ ವ್ಯಯ ಪರಿಶೀಲಕ ಭಾಗದಲ್ಲಿ ಕೆಲಸದಲ್ಲಿದ್ದೆನು. ಒಳದೇಶದ ಒಂದು ಪಾಳೆಯದ ಲೆಕ್ಕವನ್ನು ನೋಡಿ ಮುಗಿಸಿ ನನ್ನ ಕಚೇರಿಗೆ ಹಿಂದಿರುಗಿ ಹೊರಟಿದ್ದೆನು. ನಾನು ಸ್ಟೇಷನ್ ಸೇರುವ ವೇಳೆಗೆ ರೈಲು ಇನ್ನೇನು ಹೊರಡುವ ಸಮಯವಾಗಿದ್ದಿತು. ಯಾವುದೋ ಒಂದು ಗಾಡಿಯಲ್ಲಿ ಕುಳಿತುಕೊಳ್ಳದಿದ್ದರೆ ರೈಲು ತಪ್ಪಿಯೇ ಹೋಗಬಹುದು. ನಾನು ಅವಸರವಾಗಿ ಒಂದು ಕೂಪೆಯನ್ನು ಹೊಕ್ಕೆನು.

ಕೂಪೆಯಲ್ಲಿ ಬೇರೆ ಪ್ರಯಾಣಿಕ ಒಬ್ಬ ಮಾತ್ರ ಇದ್ದನು. ಆತ ಒಬ್ಬ ಬಿಳಿಯ. ಆಣಿಗಳಿಂದ ನೇತು ಹಾಕಿದ್ದ ಅವನ ಅಂಗಿ ಟೋಪಿಯಿಂದ ಆತ ನೌಕಾದಳದ ಒಬ್ಬ ಅಧಿಕಾರಿ ಎನ್ನುವುದು ಕಂಡಿತು. ಲಾಂಛನಗಳಿಂದ ಆತ ಒಬ್ಬ ಕ್ಯಾಪ್ಟನ್ ಎನ್ನುವುದೂ ಕಾಣುತ್ತಿತ್ತು.

ಕ್ಯಾಪ್ಟನ್ ಟೀ ತೆಗೆದುಕೊಳ್ಳುತ್ತಿದ್ದನು. ಅವನ ಎರಡೂ ಕಡೆಗೆ ಪೀಠದ ಮೇಲೆ ಬಿಸ್ಕತ್ತು, ರೊಟ್ಟಿ, ಜಾಮ್, ಬೆಣ್ಣೆ ಮುಂತಾದ ಉಪಹಾರ ಪದಾರ್ಥಗಳು ಹರಡಿದ್ದವು. ಎದುರಿನ ಪುಟ್ಟ ಮೇಜಿನ ಮೇಲೆ ಪಿಂಗಾಣಿ ತಟ್ಟೆ ಎರಡು ಮೂರು, ಅಲ್ಲೇ ಒಂದು ವಿಸ್ಕಿ ಸೀಸೆ, ಒಂದು ಸೋಡಾ ಸೀಸೆ ಇದ್ದವು. ಸೀಸೆಗಳನ್ನು ತೆರೆದು ಅವುಗಳಿಂದ ವಿಸ್ಕಿಯನ್ನೂ ಸೋಡಾವನ್ನೂ ಬಳಸಿದ್ದದ್ದು ಕಾಣುತ್ತಿತ್ತು.

ನಾನು ಹಠಾತ್ತಾಗಿ ಕೂಪೆಯೊಳಗೆ ಹೊಕ್ಕಾಗ ಕ್ಯಾಪ್ಟನ್ ನನ್ನ ಕಡೆ ನೋಡಿದನು; ಸ್ವಲ್ಪ ಕಕಮಕನಾದಂತೆ ಕಂಡನು. ಒಂದೇ ಕ್ಷಣ ತಡೆದು ಅವನು ತನ್ನ ಎಡಕ್ಕಿದ್ದ ಪೊಟ್ಟಣಗಳನ್ನು ತನ್ನ ಕಡೆಗೆ ಸೆಳೆದುಕೊಂಡು ನನಗೆ ಸ್ಥಳ ಮಾಡಿಕೊಟ್ಟು, 'ಕ್ಷಮಿಸಬೇಕು, ಸ್ವಾಮಿ. ನಾನು ಬಹಳ ಸ್ಥಳವನ್ನು ಆಕ್ರ-

ಮಿಸಿಕೊಂಡಿದ್ದೇನೆ, ತಮಗೆ ಅನನುಕೂಲ,' ಎಂದನು.

ನಾನು, 'ಅಂಥದೇನೂ ಇಲ್ಲ ಕ್ಯಾಪ್ಟನ್ ಸಾಹೇಬರೆ, ಈ ಸ್ಥಳ ನನಗೆ ಸಾಕು,' ಎಂದು ಹೇಳಿ ನಾನು ಹೊಕ್ಕ ಬಾಗಿಲ ಬಳಿಯ ಮೂಲೆಯಲ್ಲಿ ಪೀಠದ ಮೇಲೆ ಕುಳಿತೆನು.

ಕ್ಷಣದಲ್ಲಿ ರೈಲು ಹೊರಟಿತು; ಸ್ವಲ್ಪದರಲ್ಲೇ ವಾಡಿಕೆಯ ವೇಗದಲ್ಲಿ ಓಡತೊಡಗಿತು. ನಾನು ಕಿ-ಟಕಿಯಿಂದ ಹೊರಗಡೆ ನೋಡುತ್ತಾ ನನ್ನ ಯೋಚನೆಯನ್ನು ನಾನು ಮಾಡುತ್ತಾ ಕುಳಿತೆನು.

ಕ್ಯಾಪ್ಟನ್ ಕುಳಿತಿದ್ದ ಕಡೆಗೆ ಮುಖಮಾಡದೆ ಇದ್ದರೂ ನನಗೆ ಅವನು ನನ್ನ ಕಡೆಗೆ ಒಂದೆರಡು ಸಲ ಕುತೂಹಲದಿಂದ ನೋಡಿದ್ದು ತಿಳಿಯಿತು. ಯುದ್ಧಕ್ಕೆ ಪೂರ್ವದಲ್ಲಿ ಆಂಗ್ಲ ಜನ ಎಂದರೆ ಈತ ಒಬ್ಬ ಆಂಗ್ಲ ಎಂದು ನನ್ನ ತಿಳಿವಳಿಕೆ ಈತನ ಜನ ಒಬ್ಬ ಭಾರತೀಯ ತಮ್ಮೊಂದಿಗೆ ಒಂದೇ ಗಾಡಿ-ಯಲ್ಲಿ ಕುಳಿತರೆ ಆಂಗ್ಲನ ಮರ್ಯಾದೆಗೆ ಕುಂದು ಎಂದು ಎಣಿಸುತ್ತಿದ್ದರು. ಈತನ ನೋಟದಲ್ಲಿ ಅಸಹನೆಯ ಲಕ್ಷಣವಿರಲಿಲ್ಲ; ನಿಜವಾಗಿ ವಿಶ್ವಾಸವೇ ಕಾಣುತ್ತಿತ್ತು.

ನಾನು, 'ನಮ್ಮ ಆಂಗ್ಲ ಪ್ರಭುಗಳ ನಡತೆಯಲ್ಲಿ ಮಹಾ ಸಂಗ್ರಾಮ ಇಷ್ಟು ಮಾರ್ಪಾಡನ್ನಂತೂ ಮಾಡಿದೆ,' ಎಂದು ಯೋಚಿಸಿಕೊಂಡೆನು. ಆದರೂ ನನಗೆ ನಾನೇ ಮಾತನಾಡಿಸಿ ಇವನೊಂದಿಗೆ ಪರಿಚಯ ಬೆಳೆಸುವ ಅಪೇಕ್ಷೆ ಆಗಲಿಲ್ಲ.

ಕೆಲವು ನಿಮಿಷಗಳ ನಂತರ ಕ್ಯಾಪ್ಟನ್ ಮಹಾಶಯ ವಿಸ್ಕಿ ಸೀಸೆಯ ಬಿರುಡೆಯನ್ನು ತೆಗೆದು ತನ್ನ ಲೋಟದೊಳಕ್ಕೆ ಸ್ವಲ್ಪ ವಿಸ್ಕಿ ಸುರಿದು ಅದಕ್ಕೆ ಸ್ವಲ್ಪ ಸೋಡಾ ಸೇರಿಸಿದನು. ತನ್ನ ಪಾನೀಯವನ್ನು ಸಿದ್ಧ ಮಾಡಿಕೊಳ್ಳುತ್ತ ಮಧ್ಯೆ, 'ನಾನು ಸ್ವಲ್ಪ ಕುಡಿಯುತ್ತೇನೆ, ಸ್ವಾಮಿ, ತಮಗೇನೂ ಬೇಸರವಿಲ್ಲವಷ್ಟೆ? ಉಪಾಹಾರದ ಹೊತ್ತಾದರೂ ಇದನ್ನು ಊಟದಂತೆಯೇ ನಡೆಸುತ್ತಿದ್ದೇನೆ,' ಎಂದನು.

ನಾನು, 'ಚಿಂತೆ ಬೇಡಿ ಕ್ಯಾಪ್ಟನ್ ಸಾಹೇಬರೆ. ತಾವು ಇದು ಏನೂ ಮಾಡಿದರೂ ನನಗೆ ಅಡ್ಡಿ-ಯಿಲ್ಲ,' ಎಂದೆನು.

'ತಾವು ಎಂಥ ಸಜ್ಜನರು, ಸ್ವಾಮಿ! ಯುದ್ಧದಲ್ಲಿ ತೊಡಗಿರುವ ನಮ್ಮಂಥ ಜನ ಸಮಯ ದೊರೆ-

ತಾಗ ಸ್ವಲ್ಪ ಸುಖಪಡಲು ಅವಕಾಶವಿರಬೇಕು ಎನ್ನುವುದು ತಮಗೆ ತಿಳಿದಿರುವುದು ಕಾಣುತ್ತದೆ.'

'ಹೌದು. ಆ ಮಾತಿಗೆ ನನ್ನ ಒಪ್ಪಿಗೆ.'

'ಮನ್ನಿಸಬೇಕು ಸ್ವಾಮಿ. ನೀವು ನನ್ನನ್ನು ನೇರವಾಗಿ ಕ್ಯಾಪ್ಟನ್ ಎಂದು ಕರೆದುಬಿಟ್ಟರಿ, ಎಂದ-ಮೇಲೆ ನಮ್ಮ ಅಧಿಕಾರಗಳ ಲಾಂಛನಗಳನ್ನು ತಾವು ಗುರುತಿಸಬಲ್ಲಿರಿ ಎಂದಾಯಿತು.'

'ಹೌದು ನನಗೆ ಅವುಗಳ ಗುರುತಿದೆ. ನಾನು ಸೈನ್ಯಗಳ ಶಾಖೆಯ ವ್ಯಯಪರಿಶೀಲಕ ಅಧಿಕಾರ-ದಲ್ಲಿದ್ದೇನೆ. ಉಗ್ರಾಣದಲ್ಲಿ ಈ ಲಾಂಛನಗಳು ಇರುತ್ತವೆ, ನಾನು ಇವನ್ನು ಬಲ್ಲೆನು.'

'ನಾನೂ ತಮ್ಮ ದೇಶ ತಮ್ಮ ಜನವನ್ನು ಕುರಿತು ಕೆಲವು ಸಂಗತಿಯನ್ನು ಬಲ್ಲೆನು ಸ್ವಾಮಿ. ಎಂದಿ-ನಿಂದಲೂ ನನಗೆ ಭಾರತೀಯರೆಂದರೆ ಪ್ರೀತಿ. ನೀವು ತುಂಬ ಶಕ್ತರಾದ ಜನ. ನಿಮ್ಮ ಯೋಗ್ಯತೆಯ-ನ್ನು ಕುರಿತು ನನಗೆ ತುಂಬ ಗೌರವ.'

'ಸಂತೋಷ, ಕ್ಯಾಪ್ಟನ್ ಸಾಹೇಬರೆ.'

'ಹೌದು ಸ್ವಾಮಿ, ಒಂದು ಮಾತು ಹೇಳುವುದಾದರೆ ಇದನ್ನು ನಾನು ನೋಡಿರುವಷ್ಟರಿಂದ ಈಗ ದೃಢವಾಗಿ ಹೇಳಿಯೇನು: ನಿಮ್ಮ ಜನ ದೇವರು ಸೃಷ್ಟಿಸಿದ ಬೇರೆ ಯಾವ ಜನಕ್ಕಿಂತಲೂ ಬುದ್ಧಿಯಲ್ಲಿ ಕಡಮೆ ಅಲ್ಲ.'

ಈ ವೇಳೆಗೆ ಕ್ಯಾಪ್ಟನ್ ತನ್ನ ಉಪಾಹಾರವನ್ನು ಮುಗಿಸಿದ್ದನು. ಪಕ್ಕದಲ್ಲಿದ್ದ ಪೊಟ್ಟಣಗಳನ್ನು ತೆಗೆ-ದು ಒಂದು ಬೆತ್ತದ ಪೆಟ್ಟಿಗೆಯೊಳಕ್ಕೆ ಹಾಕಿ ಲೋಟದಲ್ಲಿ ಮತ್ತಷ್ಟು ವಿಸ್ಕಿ ಸೋಡಾ ಸುರಿದುಕೊಂಡು ಆ ಸೀಸೆಗಳನ್ನು ಮುಚ್ಚಿ ಪುಟ್ಟಿಯೊಳಗಿಟ್ಟನು; ಪೀಠದ ತನ್ನ ಕಡೆಯ ಮೂಲೆಗೆ ಒರಗಿ ಕುಳಿತನು.

'ನಮ್ಮ ಜನ ಎಂದು ನೀವು ಹೇಳುತ್ತಿರುವುದು ಯಾರನ್ನು?' ಎಂದು ನಾನು ಕೇಳಿದೆನು.

'ಪಟವರ್ಧನರು, ಅವರ ಜೊತೆಯ ಜನರು, ಸ್ವಾಮಿ.'

‘ಓ ನೀವು ಪಟವರ್ಧನರನ್ನು ಗುರುತು ಹಿಡಿಯಬಲ್ಲಿರಾ? ನಾನು ಒಬ್ಬ ಪಟವರ್ಧನ ಎಂದು ತಿಳಿದಿದ್ದೀರಲ್ಲ?’

‘ಪಟವರ್ಧನ ಅಲ್ಲದಿದ್ದರೆ ಅವರ ಅಣ್ಣತಮ್ಮ ಸ್ವಾಮಿ. ನಿಮ್ಮ ಹಣೆಯ ಗುರುತು, ನಿಮ್ಮ ಪಗಡಿ, ಇವು ಸಾಕು ನಿಮ್ಮ ಗುರುತು ತೋರಿಸುವುದಕ್ಕೆ.’

‘ಹೌದು ನಿಮ್ಮ ತಿಳಿವಳಿಕೆ ಸರಿ. ನಾನು ಪಟವರ್ಧನ ವಂಶಿಕನಲ್ಲ; ಆದರೆ ನೀವೆನ್ನುವಂತೆ ಅವರ ಜೊತೆಯ ಒಂದು ಗುಂಪಿನವನು. ಆದರೆ ಈ ಮುಖದ ಗುರುತು ಈ ಪಗಡಿಯನ್ನು ಈಗ ಮಹಾರಾಷ್ಟ್ರದ ಜನರಲ್ಲಿ ತಕ್ಕಷ್ಟು ಪುಣ್ಯವಂತರಾದ ಅನೇಕರು ಬಳಸುತ್ತಾರೆ.’

‘ಸರಿ; ಆದರೆ ತಾವು ಬರಿಯ ಪುಣ್ಯವಂತ ಮಹಾರಾಷ್ಟ್ರ ಮಹನೀಯರಲ್ಲ; ಬ್ರಾಹ್ಮಣರು.’

‘ಸರಿ; ಆದರೆ ಅದು ನಿಮಗೆ ತಿಳಿಯಿತು ಹೇಗೆ?’

‘ಹೇಗೇ ಇರಲಿ; ನಾನು ಅದನ್ನು ಬಲ್ಲೆ; ನನಗೆ ಅದು ತಿಳಿಯುತ್ತದೆ.’

ಕ್ಯಾಪ್ಟನ್ ಸಾಹೇಬ ಈ ವೇಳೆಗೆ ತನ್ನ ವಿಸ್ಕಿಯನ್ನು ಕುಡಿದು ಮುಗಿಸಿದ್ದನು. ಈಗ ನನ್ನನ್ನು ಕುರಿತು, ‘ಮನ್ನಿಸಬೇಕು ಸ್ವಾಮಿ. ನಾನು ಹೊಗೆ ಹಿಡಿದರೆ ತಮಗೆ ಬೇಸರವಿಲ್ಲವಷ್ಟೆ,’ ಎಂದು ಕೇಳಿದನು.

ನಾನು, ‘ಖಂಡಿತವಾಗಿ ಇಲ್ಲ ಕ್ಯಾಪ್ಟನ್ ಸಾಹೇಬರೆ, ಅವಶ್ಯವಾಗಿ ಹಿಡಿಯಿರಿ,’ ಎಂದು ಉತ್ತರ ಕೊಟ್ಟೆನು.

‘ಉಪಕಾರವಾಯಿತು ಸ್ವಾಮಿ. ನೀವು ಹೊಗೆ ಹಿಡಿಯುವುದಿಲ್ಲವಾದರೂ ಬೇರೆಯವರು ಹಿಡಿಯುವುದಕ್ಕೆ ಸಮ್ಮತಿಸುವುದು ದೊಡ್ಡ ಸೌಜನ್ಯ.’

‘ಅದು ಅಂಥ ಸೌಜನ್ಯವೆಂದು ನಾನು ಹೇಳಲಾರೆ. ನಮ್ಮ ಪ್ರಭುಗಳು ಯಾವುದನ್ನು ಮಾಡಿದರೂ ನಾವು ಅದಕ್ಕೆ ಅಡ್ಡಿ ಹೇಳುವಂತಿಲ್ಲ. ಈಗ ನಮಗೆ ಇದೆಲ್ಲ ವಾಡಿಕೆಯಾಗಿ ಹೋಗಿದೆ. ಏಕೆ, ನಾವೇ ಅನೇಕರು ಇದನ್ನೆಲ್ಲ ಮಾಡುತ್ತೇವೆ.’

‘ಅದು ನಿಜ ಸ್ವಾಮಿ, ನಿಮ್ಮ ಜನ ಹೀಗೆ ಮಾಡುವುದು ಅನ್ಯಾಯ. ಸಾವಿರ ಹೇಳಿದರೂ ಜೀವನದಲ್ಲಿ ಗಾಂಧಿ ಮಾರ್ಗವೇ ಉನ್ನತ ಮಾರ್ಗ.’

‘ಹಾಗೆನ್ನುತ್ತೀರಾ, ಕ್ಯಾಪ್ಟನ್? ಎಂದರೆ ನಾನು ಒಬ್ಬ ಗಾಂಧಿ ಮನುಷ್ಯನಲ್ಲ ಎನ್ನುವುದು ನಿಮಗೆ ಕಾಣುತ್ತದೆಯಷ್ಟೆ.’

‘ಅದು ಸರಿ, ಸ್ವಾಮಿ, ನೀವು ಸರಕಾರದೊಂದಿಗೆ ಸಹಕರಿಸುತ್ತಿದೀರಿ. ಆದರೆ ನಾನು ಗಾಂಧಿ-ಮಾರ್ಗ ಎಂದದ್ದು ಭಾರತೀಯರ ಅತ್ಯುತ್ತಮ ಜೀವನ ಕ್ರಮವನ್ನು. ಇದಕ್ಕಿಂತ ಒಳ್ಳೆಯ ಕ್ರಮ ಎಲ್ಲಿಯೂ ಬೆಳೆದಿಲ್ಲ ಎನ್ನುವುದು ನನ್ನ ತಿಳಿವಳಿಕೆ.’

‘ನಿಮ್ಮ ಈ ಮಾತಿನಿಂದ ನನಗೆ ತುಂಬ ಹೆಮ್ಮೆ ಬರಬೇಕು. ಆದರೆ ನೀವು ಭಾರತ ಪಕ್ಷಪಾತಿಯಾದ ಆಂಗ್ಲ; ಆಂಗ್ಲನೆಂದೇ ಹೇಳುವಂತಿಲ್ಲ, ಸ್ಕಾಟ್ಸ್ ಇರಬಹುದು, ಐರಿಷ್ ಇರಬಹುದು.’

‘ಇಲ್ಲ ಸ್ವಾಮಿ, ನಾನು ಆಂಗ್ಲನೇ.’

‘ಹೌದು, ನಿಮ್ಮ ಮಾತಿನರೀತಿಯಿಂದ ನಾನು ಹಾಗೆಂದೇ ಗ್ರಹಿಸಿದೆ. ನಿಮ್ಮಲ್ಲಿ ಅನೇಕ ಜನ, ನಿಮಗೆ ಭರತವರ್ಷದ ಒಳ್ಳೆಯ ಗುಣಗಳನ್ನು ಗುರುತಿಸುವ ದೃಷ್ಟಿಯಿದೆ ಎನ್ನುವುದನ್ನು ತೋರಿಸಿದ್ದೀರಿ.’

‘ಹೌದು ಸ್ವಾಮಿ. ನಾನು ಅಂಥವರಲ್ಲಿ ಸೇರಿದವನು. ಭಾರತೀಯರನ್ನು ಎಷ್ಟು ಎಷ್ಟು ನೋಡುತ್ತ ಬಂದಿದ್ದೇನೆ ಅಷ್ಟು ಅಷ್ಟು ನನಗೆ ಅವರ ವಿಷಯದಲ್ಲಿ ಪ್ರೀತಿ ಗೌರವ ಹೆಚ್ಚುತ್ತ ಬಂದಿವೆ.’

‘ನೌಕಾಶಾಖೆಯ ಕ್ಯಾಪ್ಟನ್ ಅಧಿಕಾರದಲ್ಲಿರುವಾತನಿಗೆ ನಮ್ಮ ಜನರ ಬಾಳಿನ ಒಳಗಿನ ಭಾಗವನ್ನು ಕಾಣುವ ಅವಕಾಶ ಬಹಳ ಇರುವುದಿಲ್ಲ.’

‘ನಿಮಗೆ ಹಾಗೆನಿಸುತ್ತದೆಯೇ ಸ್ವಾಮಿ ? ನೋಡಿ, ನನ್ನ ಹಡಗಿನಲ್ಲಿ ನನ್ನ ಕೈ ಕೆಳಗೆ ನಿಮ್ಮ ದೇಶದ ಹುಡುಗರು ಹತ್ತು ಜನ ಇದ್ದರು. ಈ ಭೂಮಿ ಎಂದೇ ಆಗಲಿ ಅದಕ್ಕಿಂತ ಒಳ್ಳೆಯ ಹತ್ತು ಹುಡುಗರ-

ನ್ನು ಪಡೆದಿರಲಾರದು. ಅವರ ವಿಷಯವನ್ನು ನಾನು ಬಲ್ಲೆ. ಆ ತಿಳಿವಿನ ಆಧಾರದಮೇಲೆ ಹೇಳು-ತ್ತೇನೆ. ಈ ಹತ್ತು ಹುಡುಗರಿಗಿಂತ ಒಳ್ಳೆಯ ಹತ್ತು ಹುಡುಗರನ್ನು ಯಾವುದೇ ದೇಶ ಎಂದೇ ಆಗಲಿ ಪಡೆದಿರಲಾರದು.'

'ನಿಮ್ಮ ಪಾಲಿಗೆ ಬಂದ ಅನುಭವ ಒಳ್ಳಿತು ಎನ್ನಬೇಕು ಕ್ಯಾಪ್ಟನ್. ಇದು ಯಾವುದು ನಿಮ್ಮ ಹಡ-ಗು?'

'ಹಡಗು ಈಗ ಇಲ್ಲ ಸ್ವಾಮಿ ನಾನು ಪುಣ್ಯವಶಾತ್ ಜೀವಂತನಾಗಿ ದಡಕ್ಕೆ ಬಿದ್ದಂತೆ ನನ್ನ ಆ ಹು-ಡುಗರೂ ಬಿದ್ದಿರಲಿ ಎಂದು ನನ್ನ ಆಸೆ. ನನ್ನ ಹಡಗಿನ ಹೆಸರು... ವಾರದ ಹಿಂದೆ ನಮ್ಮ ಜಪಾನೀ ಶತ್ರುಗಳು ಅದನ್ನು ಬಾಂಬಿನಿಂದ ಸುಟ್ಟು ನುಚ್ಚು ನುರಿ ಮಾಡಿದರು. ಪತ್ರಿಕೆಯಲ್ಲಿ ತಾವು ಈ ಸಂ-ಗತಿಯನ್ನು ಓದಿರಬೇಕಲ್ಲವೇ?'

'ಓಹೋ! ನೀವು ಆ ಹಡಗಿನ ಕ್ಯಾಪ್ಟನ್ ಸಾಹೇಬರೇ? ಆ ಹಡಗು ನಮ್ಮ ತರುಣ ಅಧಿಕಾರಿಗ-ಳನ್ನು ತರಪೇತು ಮಾಡುತ್ತಿದ್ದ ಹಡಗು ಅಲ್ಲವೆ? ಹಗೆಯಾದವನು ಸುಟ್ಟನೆಂದು ಓದಿದಾಗ ನಮಗೆ ತುಂಬ ಅಸಹ್ಯವಾಯಿತು. ಹಡಗಿನಲ್ಲಿದ್ದ ಜನವೆಲ್ಲ ತೀರಿಹೋದರೆಂದು ಕಾಣುತ್ತದೆ ಎಂದು ಪತ್ರಿಕೆ-ಯಲ್ಲಿ ವರದಿಯಾಗಿತ್ತಲ್ಲಾ?'

'ತೀರಿದ್ದದು ನಿಜ ಸ್ವಾಮಿ; ತೀರಿದವರಲ್ಲಿ ಒಬ್ಬ ನಾನು ಸಾವಿನಿಂದ ಹಿಂತಿರುಗಿ ಬಂದಿದ್ದೇನೆ. ನನ್ನಂತೆ ಇನ್ನೂ ಕೆಲವರಾದರೂ ಹಿಂತಿರುಗಿ ಬಂದಿರಲಿ ಎಂದು ಬಯಸುತ್ತಿದೇನೆ.'

'ನೀವಂತೂ ಜೀವದಿಂದ ಉಳಿದಿದ್ದೀರಲ್ಲಾ ಕ್ಯಾಪ್ಟನ್, ಅದೇ ಸಂತೋಷ.'

'ನನ್ನ ಹುಡುಗರ ಸುದ್ದಿ ಮುಟ್ಟುವವರೆಗೆ ನನಗೆ ಸಂತೋಷ ಇಲ್ಲ ಸ್ವಾಮಿ. ನಾನು ದಡಮುಟ್ಟಿದ ರೇವಿನ ನಮ್ಮ ಕಚೇರಿಯಲ್ಲಿ ಹೇಳಿ ಬಂದಿದ್ದೇನೆ. ನನ್ನ ಹಡಗಿನ ಜನ ಎಲ್ಲಿ ದಡ ಮುಟ್ಟಿದ ಸುದ್ದಿ ಬಂದರೂ ನನಗೆ ಒಡನೆ ತಿಳಿಸಬೇಕು ಎಂದು. ಸುದ್ದಿ ಮುಟ್ಟುವುದರಲ್ಲಿ ತಡವಾಗದೆ ಇರಲಿ ಎಂ-ದು ನಾನು ರೇವಿನ ಊರಿನಲ್ಲೇ ನಿಲ್ಲುವ ಯೋಚನೆ ಮಾಡಿದೆನು. ಆದರೆ ನಾನು ನೆಲವನ್ನು ಬಿಟ್ಟು

ಎರಡು ವರ್ಷಕ್ಕೂ ಹೆಚ್ಚು ನೀರಮೇಲೆ ಇದ್ದದ್ದಾಗಿದೆ. ನನ್ನ ಹೆಂಡತಿಯನ್ನು ನೋಡಬೇಕೆನ್ನಿಸಿತು; ಹೊರಟು ಬಂದೆನು.'

'ಕ್ಯಾಪ್ಟನ್ ಪತ್ನಿ ಪುಣೆಯಲ್ಲಿದಾರೋ?'

'ಹೌದು ಸ್ವಾಮಿ, ನಮ್ಮಲ್ಲಿ ಅನೇಕ ಸಂಸಾರಗಳು ಈಗ ಇಲ್ಲಿಯ ಒಂದಲ್ಲ ಒಂದು ಕಂಟೋನ್ಮಂಟಿನಲ್ಲಿ ನೆಲೆ ಮಾಡಿಕೊಂಡಿವೆ. ಹೆಂಡತಿ ಈ ನಾಲ್ಕು ವರ್ಷ ಪುಣೆಯ ಕಂಟೋನ್ಮಂಟಿನಲ್ಲಿ ಇದ್ದಿದಾಳೆ.'

'ಪಾಪ, ಆ ಹೆಣ್ಮಗಳು ಈ ಎರಡು ವರ್ಷದ ನಂತರ ಆದರೂ ನಿಮ್ಮನ್ನು ಕಾಣಬಹುದು ಎನ್ನುವುದು ಸಂತೋಷದ ಸಂಗತಿ.'

'ಅದು ನಿಜ ಸ್ವಾಮಿ. ಒಬ್ಬರನ್ನೊಬ್ಬರು ಕಾಣುವುದು ನಮಗೊಂದು ಆನಂದ.'

'ಅಡ್ಡಿಯಿಲ್ಲದೆ.'

'ನನ್ನ ಹೆಂಡತಿ ತುಂಬ ಮಧುರಸ್ವಭಾವದವಳು. ಬಹು ಒಳ್ಳೆಯ ಸ್ತ್ರೀ ಸ್ವಾಮಿ. ಒಂದು ಸಲ ಅಲ್ಲ ಹತ್ತು ಸಲ ಅಲ್ಲ, ನಾನು ಹಡಗಿನ ನನ್ನ ಕೋಣೆಯಲ್ಲಿ ಹಾಸಿಗೆಯ ಮೇಲೆ ಮೈ ಚಾಚಿ ಸುಮ್ಮನೆ ಅವಳನ್ನೇ ನೆನೆದು ಹೊತ್ತು ಕಳೆದಿದ್ದೇನೆ.'

'ಅದು ಸಹಜವಾದ ಮಾತೇ.'

'ಹೌದು ಸ್ವಾಮಿ ತಾವು ಬಾಳನ್ನು ಬಲ್ಲಿರಿ. ಇದನ್ನು ಊಹಿಸಿಕೊಳ್ಳುವಿರಿ.'

'ಹಾಗೆಯೇ, ಕ್ಯಾಪ್ಟನ್, ಒಬ್ಬೊಂಟಿಯಾದ ಹೆಂಡತಿ ತನ್ನ ಗಂಡನನ್ನು ನೆನೆಯುತ್ತಾಳೆ. ಗಂಡ ನೆನೆಯುವುದು ನೂರಾರು ಸಲ. ಹೆಂಡತಿ ನೆನೆಯುವುದು ಇಷ್ಟು ಅಷ್ಟು ಸಲ ಅಲ್ಲ; ಸದಾಕಾಲ!'

'ಇರಬೇಕು ಸ್ವಾಮಿ, ಆದರೆ ಹೆಣ್ಣಿಗೆ ಈ ಕಷ್ಟ ಗಂಡಿಗೆ ಇರುವಷ್ಟು ಇರಲಾರದು ಅಲ್ಲ?'

‘ಹಾಗೆಂದರೆ?’

‘ದೇಹಗಳ ವ್ಯತ್ಯಾಸ ಆಸೆಯನ್ನು ತಡೆದುಕೊಳ್ಳುವ ಶಕ್ತಿಯಲ್ಲಿ ವ್ಯತ್ಯಾಸವನ್ನು ಮಾಡುತ್ತದಲ್ಲ? ಗಂಡಿಗೆ ಇದು ಬಹು ಕಷ್ಟ.’

‘ಸಂದೇಹವಿಲ್ಲ, ನಮ್ಮ ಪುರಾಣಗಳ ತುಂಬ ಆಸೆಗೆ ಸೋತ ಮುನಿಗಳ ಚರಿತ್ರೆಯೇ ಇದೆ. ಆದ-ರೆ ಹೆಣ್ಣಿಗಾದರೂ ಇದು ಕಷ್ಟದ ಸ್ಥಿತಿಯೇ. ಅವಳ ರೀತಿಯನ್ನು ಗಂಡು ಕಾಣ ಅಷ್ಟೆ!’

‘ಇದನ್ನೇ ಸ್ವಾಮಿ ನಾನು ತಮ್ಮ ಪ್ರಜ್ಞೆ ಎನ್ನುವುದು. ತಾವು ಹೀಗೆಂದು ಹೇಳಿದಮೇಲೆ ನನಗೂ ಇದು ನಿಜವಿರಬೇಕು ಎಂದು ಕಾಣುತ್ತಿದೆ. ಆದರೂ ನನ್ನ ಆಸೆ ನನ್ನನ್ನು ಭೂಗತ ಮಾಡಿದಂತೆ ಒಬ್ಬ ಹೆಣ್ಣಿನ ಆಸೆ ಅವಳನ್ನು ಭೂಗತ ಮಾಡೀತು ಎಂದು ನನಗೆ ತೋಚುವುದಿಲ್ಲ. ಮುಚ್ಚುಮರೆಯೇನು ಸ್ವಾಮಿ, ನಾನು ನಿಮ್ಮೆದುರು ಒಪ್ಪಿಕೊಳ್ಳುತ್ತೇನೆ. ಹಲವು ಸಲ ನನಗೆ ಆಸೆಯಿಂದ ಬಿಡುಗಡೆ ಪಡೆದ-ಲ್ಲದೆ ನಿಲ್ಲಲಾಗದೆ ಹೋಯಿತು. ನಾನು ಅದರಿಂದ ಬಿಡಿಸಿಕೊಂಡೆನು.’

‘ಹೇಗೆ ಎಂತ ನಾನು ಕೇಳುವುದಿಲ್ಲ.’

‘ಕೇಳುವ ಕಾರಣ ಇಲ್ಲ. ತಿಳಿದ ವಿಷಯ.’

‘ಸರಿ, ಇದು ನಿಮ್ಮ ರೀತಿ. ಬೇರೆಯ ರೀತಿಯ ಮನುಷ್ಯ ಅದನ್ನು ಬೇರೆಯ ರೀತಿಯಲ್ಲಿ ಪಡೆ-ಯುತ್ತಾನೆ.’

‘ನಿಜ ಸ್ವಾಮಿ, ಆದರೆ ನನ್ನ ತಿಳಿವಳಿಕೆ ಹೀಗೆ. ಈ ಕ್ರಮ ಅಕ್ರಮ. ಆ ಕ್ರಮ ಅಪರಾಧ. ಸೇವಕ-ನೊಬ್ಬನ ಸಂಗಡ ಸಲಿಗೆ ಬೆಳಸುವುದು ಸುಲಭವೆನ್ನಿಸಬಹುದು. ಆದರೆ ಅದರಿಂದ ಮೊಳೆಯುವ ಅನರ್ಥ ಬಹಳ. ಕೆಲಸಗಾರರ ಎದುರಲ್ಲಿ ಗೌರವ ಕೆಡುತ್ತದೆ. ಒಡೆಯನಾದವನು ಒಡೆತನ ನಡೆ-ಸುವಂತಿಲ್ಲ.’

‘ಅದು ತಪ್ಪಿದ್ದಲ್ಲ ಬಿಡಿ. ಆದರೆ ಮೇಲುಪಟ್ಟ ಅಧಿಕಾರಿಗಳೇ ತಮ್ಮತಮ್ಮಲ್ಲಿ ತಪ್ಪುವುದು ಉಂ-

ಟೆಂದು ಕೇಳಿದ್ದೇನೆ.'

'ಉಂಟು ಸ್ವಾಮಿ. ಎಂದರೆ ನನ್ನ ಹಡಗಿನಲ್ಲಿ ಅದು ಅಸಾಧ್ಯವಾಗಿತ್ತು. ನನಲ್ಲಿ ಕೆಲಸ ಕಲಿಯಲಿಕ್ಕೆ ಬಂದಿದ್ದ ತರುಣರು ಆ ಹತ್ತು ಜನ ಹತ್ತು ರತ್ನ. ಅವರು ಸ್ವತಂತ್ರರಾಗಿ ಬಾಳುವ ದಿನಕ್ಕೆ ಯಾವ ತಪ್ಪು ಸರಿಯನ್ನು ಮಾಡಬಹುದೊ ಅದು ಅವರ ಹಣೆಯ ಬರಹ. ನನ್ನ ಬಳಿ ಕಲಿಯುತ್ತಿರುವಾಗ ಅವರನ್ನು ತಪ್ಪು ದಾರಿಗೆ ಸೆಳೆಯುವುದು ಕಲಿಸುವವನ ಕೆಲಸವಲ್ಲ. ಹೀಗೆ ಮಾಡುವವನು ಗುರು ಎಂಬ ಪದಕ್ಕೆ ಹೊಸ ಅರ್ಥ ಕೊಟ್ಟಂತೆ ಆದೀತು.'

ಹೀಗೆಂದು ಕ್ಯಾಪ್ಟನ್ ಮಹಾಶಯ ಅಪಹಾಸ್ಯದಲ್ಲಿ ಸ್ವಲ್ಪ ನಕ್ಕನು. ನಾನು, 'ನಿಮ್ಮ ಸಂಕೋಚ ಉಚ್ಚ ಸ್ವಭಾವದ ಸಂಕೋಚ ಕ್ಯಾಪ್ಟನ್,' ಎಂದೆನು.

'ಈ ಒಳ್ಳೆಯ ಮಾತಿಗಾಗಿ ವಂದನೆ ಸ್ವಾಮಿ. ಆದರೆ ನೀವು ಆ ನನ್ನ ತರುಣರನ್ನು ನೋಡಿದ್ದರೆ ಈ ಸಂಕೋಚ ಎಷ್ಟು ಸಹಜ ಎನ್ನುವುದನ್ನು ಅರಿಯುತ್ತಿದ್ದಿರಿ.'

'ನಮ್ಮ ಜಪಾನೀ ಶತ್ರುಗಳು ಇಂಥ ಹಡಗೊಂದನ್ನು ಸುಟ್ಟರು ಹೇಗೆ? ಅಧಿಕಾರಿಗಳ ತರಬೇತಿಗೆಂದು ಇರಿಸಿರುವ ಹಡಗನ್ನು ಸುಡುವುದು ಬಳಕೆಗೆ ವಿರೋಧ ಅಲ್ಲವೆ? ನೀವು ಕಾದುವಂತಿರಲಿಲ್ಲ, ಅಲ್ಲ?'

'ನನ್ನ ಹಡಗು ತರಪೇತಿ ಹಡಗು ಹೌದು ಸ್ವಾಮಿ; ಆದರೆ ಇಂಥ ಹಡಗು ಬೇರೆ ಮೂರು ಇವೆ. ಭರತವರ್ಷದ ನೌಕಾದಳ ದೊಡ್ಡದಲ್ಲ. ಆದ್ದರಿಂದ ತರಪೇತಿ ಹಡಗಿನ ನಮ್ಮ ಪಾಲಿಗೂ ಅಷ್ಟು ಕೆಲಸ ಬಂತು. ನನ್ನ ಹಡಗಿನ ಪಾಲಿಗೆ ನಮ್ಮ ಸಮುದ್ರತೀರದ ಒಂದು ಭಾಗವನ್ನು ಕಾಯುವ ಹೊಣೆ ಬಿದ್ದಿತು. ಇದೂ ಕಲಿಯಬೇಕಾದ ಕೆಲಸವೇ. ಕೆಲಸ ಕಲಿಸುತ್ತ ಕೆಲಸ ಕಲಿಯುತ್ತ ನಾನೂ ಶಿಷ್ಯ ತರುಣರೂ ನಮ್ಮ ಹಡಗನ್ನು ನಮ್ಮ ದೇಶದ ನೀರಿನಲ್ಲಿ ಉತ್ತರದಿಂದ ದಕ್ಷಿಣಕ್ಕೆ ದಕ್ಷಿಣದಿಂದ ಉತ್ತರಕ್ಕೆ ಅಪಾಯವಿಲ್ಲದಾಗ ಬಹು ದರ್ಪದಿಂದಲೇ ನಡೆಸಿದೆವು; ದೊಡ್ಡ ಕೆಲಸ ಮಾಡುತ್ತಿದೇವೆ ಎಂದು ತಿಳಿದೆವು. ಒಂದುದಿನ ಬೆಳಗಾಗ ಕಣ್ಣು ತೆರೆಯುವ ಹೊತ್ತಿಗೆ ಒಂದು ಜಪಾನಿ ರಾಕ್ಷಸ ನೌಕೆ ಅಷ್ಟು ದೂರದಲ್ಲಿ ಸಮುದ್ರದಮೇಲೆ ಕಂಡಿತು. ನಾವು ತೀರವನ್ನು ಕಾಯುವುದು ಎನ್ನುವುದು ಇಂಥ ಒಂ-

ದು ರಾಕ್ಷಸ ನೌಕೆ ಎದುರುಬೀಳುವವರೆಗೆ ಮಾತ್ರ. ಅದು ಬಂದಿತೆಂದರೆ ನಮ್ಮ ಕೆಲಸ ಮುಗಿಯಿತು. ನಮ್ಮ ಹಡಗು ಅದರೊಂದಿಗೆ ಕಾದುವುದು ದಾಂಡಿಗನೊಂದಿಗೆ ಹಸುಳೆ ಕಾದುವುದೆಂಬಂತೆ. ಎಲಾ! ಈಗ ಏನು ಮಾಡುವುದು? ಎಂದು ನಾನು ಚಿಂತಿಸುತ್ತಾ ಇದ್ದೇನೆ. ಜಪಾನಿ ಕ್ಯಾಪ್ಟನ್, ಒಡನೆ ಸೋಲೊಪ್ಪಿ, ಇಲ್ಲ ನಿಮ್ಮಮೇಲೆ ಬಾಂಬೆಸಯುತ್ತೇವೆ, ಎಂದು ಸುದ್ದಿ ಕೊಟ್ಟನು. ಸೋಲನ್ನೊಪ್ಪುವುದೇ? ಪ್ರಾಯಶಃ ಅದೇ ಸರಿ. ಜೊತೆಗಿರುವ ಈ ಹತ್ತು ತರುಣರನ್ನು ಏಕೆ ಬಲಿಕೊಡಬೇಕು? ನಾನು ಒಬ್ಬನಾಗಿದ್ದರೆ ಶೌರ್‍ಯದ ಯೋಚನೆ ಮಾಡಬಹುದಾಗಿತ್ತು. ಈ ದೇಶ ತನ್ನ ಎಳೆಯರನ್ನು ನನ್ನ ಕೈಗೆ ಕೊಟ್ಟಿದೆ. ಇವರನ್ನು, ಆ ತಾಯಿಗಾಗಿ ಉಳಿಸುವುದು ನನ್ನ ಕೆಲಸ.'

'ನಿಮಗೆ ಹೀಗೆನ್ನಿಸಿತು?'

'ಹೌದು ಸ್ವಾಮಿ. ಆದ್ದರಿಂದ ನಾನು ಒಡನೆ ಕೊನೆಯ ಉತ್ತರ ಕೊಡಲಿಲ್ಲ. ಯೋಚಿಸುವುದಕ್ಕೆ ಸ್ವಲ್ಪ ಹೊತ್ತು ಕೊಡಿ, ಉತ್ತರ ಕೊಡುತ್ತೇನೆ, ಎಂದೆನು. ನನ್ನ ತರುಣರೊಂದಿಗೆ ಸಮಾಲೋಚನೆ ನಡೆಸಿದೆನು.'

'ಸಮಾಲೋಚನೆ ನಡೆಸಿ ಬಾಂಬ್ ಹಾಕಿಸಿಕೊಳ್ಳುವುದೇ ಸರಿಯೆಂದು ನಿಶ್ಚಯಿಸಿದಿರಿ.'

'ನಿಮ್ಮ ಊಹೆ ಸರಿ ಸ್ವಾಮಿ. ನನ್ನ ತರುಣರಲ್ಲಿ ಒಬ್ಬನು ತಪ್ಪದೆ ಎಲ್ಲರೂ, ನಾವು ಒಂದು ಕದನವನ್ನು ಕಂಡದ್ದು ಇದೇ ಮೊದಲು, ಇದರಲ್ಲಿ ಸೋತೆವು ಎನ್ನುವುದು ನಮಗಿಷ್ಟವಿಲ್ಲ, ಎಂದರು. ನಾನು, ಅಣ್ಣದಿರೆ, ಬಾಂಬ್ ಬಿದ್ದಿತು ನಾವೆಲ್ಲ ಸಾಯುವುದೇ ನಿಜ, ಮರೆಯಬೇಡಿ, ಎಂದೆನು. ಅವರು, ಸೋಲೊಪ್ಪಿದೆವು, ದಾಸರಾಗುತ್ತೇವೆ, ಸಾಯುವವರೆಗೂ ನಮ್ಮ ಹಣೆಯಲ್ಲಿ ಸೋಲಿನ ಪಟ್ಟಿ ಕಟ್ಟಿಕೊಂಡು ತಿರುಗುತ್ತೇವೆ, ಇದಕ್ಕಿಂತ ಸಾಯುವುದು ಮೇಲು, ಎಂದರು. ಜಪಾನಿ ಮರಳಿ ಸಂಜ್ಞೆ ಮಾಡಿ ಪ್ರಶ್ನಿಸಿದಾಗ ನಾವು, ಸೋಲನ್ನು ಒಪ್ಪುವುದು ನಮಗಿಷ್ಟವಿಲ್ಲ, ನೀವು ಬೇಕಾದದ್ದನ್ನು ಮಾಡಿ, ಎಂದೆವು.'

'ಎಂದದ್ದೇ ತಡ ಹಗೆ ಬಾಂಬೆಸೆದನು?'

‘ಮತ್ತೊಮ್ಮೆ, ಮರ್ಯಾದೆಗೆ, ಇದೇ ಕೊನೆಯ ಮಾತೇ ಎಂದು ಕೇಳಿ, ಹೌದು ಎಂದು ಹೇಳಿದ ಮೇಲೆ, ಎಸೆದ. ಈ ಮೊದಲು ನಾವು ನಮ್ಮ ಮುಖ್ಯ ಕಚೇರಿಗೆ ಸನ್ನೆಯಿಂದ ಪರಿಸ್ಥಿತಿಯನ್ನು ವರದಿ ಮಾಡಿದ್ದೆವು. ನಮ್ಮ ವಿಷಯ ಅವರು ಎಲ್ಲ ಆಸೆಯನ್ನೂ ತೊರೆದಿರಬೇಕು. ಬಾಂಬ್ ಬರುವ ನಿ-ರೀಕ್ಷೆಯಲ್ಲಿ ನಾವು ನಮಗಿದ್ದ ಸೌಕರ್ಯವನ್ನು ಬಳಸಿಕೊಂಡು ಆದಷ್ಟು ಜನ ಬದುಕುವಂತೆ ಎಚ್ಚರ ತೆಗೆದುಕೊಂಡೆವು. ಬಾಂಬ್ ಬಂದಿತು. ಅದೇನು ಹಗೆಯ ಅತ್ಯಂತ ಶಕ್ತಿಯ ಬಾಂಬಾಗಿರಲಾರದು. ಆದರೆ ನಮ್ಮನ್ನು ಮುಗಿಸುವುದಕ್ಕೆ ಅಂಥ ಮಹಾ ಬಾಂಬು ಬೇಕಾಗಿರಲಿಲ್ಲ. ಈ ಕಡಮೆ ಶಕ್ತಿಯ ಬಾಂಬ್ ಕೂಡ ನಮ್ಮ ಪಾಡನ್ನು ಮುಗಿಸುವುದಕ್ಕೆ ಅನವಶ್ಯಕವಾಗಿತ್ತು. ಹಡಗು ನುಚ್ಚುನುರಿಯಾಗಿ, ಮುಳುಗಿದ್ದು ಮುಳುಗಿ ತೇಲಿದ್ದು ತೇಲಿ, ಹೇಳ ಹೆಸರಿಲ್ಲದೆ ಹೋಯಿತು. ಬಾಂಬಿನ ನಾಶನಕಾರ್ಯ ಮುಗಿದು ನಾನು ಅತ್ತ ಇತ್ತ ನೋಡಬಹುದು ಎನ್ನುವ ಹೊತ್ತಿಗೆ ನನ್ನ ಬಳಿ ಒಂದು ಮರದ ತೊಲೆ ತೇಲುತ್ತಿರುವುದನ್ನು ಕಂಡೆನು; ಅದನ್ನು ಅಪ್ಪಿಕೊಂಡು ಉಳಿದವರ ಗತಿ ಏನು ಎಂದು ಸುತ್ತ ನೋ-ಡಿದೆನು.’

‘ಇಂಥ ವೇಳೆಯಲ್ಲಿ ಉಪಯೋಗಿಸುವುದಕ್ಕೆ ನಿಮಗೆ ರಕ್ಷಾಕವಚಗಳು ಇರುತ್ತವಲ್ಲ?’

‘ಎಲ್ಲ ವೇಳೆಯೂ ಇರುವುದಿಲ್ಲ, ಸ್ವಾಮಿ. ಹಡಗಿನಲ್ಲಿ ಇರುವ ಒಬ್ಬೊಬ್ಬನಿಗೂ ಒಂದು ಒಳ್ಳೆಯ ಕವಚ ಇರುವುದು ಅಪರೂಪ. ಎಲ್ಲ ಹಡಗಿನ ಪಾಡೂ ಇಷ್ಟೆ. ನನ್ನ ಹಡಗಿನ ಪಾಡು ಇದಕ್ಕೂ ಸ್ವಲ್ಪ ಕೀಳು.’

‘ನನಗೆ ತಿಳಿದ ಮಟ್ಟಿಗೆ ಒಂದು ಹಡಗನ್ನು ಇಂಥ ಕೆಲಸಕ್ಕೆ ನೇಮಿಸಿ ಕಳುಹಿಸುವ ಮೊದಲು ಅದರಲ್ಲಿ ಇಂಥ ಎಲ್ಲ ಅವಶ್ಯ ಸಾಮಗ್ರಿ ಸಂಪೂರ್ಣವಾಗಿದೆಯೆಂದು ಬಲ್ಲವರು ಸಮರ್ಥಿಸಿರುತ್ತಾ-ರೆ.’

‘ಅದೇನೋ ಸರಿ. ಆದರೆ ಕ್ಯಾಪ್ಟನ್ ಆದವನು ಅಥವಾ ಹಡಗಿನಲ್ಲಿರುವ ಬೇರೆಯ ಯಾವ-ನೋ ಒಬ್ಬ ಮುಖ್ಯ ಕಚೇರಿಗೆ ಬಹಳ ಬೇಕಾದವನು ಅಥವಾ ಸರ್ಕಾರದ ದೃಷ್ಟಿಯಲ್ಲಿ ಗಣ್ಯನಾದವ-ನು ಆಗದಿದ್ದರೆ ಸಾಮಗ್ರಿ ಎಷ್ಟಿರಬೇಕೋ ಅಷ್ಟು ಇಲ್ಲದೆ ಹೋಗುವುದು ಉಂಟು. ಲೆಕ್ಕಕ್ಕೆ ಸಾಮಾ-ನಿರುತ್ತದೆ. ಎಲ್ಲ ಸಾಮಾನೂ ಕೆಲಸಕ್ಕೆ ಬರುವುದಿಲ್ಲ.’

‘ನಿಮ್ಮ ಮುಖ್ಯ ಕಚೇರಿಗೆ ನಿಮ್ಮ ಮೇಲೆ ಅಷ್ಟು ಪ್ರೀತಿ ಇಲ್ಲ ಎಂದು ನಿಮ್ಮ ಅರ್ಥವೇ ಕ್ಯಾಪ್ಟನ್?’

‘ಆ ವಿಷಯ ಮಾತನಾಡುವುದು ನನ್ನಲ್ಲಿ ಸರಿಯಲ್ಲ, ಸ್ವಾಮಿ.’

‘ಆದರೂ ಅವರು ನಿಮ್ಮನ್ನು ಕ್ಯಾಪ್ಟನ್ ಪದವಿಗೆ ಏರಿಸಿದ್ದಾರಲ್ಲ?’

‘ಏರಿಸಿದ್ದಾರೆ ಸ್ವಾಮಿ. ನಾನು ಸೇವೆ ಮಾಡಿ ಏರಿದ್ದೇನೆ. ನನಗೆ ಬೇಕಾದ ಒಬ್ಬರು ಮೇಲೆ ಇದ್ದಾಗ ಕ್ಯಾಪ್ಟನ್ ಆದೆ. ನಿಜವಾಗಿ ನಾನು ಕ್ಯಾಪ್ಟನ್ ಆದದ್ದಕ್ಕೆ ಕಾರಣ ನನಗೆ ನಿಮ್ಮ ಜನದಮೇಲೆ ಪ್ರೀತಿ ಇದೆ ಎನ್ನುವುದು; ಈ ತರುಣರನ್ನು ತರಪೇತು ಮಾಡುವುದಕ್ಕೆ ಶಕ್ತನಾಗಿದ್ದೆ ಎನ್ನುವುದು. ಕ್ಯಾಪ್ಟನ್ ಆದೆ; ಕೆಲವು ದಿನದಮೇಲೆ ಮೇಲಿನ ಅಧಿಕಾರಿ ಬೇರೆ ಆದರು, ನಾನು ದಿಕ್ಕು ಕೆಟ್ಟೆ.’

‘ನಿಮ್ಮ ಮುಖ್ಯ ಕಚೇರಿಗೆ ನೀವು ಕೆಟ್ಟೀರಿ ಎಂಬ ಭಯವಿಲ್ಲದೆ ಹೋಯಿತು?’

‘ನಾನು ಹಾಗೆನ್ನಲಾರೆ ಸ್ವಾಮಿ. ಆದರೆ ಜಪಾನಿ ಎಂಥ ಕ್ರೂರ ಎನ್ನುವುದನ್ನು ಬಲ್ಲವರು ನನ್ನ ಈ ಸಣ್ಣ ಹಡಗನ್ನು ಕಾವಲ ಕೆಲಸಕ್ಕೆ ಹಾಕಿದ್ದು ಕನಿಕರದ ನಡೆಯಲ್ಲ.’

‘ಹೀಗಾಗಿ ನೀವು ಇಲ್ಲಿ, ನಿಮ್ಮ ತರುಣರು ಆ ಸುತ್ತಿನಲ್ಲಿ, ಸತ್ತೋ ಕೆಟ್ಟೋ ನೀರಲ್ಲಿ ತೇಲುವುದಾಯಿತು?’

‘ಹೌದು ಸ್ವಾಮಿ. ನನಗೆ ತಲೆ ಸ್ವಲ್ಪ ಗುಂಯ್ ಎನ್ನುತ್ತಿತ್ತು. ಉಳಿದವರಿಗೆ ಇನ್ನೂ ಹೆಚ್ಚು ಕಷ್ಟವಾಗಿರಬೇಕು. ಮರದ ತೊಲೆಯನ್ನು ಒಂದು ಕೈಯಿಂದ ಹಿಡಿದು ನನ್ನ ಕೈವೊಂದನ್ನು ಬೀಸಿ ನಾನು ಜೊತೆಯ ಜನರಿಗೆ, ತೀರದ ಕಡೆಗೆ ಈಜಲು ಯತ್ನಿಸಿ, ಎಂದು ಸಂಜ್ಞೆ ಮಾಡಿದೆನು. ನಾನು ಆ ದಿಕ್ಕಿನಲ್ಲಿ ಸರಿಯಲು ತೊಡಗಿದೆನು. ಬಿಸಿಲೇರಿತು; ಅದನ್ನು ಸಹಿಸಿಕೊಂಡು ಜೊಂಪೇರಿ ಮುಳುಗದಂತೆ ಇರುವುದೇ ನನಗೆ ಸಾಕಾಯಿತು.’

‘ಕೊನೆಗೆ ತೀರವನ್ನು ಮುಟ್ಟಿದಿರಿ.’

‘ಸುಮಾರು ಎರಡು ದಿನದಲ್ಲಿ ಮುಟ್ಟಿದೆ ಸ್ವಾಮಿ. ಅನುಭವವುಳ್ಳ ನಾವಿಕನಿಗೆ ಇದು ಹೊಸದೇ-

ನೂ ಅಲ್ಲ. X ರೇವಿನ ದಕ್ಷಿಣಕ್ಕೆ ಎರಡು ಮೈಲಿಯಲ್ಲಿ ನಾನು ನೆಲ ಮುಟ್ಟಿದೆನು. ಅಲ್ಲಿ ಕಂಡ ಜನವನ್ನು ಈ ಸ್ಥಳ ಯಾವುದೆಂದು ಕೇಳಿದೆನು. ಅವರು ಸ್ವಲ್ಪ ರೊಟ್ಟಿ ನೀರು ಕೊಟ್ಟು ದಾರಿ ತೋರಿಸಿದರು. ಅದನ್ನು ಹಿಡಿದು X ರೇವಿನ ಕಚೇರಿಗೆ ಬಂದೆನು.'

'ಕಚೇರಿಯ ಜನಕ್ಕೆ ನೀವು ಜೀವದೊಂದಿಗೆ ಬಂದದ್ದನ್ನು ಕಂಡು ಬಹಳ ಸಂತೋಷವಾಗಿರಬೇಕು.'

'ಆಗಿರಬೇಕು ಸ್ವಾಮಿ. ಆದರೆ ಯಾರೂ ಅದನ್ನು ಹೇಳಲಿಲ್ಲ; ತೋರಿಸಿಕೊಳ್ಳಲಿಲ್ಲ. ವರದಿ ಬರೆದು ಕೊಡು ಎಂದರು. ಬರೆದು ಕೊಟ್ಟೆ. ನನ್ನ ಹೆಂಡತಿಯನ್ನು ನೋಡಲು ಪುಣೆಗೆ ಹೋಗಬೇಕು ಎಂದೆ. ಅವರು ಬೇಕಾದ ಕಾಗದ ಪತ್ರ ಮಾಡಿ ನನ್ನನ್ನು ಕಳುಹಿಸಿದರು.'

'ಸರಿ, ಅಷ್ಟು ಉಪಕಾರವನ್ನೇನೊ ಮಾಡಿದರಲ್ಲ. ಹೇಗೂ ಈಗ ನೀವು ಪುಣೆಯನ್ನು ಮುಟ್ಟಿ ಕೆಲವು ದಿನ ವಿಶ್ರಾಂತಿ ತೆಗೆದುಕೊಂಡು ಸ್ವಸ್ಥವಾಗಿರಬಹುದು.'

'ಇರಬೇಕಾದದ್ದೇ ಸ್ವಾಮಿ. ಆದರೆ ಇದು ನಡೆಯುತ್ತದೆ ಎಂದು ಖಂಡಿತ ಹೇಳುವಂತಿಲ್ಲ. ಹಿಂದಿನ ಸಾರಿ ನಾನು ಎರಡು ವರ್ಷ ಒಂದೇ ಸಮ ನೀರಿನ ಮೇಲಿದ್ದು ಹಿಂದಿರುಗಿ ಬಂದೆ. ಆದರೇನಂತೆ! ಒಂದು ವಾರ ಕಳೆಯಲಿಲ್ಲ, ನನ್ನನ್ನು ಮರಳಿ ನೀರಿಗೆ ಅಟ್ಟಿದರು. ಇದು ಹೇಗಪ್ಪ ಎಂದರೆ, ಯುದ್ಧದ ಕಾಲ, ಸೌಕರ್ಯ ನೋಡುವುದಕ್ಕಾಗುತ್ತದೆಯೇ, ಎನ್ನುವರು. ನಮ್ಮವರಾಗಿ ಯಾರಾದರೂ ನಮ್ಮ ಬೆನ್ನು ಕಟ್ಟುವರು ಇದ್ದರೆ ಹೇಗೋ. ಇಲ್ಲದಿದ್ದರೆ ತಲೆ ತಗ್ಗಿಸಿಕೊಂಡು ಹೇಳಿದಂತೆ ಮಾಡುವುದೇ ಒಳಿತು.'

'ನಿಮ್ಮ ಜನ ನಿಮ್ಮ ನಿಮ್ಮಲ್ಲಿ ಇಂಥ ಪಕ್ಷಪಾತ ಇಲ್ಲದೆ ನಡೆದುಕೊಳ್ಳುತ್ತೀರಿ ಎನ್ನುವುದು ನಮ್ಮ ತಿಳಿವಳಿಕೆ ಕ್ಯಾಪ್ಟನ್.'

'ಸ್ವಾಮಿ, ತಾವು ಪ್ರಾಜ್ಞರು. ತಮಗೆ ಹೇಳಬೇಕಾದದ್ದೇನಿದೆ? ನೀವು ತಿಳಿಯುತ್ತೀರಿ, ನಾವೆಲ್ಲ ಒಂದುಗೂಡಿ ಬಾಳುತ್ತೇವೆ ಎಂತ. ನಾವು ತಿಳಿಯುತ್ತೇವೆ, ನೀವೆಲ್ಲ ಒಂದುಗೂಡಿ ಬಾಳುತ್ತೀರಿ ಎಂತ.

ನಿಜಕ್ಕೆ ನಮ್ಮಲ್ಲೂ ಅಷ್ಟೇ ನಿಮ್ಮಲ್ಲೂ ಅಷ್ಟೆ; ಜನ ಇಪ್ಪತ್ತು ಗುಂಪಾಗಿ ಬಾಳುತ್ತದೆ. ನಿಷ್ಪಕ್ಷಪಾತವೆಲ್ಲ ಗುಂಪಿನ ಒಳಗಡೆ; ಉಳಿದಂತೆ, ಇದು ನನ್ನದು ಅದು ಬೇರೆ, ಇದ್ದೇ ಇದೆ.'

'ಈ ಸಲವಾದರೂ ನಿಮ್ಮನ್ನು ತಿರುಗಿ ಬೇಗನೆ ನೀರಿಗೆ ಅಟ್ಟದಿರಲಿ. ನಿಮಗೆ ಸ್ವಲ್ಪ ವಿಶ್ರಾಂತಿ ಸಮಾಧಾನ ಬೇಕು.'

'ಜೊತೆಗೆ ಸ್ವಾಮಿ, ನನ್ನ ಹೆಂಡತಿಯೊಂದಿಗೆ ಕೂಡಿರುವ ಸುಖ ಬೇಕಾಗಿದೆ. ನಾಳೆ ನನ್ನ ಜೀವನದಲ್ಲಿ ತುಂಬ ಸುಖದ ದಿನ.'

'ನಾಳೆ ಕ್ಯಾಪ್ಟನ್? ನೀವು ಇದೇ ರಾತ್ರೆ ಪುಣೆ ಮುಟ್ಟುವಿರಿ.'

'ಹೌದು ಸ್ವಾಮಿ. ಆದರೆ ನಾನು ಈ ಹೊತ್ತೇ ನನ್ನ ಹೆಂಡತಿಯನ್ನು ಕಂಡು ಕಾಡಲು ಬಯಸುವುದಿಲ್ಲ.'

'ಆಕೆ ನೀವು ಬರುತ್ತಿದೀರೆಂಬುದನ್ನು ಬಲ್ಲರು ಅಲ್ಲ?'

'ಇಲ್ಲ ಸ್ವಾಮಿ. ನಾನು ಬರುತ್ತೇನೆಂಬ ಸುದ್ದಿಯನ್ನು ಕಳುಹಿಸಿದ್ದರೆ ಆಕೆಗೆ ನಿರೀಕ್ಷೆಯ ವ್ಯಾಕುಲವನ್ನು ಹಚ್ಚಿದಂತಾಗುತ್ತಿತ್ತು. ಎಷ್ಟು ತಾಸಿನ ಕ್ಷೋಭೆ, ಸ್ವಾಮಿ, ಒಬ್ಬರು ಬರುವುದಕ್ಕಾಗಿ ಇನ್ನೊಬ್ಬರು ಕಾಯುವುದು! ಅದಕ್ಕಾಗಿ ನಾನು ಹೀಗೆ ಯೋಚನೆ ಮಾಡಿದೆ. ನಾನು ಈ ರಾತ್ರಿ ಕಂಟೋನ್‌ಮೆಂಟ್ ಸೇರುತ್ತೇನೆ. ನಾಳೆ ಬೆಳಗ್ಗೆ ಎದ್ದು ನಾನು ಬಂದಿರುವುದನ್ನು ಹೇಳಿ ಕಳುಹಿಸಿ ಒಂದು ಕಾಲು ಗಂಟೆ ಬಿಟ್ಟು ಆಕೆ ಇರುವಲ್ಲಿಗೆ ಹೋಗುತ್ತೇನೆ. ಆಕೆಯನ್ನು ಕಾಣುವುದು ಆರು ತಾಸು ಸಾವಕಾಶವಾಗುತ್ತದೆ; ಆದರೆ ಆಕೆಯ ಮನಸ್ಸಿಗೆ ಕಷ್ಟ ಕಡಮೆ.'

'ನ್ಯಾಯವಾದ ಮಾತು ಕ್ಯಾಪ್ಟನ್. ನಿಮ್ಮ ಮರುಕ ಉನ್ನತ ಜೀವಿಯ ಮರುಕ. ಪುಣೆಯಲ್ಲಿ ಇರುವ ಕಾಲದಲ್ಲಿ ನಾನು ನಿಮ್ಮನ್ನು ಪುನಃ ಕಾಣಬಹುದಲ್ಲ? ಇಷ್ಟೆಲ್ಲ ಕಷ್ಟ ಸುಖ ತಿಳಿಸಿದ್ದೀರಿ. ಈ ಪರಿಚಯ ಇಷ್ಟಕ್ಕೇ ನಿಲ್ಲಲೇಕೆ?'

‘ಒಪ್ಪಿದೆ ಸ್ವಾಮಿ. ನಾನು ತಮ್ಮನ್ನು ಕಾಣುತ್ತೇನೆ.’

‘ಸಂತೋಷ, ನೀವು ಕಾಣಲು ಬಂದಾಗ ನಿಮಗೆ ನಿಮ್ಮ ವಾಡಿಕೆಯ ಭಕ್ಷ್ಯವನ್ನೇನಾದರೂ ಕೊಡಬೇಕೆಂದು ನನಗೆ ಆಸೆ. ಇದಕ್ಕೆ ಅನುಕೂಲ ಇರುವುದು ನಮ್ಮ ಕ್ಲಬ್ಬಿನಲ್ಲೇ. ನೀವು ಅಲ್ಲಿಗೆ ಬಂದರೆ ಉಪಕಾರ ಆಗುತ್ತದೆ. ನನ್ನ ಜೊತೆಯ ಬೇರೆ ಜನ ಇರುತ್ತಾರೆ; ಅವರನ್ನೂ ನೀವು ಕಾಣಬಹುದು. ನಿಮ್ಮಂಥ ದೊಡ್ಡ ಮನುಷ್ಯರನ್ನು ನೋಡುವುದು ಅವರಿಗೂ ಸಂತೋಷ.’

‘ಅವಶ್ಯವಾಗಿ ಸ್ವಾಮಿ.’

ನಾನು ಕ್ಯಾಪ್ಟನ್ ಸಾಹೇಬನಿಗೆ ನನ್ನ ಮನೆಯ ವಿಳಾಸವನ್ನೂ ಕಚೇರಿಯ ವಿಳಾಸವನ್ನೂ ಕೊಟ್ಟು ನಮ್ಮ ಕ್ಲಬ್ ಇರುವ ರಾಜ ಮಾರ್ಗದ ಗುರುತನ್ನು ವಿವರಿಸಿದೆನು. ನಮ್ಮ ರೈಲು ಪುಣೆಗೆ ಮಧ್ಯ ರಾತ್ರಿಯಲ್ಲಿ ಸೇರಿತು. ಅಲ್ಲಿ ನಮಸ್ಕಾರ ಹೇಳಿ ನಾವು ನಮ್ಮ ನಮ್ಮ ನೆಲೆಗೆ ಹೊರಟೆವು.

ಹೊರಟು ಬರುವವೇಳೆ ನಾನು ಕೊನೆಯ ಮಾತಾಗಿ, ‘ನೀವು ತಪ್ಪದೆ ನನ್ನನ್ನು ಕಾಣಬೇಕು ಕ್ಯಾಪ್ಟನ್,’ ಎಂದು ಹೇಳಿದೆನು. ಆತ, ‘ಖಂಡಿತ ಕಾಣುತ್ತೇನೆ,’ ಎಂದನು. ‘ಹಾಗಾದರೆ ನಾಳೆ ಅಲ್ಲ ನಾಳಿದ್ದು ಬರುತ್ತೀರಾ?’ ‘ಬರುತ್ತೇನೆ ಸ್ವಾಮಿ.’

೨

ಮೂರನೆಯ ದಿವಸ ಆತ ಬಂದವೇಳೆ ಅವನಿಗೆ ರುಚಿಸುವ ಒಳ್ಳೆಯ ಉಪಾಹಾರವನ್ನು ಕೊಡೋಣ, ವರ್ಷಾಂತರ ನೀರಿನಮೇಲೆ ತೇಲುತ್ತ ಒಣರೊಟ್ಟಿ ಕೊರಕುವ ಬಡಪಾಯಿ, ನೆಲದಮೇಲೆ ನಡೆಯುತ್ತಿರುವ ದಿನದಲ್ಲಿ ಒಳ್ಳೆಯ ಊಟ ಮಾಡಿದಂತಾಗಲಿ, ಎಂದು ನಾನು ನಮ್ಮ ಕ್ಲಬ್ಬಿನ ಬಟ್ಲರಿಗೆ ಹೇಳಿ ಇವರ ಉಪಾಹಾರದ ಬಹು ಒಳ್ಳೆಯ ಎರಡು ಪದಾರ್ಥವನ್ನು ಮಾಡಿಸಿದೆನು. ಸಂಜೆಯೆಲ್ಲ ಕಾದು ಕುಳಿತರೂ ಕ್ಯಾಪ್ಟನ್ ಬರಲಿಲ್ಲ. ಇನ್ನು ಬರುವುದಿಲ್ಲ ಎಂದು ತೋರಿದಮೇಲೆ ಬಟ್ಲರಿಗೆ ಉಪಾಹಾರಕ್ಕೆ ಸಂದಿದ್ದ ವೆಚ್ಚವನ್ನು ಕೊಟ್ಟು ಅದನ್ನು ನಿನ್ನ ಇಷ್ಟದಂತೆ ಬಳಸಿಕೊ ಎಂದು ಹೇಳಿ ನಾನು ಮನೆಗೆ ಹೊರಟು ಬಂದೆನು.

ಅದರ ಮಾರನೆಯ ದಿನ ಕಳೆಯಿತು. ಮಾರನೆಯ ದಿನದ ಮಾರನೆಯ ದಿನ ಕಳೆಯಿತು. ಕ್ಯಾಪ್ಟನ್ ಮಹಾಶಯನ ಸುಳಿವು ಕಾಣಲಿಲ್ಲ. ಏನಾಗಿರಬಹುದೋ ಎಂದು ನನಗೆ ಸ್ವಲ್ಪ ಶಂಕೆ ಕೂಡ. ಈತನಿಗೆ ಆಗದವರೆನ್ನುವವರು ಅವನನ್ನೇನಾದರೂ ಮರಳಿ ನೀರಿಗೋ ಇಲ್ಲ ಬೇರೆ ಊರಿಗೋ ಅಟ್ಟಿ ಬಿಟ್ಟಿದ್ದರೊ? ಇಲ್ಲ ಹೆಂಡತಿಯಾದಾಕೆ ಬೇರೆ ಎಲ್ಲಿಗಾದರೂ ಹೋಗಿದ್ದು ಈತನೂ ಅಲ್ಲಿಗೆಂದು ಹೊರಡಬೇಕಾಯಿತೊ? ಕಾರಣ ಯಾವುದೇ ಇರಲಿ, ತಾನು ಬರುವುದಕ್ಕೆ ಆಗುವುದಿಲ್ಲ ಎಂದು ತಿಳಿಸಿ ಈತ ನನಗೆ ಒಂದು ಪತ್ರವನ್ನು ಹಾಕಬಹುದಾಗಿತ್ತು.

ಹೇಗೊ ಆತ ಬರಲಿಲ್ಲ. ಏಕೆ ಬರಲಿಲ್ಲ ಎನ್ನುವುದು ತಿಳಿಯುವಂತಿರಲಿಲ್ಲ. ಆದ್ದರಿಂದ ನಾನು ಆ ವಿಷಯ ಯೋಚಿಸುವುದನ್ನು ಬಿಟ್ಟೆನು.

೨

ಐದನೆಯ ದಿನ ಸಂಜೆ ನಾನು ನನ್ನ ಕಚೇರಿಯಿಂದ ಹಿಂದಿರುಗಿ ಬರುತ್ತಿದೇನೆ. ಮನೆಗೆ ಅರ್ಧ-ದಾರಿ ಬಂದಿರುವಾಗ ಸ್ವಲ್ಪ ದೂರದಲ್ಲಿ ಎದುರಿಗೆ ಈತನಂತೆ ತೋರುವ ಒಬ್ಬ ವ್ಯಕ್ತಿ ನಡೆದು ಬರುತ್ತಿ-ರುವುದು ಕಂಡಿತು. ಈತನೇ ಇರಬಹುದೇ ಎಂದುಕೊಳ್ಳುವಷ್ಟರಲ್ಲಿ ಹೌದು ಎನ್ನುವುದು ಸ್ಪಷ್ಟವಾ-ಯಿತು. ಕಾರನ್ನು ನಿಲ್ಲಿಸಿ ಅದರಿಂದಿಳಿದು ನಾನು ಕ್ಯಾಪ್ಟನ್ ಬಳಿಗೆ ನಡೆದೆನು.

‘ನಮಸ್ಕಾರ, ಕ್ಯಾಪ್ಟನ್ ಸಾಹೇಬರೇ.’

ಕ್ಯಾಪ್ಟನ್ ತಲೆಯೆತ್ತಿ ನೋಡಿದನು. ಅರೆಕ್ಷಣ ಆತನಿಗೆ ನನ್ನ ಗುರುತು ಹತ್ತಿದಂತೆ ಕಾಣಲಿಲ್ಲ; ಆದರೆ ಇದು ಅರೆಕ್ಷಣ ಮಾತ್ರ; ಅದಾದ ಒಡನೆ ಆತ, ‘ತಾವೇ ಸ್ವಾಮಿ? ನಮಸ್ಕಾರ,’ ಎಂದನು.

‘ಹೌದು ನಾನೇ. ಬರುತ್ತೇನೆ ಎಂದಿದ್ದವರು ನೀವು ಬರಲಿಲ್ಲ. ಏನು ಅನನುಕೂಲ ಆಯಿತೊ ಎಂದು ನಾನು ಸ್ವಲ್ಪ ಚಿಂತಿಸಿದೆ. ಎಲ್ಲಾ ಕ್ಷೇಮವಷ್ಟೆ?’

ಈ ಪ್ರಶ್ನೆ ಸಾಮಾನ್ಯವಾಗಿ ಕೇಳತಕ್ಕದ್ದೆ. ಆದರೆ ಈಗ ನಾನು ಅದನ್ನು ಬರಿಯ ಮರ್ಯಾದೆಗಾಗಿ ಕೇಳಲಿಲ್ಲ. ಕ್ಯಾಪ್ಟನ್ ಮಹಾಶಯನ ಮುಖದ ಮೇಲೆ ಅಸುಖದ ಸೂಚನೆ ಕಂಡದ್ದರಿಂದ ಕೇಳಿದೆ-

ನು.

‘ಇಲ್ಲ ಸ್ವಾಮಿ, ಬಹಳ ಕ್ಷೇಮ ಎನ್ನಲಾರೆ. ಆ ಕಾರಣದಿಂದಲೇ ನಾನು ಬಾರದೆ ನಿಂತೆ.’

‘ನಿಮ್ಮ ಗೃಹಿಣಿ ಸೌಖ್ಯವಾಗಿದಾರಲ್ಲ? ಅಷ್ಟನ್ನು ಹೇಳಿರಿ. ಉಳಿದ ಮಾತು ನನಗೆ ಬೇಡ.’

‘ಸ್ವಾಮಿ, ನನ್ನ ಸಲುವಾಗಿ ನಿಮ್ಮ ಜೀವಕ್ಕೆ ನೋವು ಕೊಡುವುದು ಬೇಡ ಎನ್ನಿಸಿತು. ಆದ್ದರಿಂದ ದೂರ ಇದ್ದುಬಿಟ್ಟೆ. ಆದರೆ ಮತ್ತೆರಡು ದಿನ ಯೋಚನೆ ಮಾಡಿದ್ದರ ಮೇಲೆ ನಿಮ್ಮನ್ನು ಕಾಣುವುದೊ ಬೇಡವೊ ಎನ್ನುವುದನ್ನು ದೈವಕ್ಕೆ ಬಿಡೋಣ ಎಂದು ತೋರಿತು. ಆದ್ದರಿಂದ ಈ ದಿನ ಈ ದಾರಿಯಲ್ಲಿ ಬಂದೆ. ಕಾಣುವಂತೆ ಮಾಡಿದೆ ದೈವ. ಆದ್ದರಿಂದ ನನ್ನಲ್ಲಿ ಇಷ್ಟು ಆಸಕ್ತಿಯಿಂದ ನಡೆಯುತ್ತಿರುವೆ ನಿಮಗೆ ಎಲ್ಲ ಸಂಗತಿಯನ್ನೂ ಹೇಳೋಣ ಎನ್ನಿಸಿದೆ. ನನಗೆ ಸ್ವಲ್ಪ ವೇಳೆ ಕೊಡಬಲ್ಲಿರಾ?’

‘ಅವಶ್ಯವಾಗಿ ಕ್ಯಾಪ್ಟನ್. ಕ್ಲಬ್ಬಿಗೆ ಹೋಗೋಣವೇ?’

‘ಹೋಗೋಣ.’

ಕ್ಲಬ್ಬಿಗೆ ಹೋಗಿ ಒಂದು ಮರದ ಕೆಳಗೆ ಎರಡು ಕುರ್ಚಿ ಹಾಕಿಸಿ ಕುಳಿತು ಕ್ಯಾಪ್ಟನ್‌ಗೆ ಸ್ವಲ್ಪ ಉಪಾಹಾರ ವ್ಹಿಸ್ಕಿ, ಸೋಡ, ನನಗೆ ಸ್ವಲ್ಪ ಹಣ್ಣಿನ ರಸ, ತರಲು ಅಪ್ಪಣೆ ಮಾಡಿದೆನು.

ವ್ಹಿಸ್ಕಿಯನ್ನು ಸ್ವಲ್ಪ ಸ್ವಲ್ಪ ಬಾಯಿಗೆ ತೆಗೆದುಕೊಳ್ಳುತ್ತಾ ಕ್ಯಾಪ್ಟನ್ ಹೇಳಿದನು: ‘ತಾವು ಪ್ರಾಜ್ಞರು, ಜೀವನವನ್ನು ಬಲ್ಲವರು, ಎಂದು ನಾನು ಆ ದಿನ ಹೇಳಿದ ಮಾತು ತಮಗೆ ನೆನಪಿದೆಯಲ್ಲವೆ, ಸ್ವಾಮಿ? ನಾವು ರೈಲಿನಲ್ಲಿ ಬರುತ್ತಿರುವಾಗಲೇ ನನಗೆ ಇದು ಮನ ಮುಟ್ಟಿತು; ಆದರೆ ನೀವು ಎಷ್ಟು ಪ್ರಾಜ್ಞರು, ಬಾಳನ್ನು ಎಷ್ಟು ಚೆನ್ನಾಗಿ ಬಲ್ಲಿರಿ, ಎನ್ನುವುದು ಚೇತನಕ್ಕೆ ತಾಕಿದ್ದು ಅದರ ಮಾರನೆಯ ದಿನ.’

‘ಹಾಗೇ?’

‘ಆ ರಾತ್ರೆ ನಾನು ಪ್ರವಾಸ ಮಂದಿರದಲ್ಲಿದ್ದು ಮಾರನೆಯ ಬೆಳಗ್ಗೆ ಸಿದ್ಧನಾಗಿ ನಾನು ಬಂದಿದ್ದೇ-

ನೆ ಎಂಬ ಸುದ್ದಿಯನ್ನು ಹೆಂಡತಿಗೆ ಹೇಳಿಕಳಿಸಿದೆನು. ಆಕೆ ನಾನು ಗುರುತಿಸಿಕೊಂಡಿದ್ದ ವಿಳಾಸದ ಸ್ಥಳದಲ್ಲಿರಲಿಲ್ಲ. ಆಸ್ಪತ್ರೆಯಲ್ಲಿದ್ದಳು.'

'ಅಯ್ಯೋ! ತುಂಬ ಕಾಯಿಲೆಯಾಗಿ?'

'ಹೌದು ಸ್ವಾಮಿ. ಹೇಳಲು ಮರೆತೆ, ಹೆರಿಗೆಯ ಆಸ್ಪತ್ರೆಯಲ್ಲಿ.'

'ಸರಿ.'

ಕ್ಯಾಪ್ಟನ್ ಮಹಾಶಯ ಇಷ್ಟವಿಲ್ಲದೆ ಪ್ರಯತ್ನಪೂರ್ವಕ ಮಾತನಾಡುತ್ತಿದ್ದನು. ಹೆರಿಗೆಯ ಆಸ್ಪತ್ರೆ ಎಂದೊಡನೆ ನನಗೆ ಜೀವ ಕಳುಕ್ ಎಂದಿತು. ಆದರೆ ನನ್ನ ಕಳವಳ ಹೊರಗೆ ಕಾಣದಂತೆ ನಾನದನ್ನು ಅಡಗಿಸಿಕೊಂಡೆನು.

'ಗಂಡಸಿಗೆ ಹೇಗೋ ಹಾಗೆ ಹೆಂಗಸಿಗಾದರೂ ಒಬ್ಬೊಂಟಿ ಬಾಳು ತುಂಬ ಕಷ್ಟ ಎಂದು ತಾವು ಅಂದು ಅಪ್ಪಣೆ ಕೊಡಿಸಿದಿರಿ.'

'ಆ ವಿಷಯದಲ್ಲಿ ಸಂದೇಹವಿಲ್ಲ.'

'ನೀರಿನಮೇಲೆ ಹಡಗಿನಲ್ಲಿ ಗಂಡ ಹಸಿದುಕೊಂಡಿರುವಂತೆ ಹಸಿದ ಒಬ್ಬೊಂಟಿ ಗಂಡಸರು ನೆ-ಲದಮೇಲೆ ಅವಳನ್ನು ಸುತ್ತಿ ನಿಂತರೆ ಅವಳ ಸ್ಥಿತಿ ಆ ಗಂಡನ ಸ್ಥಿತಿಗಿಂತ ಹೆಚ್ಚು ಅಪಾಯದ ಸ್ಥಿತಿ ಆಗುತ್ತದೆ.'

'ಇದು ನಿಜ ಎಂದು ನಾನು ಹೇಳಬಲ್ಲೆ.'

'ನನಗೆ ಆಗ ತಿಳಿಯಲಿಲ್ಲ ಸ್ವಾಮಿ. ಈ ಮೂರು ದಿನದಲ್ಲಿ ತಿಳಿಯಿತು. ನನ್ನ ಜೊತೆಯ ಇಬ್ಬರು ಮೂವರು ಅಧಿಕಾರಿಗಳು ಹಿಂದಿನ ಸಲ ನಾನು ನೆಲ ಮುಟ್ಟಿದಾಗ ಪ್ರಯತ್ನ ಪೂರ್ವಕವಾಗಿ ನನ್ನ-ನ್ನು ಒಂದು ವಾರದಲ್ಲಿ ನೀರಿಗೆ ಅಟ್ಟಿದರು. ಈ ಕೃತ್ರಿಮವನ್ನು ಮಾಡಿದ ಜನರಲ್ಲಿ ಒಬ್ಬನಿಂದ ನನ್ನ ಹೆಂಡತಿ ಕಷ್ಟಕ್ಕೆ ಈಡಾದಳು.'

‘ಕ್ಯಾಪ್ಟನ್ ಮಿತ್ರರೆ, ನಿಮ್ಮ ವಿಷಯಕ್ಕೆ ನನಗೆ ತುಂಬ ಕನಿಕರ ಆಗುತ್ತದೆ.’

‘ಸ್ವಾಮಿ, ತಮ್ಮ ಜೀವ ದೊಡ್ಡದು.’

ಹೀಗೆಂದು ಕ್ಯಾಪ್ಟನ್ ಎರಡು ಕ್ಷಣ ಸುಮ್ಮನೆ ಕುಳಿತನು. ನಾನು, ‘ಈ ಮಾತನ್ನಾಡುವುದು ನಿಮ-ಗೆ ಕಷ್ಟವಾಗುತ್ತಿದೆ. ಈಗ ಅಷ್ಟು ಸಾಕು. ಬೇರೆ ಮಾತನ್ನಾಡೋಣ,’ ಎಂದೆನು.

‘ಕರುಣೆಯ ಸಲಹೆ, ಸ್ವಾಮಿ, ಆದರೆ ಸಂಕೋಚ ಬೇಡ. ತೊಡಗಿದ್ದಾಯಿತು, ಮುಗಿಸಿಬಿಡುತ್ತೇ-ನೆ. ಮನಸ್ಸಿನಿಂದ ಹೊರೆ ಇಳಿದಂತಾಗುತ್ತದೆ.’

‘ನಿಮ್ಮಿಷ್ಟ. ಆದರೆ ಈ ಮಾತನಾಡುವುದರಲ್ಲಿ ಮನಸ್ಸಿಗೆ ವೇಧೆ ಬೇಡ.’

‘ಓ, ವೇಧೆಯ ಮಾತು ಮುಗಿಯಿತು, ಸ್ವಾಮಿ. ಬಡಪಾಯಿ ಹೆಂಗಸು ತನ್ನ ಗತಿಯೇನು ಎಂದು ವ್ಯಾಕುಲಪಡುತ್ತಿದ್ದಾಗ ನನ್ನ ಹಡಗಿನ ಮೇಲೆ ಬಾಂಬ್ ಬಿತ್ತು ಎಂಬ ಸುದ್ದಿಯನ್ನು ಓದಿದಳು. ಕಳವ-ಳದಮೇಲೆ ಕ್ಷೋಭೆ ಬಂದು ಅಕಾಲದಲ್ಲಿ ಪ್ರಸವವಾಯಿತು. ಹೆಂಗಸು ಉಳಿದದ್ದೇ ಹೆಚ್ಚು. ಹುಟ್ಟಿದ ಮಗು ಒಂದು ತಾಸಿನೊಳಗೆ ಕಣ್ಣು ಮುಚ್ಚಿಕೊಂಡಿತು.’

‘ಈಗ ಜೀವಕ್ಕೆ ಭಯವಿಲ್ಲ ತಾನೆ?’

‘ಇಲ್ಲವೆಂದು ತೋರುತ್ತದೆ, ಸ್ವಾಮಿ. ಆದರೆ ಅವಳು ಇನ್ನು ನಾವು ಗಂಡಹೆಂಡರಾಗಿ ಬಾಳುವು-ದು ಸಾಧ್ಯವೇ ಎಂಬ ವಿಷಯದಲ್ಲಿ ಸಂದೇಹಪಡುತ್ತಿದ್ದಾಳೆ.’

‘ಅಲ್ಲ?’

‘ನಾನು ಆಸ್ಪತ್ರೆಗೆ ಬಂದು ತನ್ನನ್ನು ಕಾಣಬೇಕೆಂದು ಆಕೆ ಒತ್ತಾಯವಾಗಿ ಬೇಡಿ ಹೇಳಿಕಳುಹಿಸಿ-ದಳು. ಹೋಗಿ ಹಾಸಿಗೆಯ ಬದಿಯಲ್ಲಿ ನಿಂತ ನನಗೆ, ಹ್ಯಾರೀ, ನಾನು ನಿನ್ನ ವಿಷಯಕ್ಕೆ ತಪ್ಪಿ ನಡೆದಿ-ದ್ದೇನೆ, ನನ್ನನ್ನು ಮನ್ನಿಸು, ಎಂದು ಹೇಳಿದಳು. ನಾನು ಸುಮ್ಮನಿದ್ದೆ. ಅವಳು, ಹೇಳಿದರೆ ನಂಬುವು-ದು ಕಷ್ಟ, ಆದರೆ ಸತ್ಯವೆಂದು ಆಣೆ ಮಾಡುತ್ತೇನೆ, ನಾನು ಎಲ್ಲ ಹೊತ್ತೂ ನಿನ್ನಲ್ಲಿ ಅನುರಕ್ತಳಾಗಿದ್ದೆ,

ಆದರೆ ಹೀಗೆಂದು ಫಲವೇನು, ನನ್ನನ್ನು ಒಪ್ಪಿ ಮತ್ತೆ ಕಟ್ಟಿಕೊ ಎಂದು ನಾನು ಹೇಳುತ್ತಿಲ್ಲ, ಚರಿತ ಒಳ್ಳೆಯದಲ್ಲ ಎಂದು ತಿಳಿಸಿ ದಾಂಪತ್ಯ ವಿಚ್ಛೇದನವನ್ನು ಪಡೆದುಕೊ, ನನಗಿಂತ ಒಳ್ಳೆಯ ಹೆಂಗಸೊಬ್ಬಳನ್ನು ಮದುವೆಯಾಗು, ಎಂದಳು. ಈ ಹೆಂಗಸಿನ ವಿಷಯ ನನಗೆ ತುಂಬಾ ಕನಿಕರವಾಯಿತು ಸ್ವಾಮಿ. ಇವಳಿಗೆ ಏನು ಉತ್ತರ ಕೊಡುವುದು ನನಗೆ ತೋಚಲಿಲ್ಲ. ಅವಳು, ಹ್ಯಾರೀ, ಹಿಂದಿನ ಪ್ರೀತಿಯ ನೆನಪಾಗಿ ನನಗೆ ಒಂದೇ ಒಂದು ಮುತ್ತು ಕೊಡು, ಅಷ್ಟು ಮಾಡಿ ಹೊರಟುಬಿಡು, ಈ ದಾಂಪತ್ಯ ಮುಗಿಯಲಿ, ಎಂದಳು.'

ಕ್ಯಾಪ್ಟನ್ ಹಲವು ಕ್ಷಣ ಮೌನವಾಗಿ ಕುಳಿತನು. ಆಮೇಲೆ ಹೇಳಿದನು. 'ನನಗೆ ತುಂಬ ಅಸಹ್ಯ ಆಗಿತ್ತು ಸ್ವಾಮಿ. ಹೇಗೆ ನಡೆದುಕೊಳ್ಳುವುದು ಎನ್ನುವುದೇ ತೋರಲಿಲ್ಲ. ಮುತ್ತು ಕೊಡು ಎಂದು ಅವಳು ಹೇಳಿದಳು ಸರಿ. ನನಗೆ ಮುತ್ತಿಡುವ ಮನಸ್ಸಿರಲಿಲ್ಲ. ಇವಳ ವಿಷಯಕ್ಕೆ ನನ್ನ ಜೀವದಲ್ಲಿ ತುಂಬ ಕನಿಕರ ಮರುಕ ಉಕ್ಕುತ್ತಿತ್ತು. ಆದರೆ ಅದನ್ನೂ ಅಡಗಿಸುವ ಮಟ್ಟಿಗೆ, ನಾನು ಇಷ್ಟು ಅಗ್ಗವಾದೆನೇ, ಎಂಬ ಆಗ್ರಹ ಬೆಳೆದು ನಿಂತಿತ್ತು. ಅವಳ ಬೇಡಿಕೆ ಕಿವಿಗೆ ಬೀಳಲಿಲ್ಲ ಎಂಬಂತೆ ಸುಮ್ಮನಿದ್ದು ನಾನು, ನಿನಗೆ ಗುಣವಾಗಲಿ, ನೆಲ್, ಮರಳಿ ಮಾತನಾಡೋಣ, ಎಂದು ಹೇಳಿ ಹೊರಟು ಬಂದೆನು.'

'ಸರಿ, ಕ್ಯಾಪ್ಟನ್. ನಿಮ್ಮ ಮನಸ್ಸಿಗೆ ಬಹು ನೋವಾಗಿರುವುದು ಕಾಣುತ್ತಿದೆ. ಒಣಮಾತಿನ ಸಮಾಧಾನ ಹೇಳುವುದು ನನಗೆ ಇಷ್ಟವಿಲ್ಲ. ಯಾವ ಕಷ್ಟವೇ ಬರಲಿ ಸಹಿಸಿಕೊಳ್ಳಬೇಕು ಎಂಬುದನ್ನು ನೀವು ಬಲ್ಲಿರಿ.'

'ಸಹಿಸಿಕೊಳ್ಳುತ್ತಿದೇನೆ ಸ್ವಾಮಿ. ಏನು ಮಾಡುವುದೆಂದು ನಿಶ್ಚಯ ಕಾಣದೆ ನಾಲ್ಕು ದಿನ ನಡೆದಾಡಿದೆನು. ಈಗ ಒಂದು ತಾಸಿಗೆ ಹಿಂದೆ, ಸಂಗತಿ ತಿಳಿದೊಡನೆ ನಾನು ನಿಮ್ಮಲ್ಲಿಗೆ ಬಂದು ನಿಮ್ಮ ಸಲಹೆಯನ್ನು ಕೇಳಬೇಕಾಗಿತ್ತು, ಎಂದು ತೋರಿತು.'

'ಹಾಗಾದರೆ ನಾನು ನಿಮ್ಮ ಎದುರಿಗೆ ಬಂದದ್ದು ಒಳ್ಳೆಯದಾಯಿತು.'

'ಅಡ್ಡಿ ಇಲ್ಲದೆ ಸ್ವಾಮಿ. ಆ ವಿಷಯದಲ್ಲಿ ಸಂದೇಹ ಇಲ್ಲ.'

‘ನಾನು ಹೇಗೆ ನೆರವಾಗಬಹುದು ಹೇಳಿ.’

‘ನಾನು ಏನು ಮಾಡುವುದು ಸರಿ ಎಂದು ತಮಗೆ ತೋರುತ್ತದೆ?’

‘ಹಾಗೆ ಬೇಡಿ. ಏನು ಮಾಡಬೇಕೆಂಬುದು ನಿಮಗೆ ತೋರುತ್ತಿದೆ ಅದನ್ನು ಹೇಳಿ. ಹಾಗೆ ಮಾಡುವುದೇ ಎಂದು ಯೋಚಿಸೋಣ.’

‘ಅಗ್ಗವಾದೆನೇ ಎಂಬ ಆಗ್ರಹ ಇನ್ನೂ ಮನಸ್ಸಿನಲ್ಲಿ ಮೇಲ್ಗೈಯಾಗಿಯೇ ಇದೆ ಸ್ವಾಮಿ. ಆದರೆ ಈ ಬುದ್ಧಿಯಿಂದ ನಿಶ್ಚಯಕ್ಕೆ ಬರುವುದು ಸರಿಯಲ್ಲ ಎಂದು ಒಳಗೆ ಏನೋ ಉಸುರುತ್ತಿದೆ. ಆದ ಕಾರಣವೇ ನಾನು ಇಲ್ಲಿಗೆ ಬಂದದ್ದು. ನಡೆದಿರುವ ಸಂಗತಿಯನ್ನು ಸಮಾಧಾನವಾಗಿ ನೋಡಿ ಪ್ರಜ್ಞೆಯಿಂದ ನಿಶ್ಚಯಿಸುವ ಹಿರಿಯ ಏನು ಮಾಡೆನ್ನುತ್ತಾರೆ, ಎಂದು ತಿಳಿಯಬೇಕು.’

‘ಕ್ಯಾಪ್ಟನ್ ಸಾಹೇಬರೇ, ಬೇರೊಬ್ಬರು ಕಷ್ಟದಲ್ಲಿ ಸಿಕ್ಕಿದಾಗ ಸಮಾಧಾನದಿಂದ ಪ್ರಜ್ಞೆಯಿಂದ ನಡೆಯುವುದು ದೊಡ್ಡ ಮಾತಲ್ಲ. ನಿಮಗೆ ಅಡಸಿರುವ ವ್ಯಸನ ನನಗೆ ಅಡಸಿದ್ದರೆ ನಾನು ನಿಮ್ಮ ಈ ವಿವೇಕದಿಂದ ನಡೆದುಕೊಳ್ಳುತ್ತಿದ್ದೆನೇ ನಾನು ಹೇಳಲಾರೆ. ನಮ್ಮ ಜನವನ್ನು ನೀವು ಇಷ್ಟ ಬಂದಷ್ಟು ಹೊಗಳಿ; ಇಂಥ ಮಾತಿನಲ್ಲಿ ಈ ದೇಶದ ನಾವು ಪಶ್ಚಿಮದೇಶಗಳ ನಿಮಗಿಂತ ಕಠಿಣಮನಸ್ಸಿನ ಜನ.’

‘ಅದು ಸಾಧ್ಯ, ಸ್ವಾಮಿ.’

‘ನಿಶ್ಚಯವನ್ನು ಆಗ್ರಹದ ಪಾಲಿಗೆ ಬಿಡಬಾರದು ಎಂಬ ಎಣಿಕೆ ಯಾವುದಿದೆ ಅದು ನನಗೆ ಪೂರ್ಣವಾಗಿ ಸಮ್ಮತ. ನಿಮ್ಮ ಕನಿಕರ ಮರುಕ ನೀವು ಎಂಥ ಒಳ್ಳೆಯವರೆಂಬುದನ್ನು ತೋರುತ್ತವೆ. ಜೊತೆಗೆ ಅವು ಇನ್ನೊಂದು ಸಂಗತಿಯನ್ನೂ ತೋರುತ್ತವಲ್ಲವೇ? ನಿಮ್ಮ ಗೃಹಿಣಿ ಹಲವುವರ್ಷ ನಿಮಗೆ ಅತ್ಯಂತ ಸಾಧ್ವಿಯಾದ ಹೆಂಡಿರಾಗಿ ನಡೆದಿದ್ದಾರೆ.’

‘ನಿಜ, ಸ್ವಾಮಿ.’

‘ಗಂಡು ಬರಿಯ ಗಂಡಾಗಿ ಯೋಗ್ಯತೆಯನ್ನಳೆಯದೆ ಮಾನವನಾಗಿ ನೋಡುವುದಾದರೆ ಒಂದು ಹೆಣ್ಣಿನ ತಪ್ಪು ಒಂದು ಗಂಡಿನ ತಪ್ಪಿಗಿಂತ ಹೆಚ್ಚಿನ ತಪ್ಪು ಆಗುವುದಿಲ್ಲ. ನಾನು ಕ್ರೈಸ್ತನಲ್ಲ, ಆದರೂ ತಪ್ಪಿ ನಡೆದಳೆಂಬ ಒಬ್ಬ ಹೆಂಗಸನ್ನು ಎಳೆದು ತಂದು ಎದುರಲ್ಲಿ ನಿಲ್ಲಿಸಿದಾಗ ಕ್ರೈಸ್ತಗುರು ಮಾಡಿದ ಉಪದೇಶ ಹಿರಿಯ ಉಪದೇಶ ಎಂದು ನನಗೆ ಎಲ್ಲ ವೇಳೆಯೂ ಕಂಡಿದೆ.’

‘ಸರಿ ಸ್ವಾಮಿ, ಹಾಗಾದರೆ ತಾವು ಹೇಳುವುದು ನಾನು ನನ್ನ ಹೆಂಡತಿಯನ್ನು......’

‘ಹೌದು ಅದು ನನ್ನ ಅಭಿಪ್ರಾಯ.’

‘ಒಳ್ಳೆಯದು ಸ್ವಾಮಿ. ನಾಳೆ ಬೆಳಗ್ಗೆ ಆಸ್ಪತ್ರೆಗೆ ಹೋಗಿ, ಎಂದಿನಂತೆ ಬಾಳೋಣ ಎಂದು ನಾನು ನನ್ನ ಹೆಂಡತಿಗೆ ಹೇಳುತ್ತೇನೆ.’

‘ಹೇಳಿ, ಕ್ಯಾಪ್ಟನ್. ಇದುವರೆಗೆ ನೀವು ದೊಡ್ಡ ಮನುಷ್ಯರಾಗಿ ಬಾಳಿದ್ದೀರಿ. ಈ ಮಾತನ್ನು ಆಡಿ ಆ ದೊಡ್ಡತನಕ್ಕೆ ಕಿರೀಟವಿಡುತ್ತೀರಿ.’

‘ಉಪಕಾರವಾಯಿತು, ಸ್ವಾಮಿ.’

೪

ಇದಾದಮೇಲೆ ನಾಲ್ಕುವಾರದಲ್ಲಿ ಕ್ಯಾಪ್ಟನ್ ಮಹಾಶಯನಿಂದ ನನಗೆ ಮುಂಬೈಯಿಂದ ಒಂದು ಪತ್ರ ಬಂದಿತು. ಕ್ಯಾಪ್ಟನ್ ತಿಂಗಳೆಲ್ಲ. ಮುಂಬೈಯಲ್ಲಿದ್ದನಂತೆ. ಆತನ ಹೆಂಡತಿ ಇತ್ತೀಚೆ ಮುಂಬೈಗೆ ಹೋಗಿ ಆತನ ಜೊತೆ ಸೇರಿದ್ದಳು. ‘ನಾವು ಪುಣೆಗೆ ಮರಳಿ ಬಂದಾಗ ತಪ್ಪದಂತೆ ತಮ್ಮನ್ನು ಕಾಣುತ್ತೇವೆ,’ ಎಂದು ಕ್ಯಾಪ್ಟನ್ ಆ ಪತ್ರದಲ್ಲಿ ಬರೆದಿದ್ದನು.

ನಾನು ಮರಳಿ ಆತನನ್ನು ಕಂಡಿಲ್ಲ.

ಸಂಯಮಿ ಕೇಟೋ

೧

ರೋಮಿನ ಪ್ರಜಾಪ್ರಭುತ್ವ ಅಳಿಯುವುದಕ್ಕೆ ಬಂದಿದ್ದ ಕಾಲದಲ್ಲಿ ಸರ್ವಾಧಿಕಾರಿಗಳಾಗಲು ಪ್ರಯತ್ನ ಮಾಡುತ್ತಿದ್ದ ಪಾಂಪೇ, ಸೀಸರ್ ಪ್ರಭೃತಿಗಳ ಜೊತೆಯಲ್ಲಿ, ಶ್ರೀಮಂತನಾಗಿ ಹುಟ್ಟಿ ಅಧಿಕಾರಗಳಿಸು-ವುದಕ್ಕೆಂದೇ ಬೆಳೆದು ಅಧಿಕಾರ ಸ್ಥಾನಗಳಲ್ಲಿ ನಿಂತೂ ಹಿರಿಯರ ರೀತಿಯನ್ನು ಬಿಡದೆ ಉಳಿದವರಿಗೆ ಆದರ್ಶ ಆಗುವಂತೆ ನಡೆಯುತ್ತ ಕೇಟೋ ಎಂಬ ಮಹಾತ್ಮ ಒಬ್ಬನುಂಟು.

ರೋಮಿನ ಪುರಾತನ ಅತ್ಯುತ್ತಮ ಸಂಪ್ರದಾಯದ ಅಂದಿನ ಅತ್ಯುತ್ತಮ ಪ್ರತಿನಿಧಿ ಕೇಟೋ. ಅದೆಷ್ಟು ಉತ್ತಮ ಎಂದರೆ, ಇವನು ಉತ್ತಮ ಮಾತ್ರವಲ್ಲ ಏಕಮಾತ್ರ ಎಂದು ಬಲ್ಲವರು ಹೇಳು-ವರು.

ಕೇಟೋ ಶ್ರೇಷ್ಠರಾದ ಗುರುಗಳಲ್ಲಿ ತತ್ವವನ್ನು ಕಲಿತಿದ್ದನು; ಅದನ್ನು ತನ್ನ ಜೀವನದಲ್ಲಿ ಅನು-ಷ್ಠಾನ ಮಾಡಿದ್ದನು. ಮನೆಯಲ್ಲಿ, ಬೀದಿಯಲ್ಲಿ, ಸಭೆಯಲ್ಲಿ, ಸಂತೆಯಲ್ಲಿ, ರೋಮಿನ ಮತ್ತು ಚಕ್ರಾ-ಧಿಪತ್ಯದ ಆಡಳಿತದಲ್ಲಿ, ಇವನು ವಹಿಸಿಕೊಳ್ಳಬೇಕಾಗಿ ಬಂದ ಅಧಿಕಾರದ ನಿರ್ವಹಣೆಯಲ್ಲಿ ನಿ-ಷ್ಠುರವಾದ ಸತ್ಯ, ನಿಸ್ಪೃಹ ನಿರ್ಲೇಪದಿಂದ ನಡೆದುಕೊಂಡು ಕೇಟೋ ಎಂದರೆ ನ್ಯಾಯ, ಕೇಟೋ ಎಂದರೆ ಸತ್ಯ, ಕೇಟೋ ಎಂದರೆ ನಿರ್ಲೇಪ, ಎಂದು ಜನ ಗ್ರಹಿಸುವಂತಾಯಿತು.

೨

ಪಾಂಪೇ ಸರ್ವಾಧಿಕಾರಿಯಾಗಲು ಹಂಬಲಿಸುತ್ತಿದ್ದ ತರುಣ. ಒಂದು ದಿನ ರಾಷ್ಟ್ರ ಸದಸ್ಸು ಆಡ-ಳಿತದ ವಿಚಾರಕ್ಕಾಗಿ ಸಭೆಸೇರಿದೆ. ಸಭೆಯಲ್ಲಿ ಕೇಟೋ, ಸೀಸರ್, ಪಕ್ಕಪಕ್ಕದಲ್ಲಿ ಕುಳಿತಿದ್ದಾರೆ. ಪಾಂ-

ಪೇಗೆ ಕೆಲವು ಮರ್ಯಾದೆಗಳನ್ನು, ಅಧಿಕಾರಗಳನ್ನು, ಕೊಡುವುದೇ ಬಿಡುವುದೇ ಎಂಬ ವಿಷಯ ಚರ್ಚೆಯಾಗುತ್ತಿದೆ.

ಸಭಿಕನೊಬ್ಬನು ಪಾಂಪೇಗೆ ಆ ಅಧಿಕಾರಗಳನ್ನೂ, ಮರ್ಯಾದೆಗಳನ್ನೂ ಕೊಡಕೂಡದೆಂದು ಖಂಡಿತವಾಗಿ ವಾದಿಸಿದನು: "ರಾಜ್ಯದಲ್ಲಿ ಪೂರ್ವದ ಸಭ್ಯತೆ ನಾಶವಾಗಿದೆ. ಸೇವೆಯ ದೃಷ್ಟಿಯಿಂದ ಅಧಿಕಾರಕ್ಕೆ ಬರುವ ಜನ ಕಡಮೆಯಾಗಿದ್ದಾರೆ. ನಿಜವಾಗಿ ಹೇಳುವುದಾದರೆ ಒಬ್ಬನನ್ನು ಹೊರತು ಉಳಿದ ನಾವು ಯಾರೂ ಸ್ವಾರ್ಥದಿಂದ ಮುಕ್ತರಾದವರೆಂದು ಹೇಳಿಕೊಳ್ಳುವಂತಿಲ್ಲ. ಅಧಿಕಾರಕ್ಕೆ ನಾಗರಿಕರ ಮತಬೇಕು; ಮತ ದೊರೆಯುವುದಕ್ಕೆ ನಾಗರಿಕರಿಗೆ ಪ್ರಿಯವಾದುದನ್ನು ಮಾಡಬೇಕು; ಹೆಚ್ಚು ಮತಬೇಕಾದರೆ ಹೆಚ್ಚು ಜನಕ್ಕೆ ಪ್ರಿಯವಾದುದನ್ನು ಮಾಡತೊಡಗಬೇಕು; ಹೆಚ್ಚು ಜನ ಬಡವರು. ಆದಕಾರಣ ರಾಷ್ಟ್ರದ ಕೋಶದಿಂದ ಹೇರಳವಾಗಿ ಹಣ ವೆಚ್ಚ ಮಾಡಿ ಬಡವರಿಗೆ ಬಿಟ್ಟಿ ಧಾನ್ಯವನ್ನು ಹಂಚಬೇಕು; ಹೀಗೆ ಹಂಚಿ ಅವರಿಂದ ಒಳ್ಳೆಯವರೆನಿಸಿಕೊಂಡು ಅವರ ಮತಗಳನ್ನು ಗಳಿಸಿ ನಾವು ಅಧಿಕಾರಕ್ಕೆ ಬರಬೇಕು: ಇದಾಗಿದೆ ನಮ್ಮ ಜೀವನ ಸೂತ್ರ. ಸೇವೆಯ ಮಾತು ಹಿಂದೆ ಬಿದ್ದಿತು; ಸ್ವಾರ್ಥವೇ ಮುಂದಾಗಿದೆ. ಇಂಥ ಹೊತ್ತಿನಲ್ಲಿ ಒಬ್ಬನನ್ನು ಸರ್ವಾಧಿಕಾರಿಯನ್ನಾಗಿ ಮಾಡಿ ಅವನ ಕೈಗೆ ಕೋಶವನ್ನು ಕೊಟ್ಟರೆ ರಾಷ್ಟ್ರ ಉಳಿಯಬೇಕು ಹೇಗೆ? ಆ ಸರ್ವಾಧಿಕಾರಿ ಕೇಟೋ ಆದರೂ ಸರಿಯಾಗಿ ನಡೆದುಕೊಳ್ಳಬಹುದೊ ಎಂಬ ವಿಷಯದಲ್ಲಿ ನನಗೆ ಸಂದೇಹ. ಇನ್ನು ಉಳಿದವರ ಮಾತೇನು?" ಎಂದನು.

ಹಿಂದಿನ ಮಹಾತ್ಮರಂತೆ ಹಿರಿಯ ದಾರಿಯಲ್ಲಿ ನಡೆಯುತ್ತಿರುವವನು ಒಬ್ಬನೇ ಎಂದಾಗ ಆ ಒಬ್ಬನು ಕೇಟೋ ಎನ್ನುವುದನ್ನು ಸಭಿಕರು ಬಲ್ಲರು; ಅವರೆಲ್ಲ ಅವನ ಕಡೆ ನೋಡಿದರು. ಗೆಳೆಯರು ಹೆಮ್ಮೆಯಿಂದ, ಆಗದವರು ಈರ್ಷೆಯಿಂದ: ಆದರೆ ಒಂದಲ್ಲ ಒಂದು ಭಾವದಿಂದ ಎಲ್ಲರೂ ನೋಡಿದವರೇ. ಕೊನೆಗೆ ಈ ಒಬ್ಬನು ಯಾರು ಎನ್ನುವುದು ಸ್ಪಷ್ಟವಾಗಿ ಕಂಡಾಗ ಸಭೆ ಒಟ್ಟಿನಲ್ಲಿ ಉತ್ಸಾಹದಿಂದ 'ಹೌದು, ಹೌದು,' ಎಂದಿತು.

೨

ಮತ್ತೊಬ್ಬ ಸಭಿಕನು ಮಾತನಾಡುವುದಕ್ಕೆ ಎದ್ದನು. ಇತ್ತ ಕೇಟೋ ಪಕ್ಕದಲ್ಲಿ ಕುಳಿತಿದ್ದ ಸೀಸರಿಗೆ

ಸಭೆಯ ಸೇವಕನು ಒಂದು ಪತ್ರವನ್ನು ತಂದುಕೊಟ್ಟನು. ಸೀಸರ್ ಅದನ್ನು ತೆಗೆದುಕೊಂಡು ಓದಿ ಹಿಗ್ಗಿದನು. ಕೇಟೋ, ಅದೇನು ಕಾಗದ, ಎಂದು ಕೇಳಿದನು. ಕಾಗದದ ಮೇಲಿನ ಬರಹ ಅವನಿಗೆ ತಿಳಿದ ಬರಹವಾಗಿತ್ತು. ಸೀಸರ್ 'ಏತರದೋ ಒಂದು ಕಾಗದ,' ಎಂದನು.

ಕೇಟೋ, 'ಸಭೆಯಲ್ಲಿ ಕುಳಿತಿರುವಾಗ ಪ್ರೇಮ ಪತ್ರಗಳೇ?' ಎಂದನು.

ಸೀಸರ್, 'ಬರೆಯುವವರು ಇಂಥ ಹೊತ್ತಿನಲ್ಲಿ ಕಳುಹಿಸಿದರೆ ನಾನು ಮಾಡುವುದೇನು?' ಎಂದನು.

'ಕಾಗದ ಈ ಚರ್ಚೆಗೆ ಸಂಬಂಧಪಟ್ಟದ್ದಲ್ಲವಷ್ಟೆ?'

'ಅಲ್ಲ.'

'ಈಚೆಗೆ ನೀನು ಸತ್ಯದ ದಾರಿಯನ್ನು ಬಿಟ್ಟಿದ್ದೀಯೆ. ನಿನ್ನ ಮಾತು ನಿಜವೊ ಸುಳ್ಳೋ, ಕಾಗದವನ್ನು ನಾನು ನೋಡಲೆ?'

'ಎಲ್ಲ ಭಾವವನ್ನೂ ಇಂಗಿಸಿದೇನೆಂದು ಹೆಮ್ಮೆ ಪಡುವ ನೀನು ನೋಡಿದರೆ ತಪ್ಪೇನು? ನೋಡು.' ಹೀಗೆಂದು ಸೀಸರ್ ಕಾಗದವನ್ನು ಕೇಟೋ ಕಡೆಗೆ ಎಸೆದನು. ಕೇಟೋ ತೆಗೆದು ನೋಡುವಲ್ಲಿ ಅದು ಅವನ ತಂಗಿ ಸರ್ವಿಲಿಯಾ ಸೀಸರಿಗೆ ಬರೆದದ್ದಾಗಿತ್ತು. ಅಂದಿನ ಸಂಜೆ ಸೀಸರ್ ತನ್ನಲ್ಲಿ ಬರಬಹುದೆಂದು ಅವಳು ಬರೆದಿದ್ದಳು.

ತನ್ನ ತಂಗಿ ಸೀಸರೊಂದಿಗೆ ಅತಿಸಲಿಗೆಯಿಂದ ನಡೆಯುತ್ತಿದಾಳೆಂದು ಕೇಟೋ ಕೇಳಿದ್ದನು. ಆದರೆ ಆ ವಿಷಯದಲ್ಲಿ ಆತನು ಬೇಡವೆಂದು ಹೇಳುವ ಗೋಜಿಗೆ ಹೋಗಿರಲಿಲ್ಲ. ಅವಳ ತಿಳಿವಳಿಕೆ, ಅವಳ ಆಸೆ, ಅವಳ ಯೋಗ್ಯತೆಯನ್ನನುಸರಿಸಿ ಅವಳ ಬಾಳು ನಡೆಯಬೇಕು. ತಾನು ಹೇಳಿದರೆ ಕೇಳುವಳೆ? ತಡೆದರೆ ನಿಲ್ಲುವಳೆ? ಅಣ್ಣನಿಗೆ ಇಷ್ಟವಿಲ್ಲವೆಂದು, ಇದು ಮರ್ಯಾದೆಗೆ ಕಡಮೆಯೆಂದು, ಅವಳೇನು ಕಾಣಳೆ? ಇದು ಈ ಅಣ್ಣನ ಮನೋಧರ್ಮ. ಇದನ್ನೇ ಸೀಸರ್ ಭಾವ ಇಂಗಿದ ಸ್ಥಿತಿ ಎಂದು ವರ್ಣಿಸಿದ್ದು.

೪

ವಾದ ಮುಂಬರಿದಿತ್ತು. ಸಭೆಯಲ್ಲಿ ಒಂದು ಪಕ್ಷ, ಕೇಟೋ ಈ ವಿಷಯದಲ್ಲಿ ತನ್ನ ಅಭಿಪ್ರಾಯ-ವನ್ನು ತಿಳಿಸಲಿ, ಎಂದು ಬಯಸಿತು.

ಕೇಟೋ ಎದ್ದು ನಿಂತನು. ಕೋಪತಾಪದ ಕಲೆಯಿಲ್ಲದೆ, ಅಭಿಮಾನ ಮಮತೆಯ ಸೋಕಿಲ್ಲದೆ, ಎರಡು ಪಕ್ಷವನ್ನೂ ವಿವರಿಸಿ ಭಾಷಿಸಿದನು. "ಪಾಂಪೇ ದಕ್ಷ ಸೇನಾಪತಿ. ಆದರೆ ಅವನು ಸೇನಾಪತಿ ಮಾತ್ರವಾಗಿರಬೇಕು. ರಾಜನಾಗಬಾರದು. ರಾಜಪದವಿ ರೋಂ ಜನದ್ದು. ಅವರು ಯಾವ ಮಾ-ತನ್ನೂ ಕಲೆತು ವಿಚಾರಿಸಿ ನಿರ್ಧರಿಸುವ ಮೇಲಿನ ಸ್ಥಾನದಲ್ಲಿರಬೇಕು ಹೊರತಾಗಿ, ಯಾವನ ಒಬ್ಬನ ನಿರ್ಧಾರವನ್ನು ನಡೆಸುವ ಕೀಳುಸ್ಥಿತಿಗೆ ಇಳಿಯಬಾರದು. ಹಾಗೆ ಮಾಡಿದಾಗ್ಗೆ ಅವರು ಪ್ರಭುತ್ವದ ಹೊಣೆಯನ್ನು ತಪ್ಪಿಸಿಕೊಂಡು ದಾಸ್ಯದ ನಿಶ್ಚಿಂತೆಗೆ ನಾಲಗೆ ಊರಿದಂತಾಯಿತು. ಸರ್ವಾಧಿಕಾರಿ-ಯಾದ ಜನವೇ ಸರ್ವಾಧಿಕಾರಿಯಾಗಿ ಉಳಿಯಬೇಕು," ಎಂದು ವಾದಿಸಿದನು.

ಉಳಿದವರ ಮಾತಷ್ಟೆ ಆಗಿದ್ದರೆ ಸಭೆ ಯಾವ ನಿರ್ಣಯಕ್ಕೆ ಬರಬಹುದಾಗಿತ್ತೊ. ಕೇಟೋ ಹೀಗೆ ಹೇಳಿದ ಮೇಲೆ ಪಾಂಪೇ ಪಕ್ಷದವರು ತಮಗೆ ಸೋಲು ನಿಜವೆಂದು ತಿಳಿದುಕೊಂಡರು. ಸಭೆಯ ನಿರ್ಣಯವೂ ಹಾಗೆಯೇ ಆಯಿತು.

೫

ಸಭೆ ಮುಗಿದು ಕೇಟೋ ಹೊರಗೆ ಬರುವವೇಳೆಗೆ ಹೋರ್ಟೆನ್ಸಿಯಸ್ ಎಂಬ ಅವನ ಹಿರಿಯ ಮಿತ್ರನು ಅವನ ಜೊತೆಗೆ ಬಂದನು. 'ನಿನ್ನೊಂದಿಗೆ ಮಾತನಾಡುವ ಸಂಗತಿ ಇದ್ದಿತು,' ಎಂದು ಹೇಳಿ 'ಸಂಜೆಗೆ ಬರಲಿ?' ಎಂದು ಕೇಳಿದನು. ಕೇಟೋ, 'ಆಗಬಹುದು,' ಎಂದನು.

ಮನೆಗೆ ಹೋಗುತ್ತ ಕೇಟೋ ಸ್ವಲ್ಪ ಹೊತ್ತು ನಗರದ ಉದ್ಯಾನದಲ್ಲಿ ಕುಳಿತನು. ಹೊತ್ತಾದಮೇಲೆ ಮನೆಯಕಡೆ ಹೊರಟನು.

೬

ದಾರಿಯ ಚೌಕದಲ್ಲಿ ಪಾಂಪೆಯ ಒಂದು ಮೂರ್ತಿ ಉಂಟು; ಅದರ ಬಳಿ ಪಾಂಪೆಯ ವಿ-ರೋಧಿಗಳು ಒಂದು ಸಭೆಯನ್ನು ಮಾಡಿ, ಇವನು ಸ್ವಾತಂತ್ರ್ಯದ ವಿರೋಧಿ, ಜನತೆಯ ಶತ್ರು, ರಾ-ಷ್ಟ್ರದ್ರೋಹಿ, ಎಂದು ಮುಂತಾಗಿ ಸಿಕ್ಕಿದಂತೆ ಮಾತನಾಡಿ ಜನರನ್ನು ರೇಗಿಸಿದ್ದರು. ಕೇಟೋ ಅಲ್ಲಿಗೆ ಬರುವವೇಳೆಗೆ ರೇಗಿದ್ದ ಜನ ಪಾಂಪೆಯ ಮೂರ್ತಿಯನ್ನು ಕೆಳಗೆ ಎಳೆದು ಹಾಕುವುದರಲ್ಲಿ ಉದ್ಯುಕ್ತ-ರಾಗಿದ್ದರು. ಇವರ ಉದ್ಯಮವನ್ನು ಕಂಡು ಕೇಟೋ ಏನು ಸಂಗತಿಯೆಂದು ವಿಚಾರಿಸಿದನು. ಅದ-ನ್ನು ತಿಳಿದು, 'ನನ್ನ ನಾಲ್ಕು ಮಾತನ್ನು ಕೇಳಿ, ಆಮೇಲೆ ನಿಮ್ಮ ಇಷ್ಟದಂತೆ ಮಾಡಿ,' ಎಂದನು.

ಆ ಜನರ ಮುಖಂಡರು ಒಪ್ಪಿದರು. ಪಾಂಪೇಗೆ ಸರ್ವಾಧಿಕಾರ ಕೊಡಕೂಡದೆಂದು ಇವನು ಮಧ್ಯಾಹ್ನವಾದಿಸಿದ್ದನ್ನು ಅವರು ಬಲ್ಲರು: ಇವನ ಮಾತಿನಿಂದ ತಮ್ಮ ಕಾರ್ಯದಲ್ಲಿ ಉತ್ತೇಜನ ದೊ-ರೆಯುವುದೆಂದು ಅವರು ನಿರೀಕ್ಷಿಸಿದರು.

ಕೇಟೋ ಹೇಳಿದನು: "ಸರ್ವಾಧಿಕಾರಿ ಆಗುವೆನೆಂಬ ಪಾಂಪೆಯನ್ನು ಕುರಿತು ನೀವು ಆಗ್ರ-ಹಗೊಳ್ಳುವುದು ನ್ಯಾಯವಾಗಿದೆ. ಆದರೆ ಈ ಪಾಂಪೇ ಆ ಪಾಂಪೇ ಅಲ್ಲ. ಹಿಂದೆ ನಮ್ಮ ರಾಷ್ಟ್ರಕ್ಕೆ ವಿಜಯವನ್ನು ಸಂಪಾದಿಸಿಕೊಟ್ಟ ಶ್ರೇಷ್ಠ ಸೇನಾಪತಿಯ ವಿಗ್ರಹ ಇದು. ಇಲ್ಲಿ ಈ ವಿಗ್ರಹವನ್ನು ನಿಲ್ಲಿಸಿ ನಿಮ್ಮ ಸೇವಕನಿಗೆ ನೀವು ಮರ್ಯಾದೆ ಮಾಡಿದಿರಿ. ಅದನ್ನು ಈಗ ಹಿಂದಕ್ಕೆ ತೆಗೆಯಬೇಕಾದುದೇ-ನು? ಆ ಒಳ್ಳೆಯದಕ್ಕೆ ಆ ಮರ್ಯಾದೆ. ಇಂದು ಅವನು ತಪ್ಪು ಮಾಡಿದರೆ ನೀವು ನಿಮ್ಮ ಅಸಮ್ಮತಿಯ-ನ್ನು ಬೇರೆಯಾಗಿ ತೋರಿಸಬೇಕು. ಈ ವಿಗ್ರಹವನ್ನು ಕಿತ್ತು ಹಾಕಿ ಎನ್ನುವವರು ಪ್ರಾಜ್ಞರೆಂದು ನಾನು ಹೇಳಲಾರೆ. ಇದರಿಂದ ವ್ಯರ್ಥ ವಿವಾದ ಹೆಚ್ಚುತ್ತದೆ. ಸಮಾಧಾನವಾಗಿ ಹೋಗೋಣವೆಂಬ ಬಹು ಜನರ ಮನಸ್ಸು ನಿಮ್ಮ ಅತಿವರ್ತನದಿಂದ ಬೇಸತ್ತು ನಿಮ್ಮ ವಿರೋಧಿಗಳ ಕಡೆಗೆ ಒಲಿಯಬಹುದು. ನನ್ನ ಮಾತನ್ನು ಕೇಳುವುದಾದರೆ ನೀವು ಯಾರೂ ಈ ವಿಗ್ರಹದ ತಂಟೆಗೆ ಹೋಗಬಾರದು. ಎಲ್ಲರೂ ಸುಮ್ಮನೆ ನಿಮ್ಮ ನಿಮ್ಮ ಮನೆಗಳಿಗೆ ಹೋಗಬೇಕು."

ಗುಂಪು, "ಎಲಾ, ಹೌದೊ," "ಅಮ್ಮ! ಎಂತಹ ದೊಡ್ಡ ಮನುಷ್ಯ," "ಮಧ್ಯಾಹ್ನ ಹಾಗೆ ಹೇಳಿ ಈಗ ಹೀಗೆ ನುಡಿಯುತ್ತಿದಾನೆ! ಊಸರವಳ್ಳಿ," "ಕೇಟೋ, ಕೇಟೋನೆ. ನ್ಯಾಯ ಎಂದರೆ ಇವನ ಹತ್ತಿರ ಕಲಿಯಬೇಕು," ಎಂದು ವಿಧ ವಿಧವಾಗಿ ಮಾತನಾಡಿಕೊಂಡಿತು. ಅದರ ಮುಂದಾಳುಗಳು

ತಮ್ಮ ತಮ್ಮಲ್ಲಿ ಆಲೋಚಿಸಿಕೊಂಡು ಈತನ ಸೂಚನೆ ಒಳ್ಳೆಯದು ಎಂದು ನಿರ್ಧರಿಸಿಕೊಂಡರು. ಪಾಂಪೆಯ ವಿಗ್ರಹ ಇದ್ದಂತೆ ಇರಲಿ ಎಂದು ನಿಶ್ಚಯಿಸಿ ತಮ್ಮ ಅನುಯಾಯಿಗಳೊಡನೆ ಅಲ್ಲಿಂದ ಚದರಿದರು.

ಪಾಂಪೇ ವಿಗ್ರಹ ಉಳಿಯಿತು.

೭

ಕೇಟೋ ರಾತ್ರಿ ಊಟ ಮುಗಿಸಿಕೊಂಡು ಹೆಂಡತಿ ಮಕ್ಕಳೊಡನೆ ಸಲ್ಲಾಪದಲ್ಲಿ ಕುಳಿತಿರುವಾಗ ಹೋರ್ಟೆನ್ಸಿಯಸ್ ಬಂದನು. ಗೆಳೆಯನೊಂದಿಗೆ ಈ ಮಾತು ಆ ಮಾತು ಆಡುತ್ತ ಸ್ವಲ್ಪ ಹೊತ್ತನ್ನು ಕಳೆದನು. ಸಂಜೆ ಕೇಟೋ ಪಾಂಪೇ ವಿಗ್ರಹವನ್ನು ಉಳಿಸಿದ್ದ ಸಂಗತಿ ಅವನಿಗೆ ತಿಳಿದಿತ್ತು.

"ಸ್ವಾರ್ಥದ ಸೋಂಕಿಲ್ಲದೆ ಹಿರಿಯರಂತೆ ನಡೆಯುವನೆಂದರೆ ನಿನಗೆ ಸಮ ನಮ್ಮ ಜನರಲ್ಲಿ ಈಗ ಮತ್ತೊಬ್ಬನಿಲ್ಲ. ನಿನಗೆ ಆಗದವರು ಕೂಡ ನಿನ್ನನ್ನು ಹೊಗಳುತ್ತಾರೆ. ನಿನ್ನ ಕೀರ್ತಿ ಹಿರಿದಾಯಿತು, ಕೇಟೋ. ಯಾವುದೇ ವಿವಾದ ಬಂದಾಗ ನಿಷ್ಪಕ್ಷಪಾತವಾಗಿ ನ್ಯಾಯವಾದ ತೀರ್ಪನ್ನು ಕೊಡುವನು ನೀನು ಒಬ್ಬನುಂಟು, ಎಂದು ಜನವೇ ಒಪ್ಪಿಕೊಂಡಿದೆ. ಜಗಳದ ಕಟ್ಟ ಕಡೆಗೆ, 'ಅಯ್ಯಾ, ಎಷ್ಟು ಮಾತು? ಕೇಟೋ ಹತ್ತಿರ ಹೋಗೋಣ ಬರುತ್ತೀಯಾ?' ಎನ್ನುವುದು ಗಾದೆಯಾಗಿದೆ. ತನ್ನ ಪಕ್ಷ ಸರಿ ಎಂಬ ಧೈರ್ಯವುಳ್ಳವನೇ ಈ ಮಾತನ್ನು ಆಡುವುದು. ನ್ಯಾಯಕ್ಕೆ ಹಿರಿಯರನ್ನ ಆರಿಸುವುದರಲ್ಲಿ ನಿನ್ನ ಹೆಸರು ಬಂದಾಗ, ತಪ್ಪು ಮಾಡಿದ ಮಂದಿ ತಮ್ಮ ಕೆಲಸ ಕೆಟ್ಟಿತೆಂದು ನಡುಗುತ್ತಾರೆ. ಬೇಡಿ ಬಿಡಿಸಿಕೊಳ್ಳುವಂತಿಲ್ಲ; ಆಸೆ ತೋರಿಸಿ ಬಿಡಿಸಿಕೊಳ್ಳುವಂತಿಲ್ಲ; ಮಾಡಿದ ತಪ್ಪನ್ನು ಮುಚ್ಚಿ ಮರೆ-ಸುವಂತಿಲ್ಲ; ಗತಿಯೇನು? ಆಯಿತು, ಕೇಟೋ ನ್ಯಾಯಾಧಿಕಾರಿಗಳಲ್ಲಿ ಒಬ್ಬನಾಗಿರುವುದು ಬೇಡ ಎನ್ನಬೇಕು. ಹಾಗೇನಾದರೂ ಹೇಳಿದರೆ ಅವರು ತಾವು ತಪ್ಪಿತಸ್ಥರೆಂದು ಮೊದಲೇ ಒಪ್ಪಿಕೊಂಡಂ-ತಾಯಿತು. 'ಕೇಟೋ ಎದುರಿಗೆ ನಿಲ್ಲುವುದಕ್ಕೆ ಹೆದರುತ್ತಾನೆ, ಸತ್ಯವಂತ ಯಾವನೂ ಇದಕ್ಕೆ ಹೆದರ ಬೇಕಾದದ್ದಿಲ್ಲ, ತಪ್ಪಿತಸ್ಥನಲ್ಲದಿದ್ದರೆ ತನ್ನ ಪ್ರತ್ಯಕ್ಷ ಶತ್ರುನಿಗೂ ಕೇಟೋ ಶಿಕ್ಷೆ ವಿಧಿಸುವನಲ್ಲ, ಇವನಿಗೆ ಏಕೆ ಹೆದರಿಕೆ?' ಪೂರ್ವದ ನಡತೆ ಬರಿಯ ನೆನಪಾಗುವ ದಿವಸದಲ್ಲಿ ನೀನು ಅದನ್ನು ನಿಜ ಮಾಡಿ ತೋರಿಸುತ್ತಿದ್ದೀಯೆ."

ಹೋರ್ಟೆನ್ಸಿಯಸ್ ಗೆಳೆಯನನ್ನು ಹೊಗಳುವುದಕ್ಕೆಂದು ಈ ಮಾತನ್ನಾಡುತ್ತಿರಲಿಲ್ಲ. ತನ್ನ ನಿಜ-ವಾದ ಮೆಚ್ಚುಗೆಯನ್ನೇ ಈ ಮಾತಿನಿಂದ ತಿಳಿಸಿದನು. ಅವನೂ ಕೇಟೋವಿನಂತೆ ಉದಾತ್ತ ವರ್ತ-ನೆಯ ಮನುಷ್ಯ. ಕೇಟೋ ಹೆಂಡತಿ ಮಕ್ಕಳು ಅವನ ಈ ಮಾತಿನಿಂದ ಸಂತೋಷಪಟ್ಟರು. ಕೇಟೋ ವಿಷಯ ಇಂಥ ಮಾತನ್ನು ಅವರು ಆಗಾಗ ಕೇಳುತ್ತಲೇ ಇರುವರು.

೮

ಕೇಟೋ ಇವನ ಈ ಮೆಚ್ಚಿಗೆಯ ಮಾತಿಗೆ ಉತ್ತರ ಹೇಳಲಿಲ್ಲ. ಒಳ್ಳೆಯ ಮಾತು ಬೇಡವೆಂದು ಅಲ್ಲ. ಬೇಕು; ಆದರೆ ಅದಕ್ಕೆ ಪ್ರತಿಕ್ರಿಯೆ ಯಾವುದು? 'ನಿಮ್ಮ ಪ್ರೀತಿ, ನನ್ನಲ್ಲಿ ಗುಣವಿಲ್ಲ' ಎಂದರೆ ಸುಳ್ಳಾಗುತ್ತದೆ. ಸುಳ್ಳಾಡಬಾರದೆಂದು 'ಹೌದು' ಎಂದರೆ ಆತ್ಮ ಪ್ರಶಂಸೆ. ಸ್ನೇಹಕ್ಕೆ ಪ್ರೇಮಕ್ಕೆ ಮಾತು ಪ್ರತಿ ಹೇಗೆ? ಸ್ನೇಹ ಪ್ರೇಮವೇ ನಿಜವಾದ ಪ್ರತಿಕ್ರಿಯೆ. ಅದು ನಡೆಯಲ್ಲಿ ಕಾಣಬೇಕು.

ಇವನ ಈ ಪದ್ಧತಿಯನ್ನು ಎಲ್ಲರೂ ಬಲ್ಲರು. ಮಾತನ್ನೇ ಆಡದ, ನಡತೆಯಲ್ಲೂ ಅತಿಯಾಗಿ ತೋರದ, ಇವನ ಸ್ನೇಹ ಪ್ರೇಮ ಉಂಟೋ ಇಲ್ಲವೋ ಎಂಬಷ್ಟು ತೆಳು ಆಗುತ್ತಿದ್ದವು. ಸ್ನೇಹಿತನಿಗೆ ಮಾತ್ರವಲ್ಲ, ಹೆಂಡತಿಗೆ ಅಷ್ಟೆ. ಮಕ್ಕಳಿಗೂ ಅಷ್ಟೆ. ಇವನ ಮನದ ಭಾವಕ್ಕೆ ವ್ಯಂಜನೆಯಿಲ್ಲ. ವ್ಯಂ-ಜನೆಯಿಲ್ಲದ್ದರಿಂದ ಭಾವವೇ ಇಲ್ಲದ ಒಂದು ಮರದ ತುಂಡೋ ಎಂಬಂತೆ ಇವನ ನಡತೆ ರಸವ-ರ್ಜವಾಗಿತ್ತು.

೯

ಹೋರ್ಟೆನ್ಸಿಯಸ್ ಏನೊ ಹೇಳಲು ಬಂದಿರುವನೆಂದು ತೋರಿ ಕೇಟೋವಿನ ಹೆಂಡತಿಯೂ ಮಕ್ಕಳೂ ಒಳಗೆ ಹೋದರು. ಹೋರ್ಟೆನ್ಸಿಯಸ್ ಆಮೇಲೆ, 'ಕೇಟೋ, ನಾನು ನಿನ್ನಲ್ಲಿ ಒಂದು ಭಿಕ್ಷೆ-ಯನ್ನು ಬೇಡಲು ಬಂದಿದೇನೆ, ಕೊಡುವೆಯಾ?' ಎಂದನು.

ಕೇಟೋ, 'ಗೆಳೆಯನು ಮಾತ್ರ ಅಲ್ಲ ಹಿರಿಯನೂ ಆದ ನೀನು ಇದು ಬೇಕೆಂದು ಕೇಳಿ ನಾನು ಇಲ್ಲ ಎನ್ನುವುದೇನಿದೆ? ಅದು ನನ್ನಲ್ಲಿ ಇದ್ದರೆ ಅಗತ್ಯವಾಗಿ ಕೊಡುವುದೇ,' ಎಂದನು.

"ನೋಡು ಕೇಟೋ, ಕೆಲವು ವರ್ಷದ ಹಿಂದೆ ನನ್ನ ಹೆಂಡತಿ ತೀರಿಕೊಂಡಳು. ನನಗೆ ಇದ್ದ ಮಕ್ಕಳು ಈಚೆಗೆ ತೀರಿಕೊಂಡವು. ಈಗ ನಾನು ತೀರ ಒಬ್ಬೊಂಟಿಯಾದೆ. ಮದುವೆ ಆದೇನು ಎಂದರೆ ಗುಣವಂತರಾದ ಹೆಣ್ಣುಮಕ್ಕಳು ನನ್ನಂಥ ವಯಸ್ಸಿನ ಮನುಷ್ಯನೊಂದಿಗೆ ಬಾಳಲು ಒಪ್ಪುವುದಿಲ್ಲ. ವಯಸ್ಸಾದ ಒಬ್ಬ ಜೊತೆಗಾತಿಯನ್ನು ನಾನು ಸಂಪಾದಿಸಬೇಕು. ಹತ್ತು ಕಡೆ ನೋಡಿದ್ದರಲ್ಲಿ ನನಗೆ ನಿಜವಾಗಿ ಒಪ್ಪಿಗೆ ಆದವಳು ನಿನ್ನ ಹೆಂಡತಿ ಮಾರ್ಸಿಯಾ ಒಬ್ಬಳೇ. ನಿನ್ನ ಮೊದಲ ಹೆಂಡತಿ ತೀರಿಕೊಂಡಾಗ ನೀನು ಇವಳನ್ನು ಮದುವೆಯಾಗದೆ ಬಿಟ್ಟಿದ್ದು ಈಗ ಅವಳು ದೊರಕುವಂತಿದ್ದರೆ ನಾನು ಇವಳ ತಂದೆಯನ್ನು ಬೇಡುತಿದ್ದೆನು. ಮಾರ್ಸಿಯಾ ಎಲ್ಲರಂತೆ ಹೆಣ್ಣಲ್ಲ, ವಯಸ್ಸಾದವನೆಂಬ ಕಾರಣದಿಂದ ಇವಳು ನನ್ನನ್ನು ಹಗುರವಾಗಿ ಕಾಣುವಳಲ್ಲ. ತನ್ನ ನಡತೆಯಲ್ಲಿ ತಪ್ಪುವಳಲ್ಲ. ನೀನು ಮನಸ್ಸು ಮಾಡಿ ಇವಳನ್ನು ಬಿಟ್ಟು ಕೊಡುವುದಾದರೆ ನಾನು ಮದುವೆಯಾಗಬೇಕೆಂದು ಬಯಸಿದೇನೆ. ಆಸ್ತಿಗೆ ದಿಕ್ಕಾಗಿ ಮನೆಗೆ ಹೆಸರಾಗಿ ಒಬ್ಬ ಮಗನೊ ಮಗಳೊ ಆದರೆ ನನಗೆ ಚಿಂತೆಯಿಲ್ಲ."

ರೋಮಿನ ಆಗಿನ ಸಮಾಜ ವ್ಯವಸ್ಥೆಯಲ್ಲಿ ಗಂಡ ಹೆಂಡಿರು ಹೀಗೆ ಬಿಡಿಸಿಕೊಳ್ಳುವುದು ಸರಿಯೆಂದು ಭಾವನೆ. ಆದರೆ ಒಲಿದ ದಂಪತಿಗಳು ಬೇರೆ ಒಬ್ಬರಿಗಾಗಿ ತಾವು ಹಿರಿಯಬೇಕೆ?

ಕೇಟೋ ಈ ಮಾತನ್ನೆಲ್ಲ ಸಮಾಧಾನವಾಗಿ ಕೇಳಿದನು. ಅದು ಮುಗಿದಮೇಲೆ ಎರಡು ನಿಮಿಷ ತನ್ನಲ್ಲಿ ಯೋಚನೆ ಮಾಡಿಕೊಂಡು, "ನಿನ್ನ ಅಪೇಕ್ಷೆ ತಪ್ಪಲ್ಲ, ಮಾರ್ಸಿಯಾ ಅಡ್ಡಿ ಮಾಡದಿದ್ದರೆ ನಾನು ಅವಳನ್ನು ಬಿಟ್ಟು ಕೊಡಲು ಸಮ್ಮತ. ಅಮೇಲೆ ನೀನು ಅವಳನ್ನು ಮದುವೆಯಾಗುವ ವಿಷಯದಲ್ಲಿ ಅವಳ ತಂದೆಯ ಅಪ್ಪಣೆಯನ್ನು ಕೇಳ ಬೇಕು," ಎಂದನು.

೧೦

ಮಾರ್ಸಿಯಾ ಇವನ ಸಲಹೆಯನ್ನು ಕೇಳಿ ಒಪ್ಪಿದಳು. ಅವಳ ತಂದೆಯೂ ಈ ಏರ್ಪಾಡಿಗೆ ಸಮ್ಮತಿಸಿದನು. ಕೇಟೋ ಅವಳನ್ನು ಕಾಯಿದೆಗೆ ಅನುಸಾರವಾಗಿ ಬಿಟ್ಟು ಕೊಟ್ಟು ಹೋರ್ಟೆನ್ಸಿಯಸ್ ಅವಳನ್ನು ಮದುವೆಯಾದನು.

ಆಗದವರು, "ಮಾರ್ಸಿಯಾಗೆ ಈ ಗಂಡನ ಸಹವಾಸ ಸಾಕಾಗಿತ್ತು. ಅದರಿಂದ ಅವಳು ಇನ್ನೊ-

ಬ್ಬನ ಹೆಂಡಿರಾಗಲು ಒಪ್ಪಿದಳು. ಕೇಟೋ ಹೃದಯದಲ್ಲಿ ಹೆಂಡತಿಯನ್ನು ಕುರಿತು ನಿಜವಾದ ಪ್ರೇಮ ಇರಲಿಲ್ಲ. ಅವಳು ಇದ್ದರೆಷ್ಟೋ, ಇಲ್ಲದಿದ್ದರೂ ಅಷ್ಟೆ, ಎಂಬ ಮರದ ಕಟ್ಟಿಗೆ ಅವನು," ಎಂದರು. ಈ ಮಾತು ಕೇಟೋ ಕಿವಿಗೆ, ಮಾರ್ಸಿಯಾ ಕಿವಿಗೆ, ಬಿದ್ದಿತು. ಕೇಟೋ ಇದಕ್ಕೆ ಪ್ರತಿ ಹೇಳಲಿಲ್ಲ. ಮಾರ್ಸಿಯಾ, "ಇವರು ಕೇಟೋವನ್ನು ಕಾಣರು," ಎಂದಳು.

೧೧

ಇದಕ್ಕೆ ತಕ್ಕಂತೆ ಸ್ವಲ್ಪಕಾಲದಲ್ಲೆ ಹೋರ್ಟೆನ್ಸಿಯಸ್ ತೀರಿಕೊಂಡನು. ಮಾರ್ಸಿಯಾ ಒಂಟಿಯಾದಳು. ಕೇಟೋ ಮತ್ತೆ ಅವಳನ್ನು ಮದುವೆಯಾಗಿ ಮನೆಗೆ ತಂದನು.

ಹೋರ್ಟೆನ್ಸಿಯಸ್ಸನ ಆಸ್ತಿ ಮಾರ್ಸಿಯಾಗೆ ಬಂದಿತು. ಕೇಟೋಗೆ ಆಗದವರು, "ಈ ಆಸ್ತಿ ಆಸೆಗಾಗಿಯೇ ಕೇಟೋ ತನ್ನ ಹೆಂಡಿರನ್ನು ಬಿಟ್ಟು ಅವಳನ್ನು ಆ ಮುದುಕನಿಗೆ ಮದುವೆಮಾಡಿ ಅವನು ಸಾಯುವುದನ್ನು ಎದುರು ನೋಡಿದನು." ಎಂದರು. ಅವರಲ್ಲಿ ಮತ್ತೆ ಕೆಲವರು, "ಕೇಟೋ ಬೇರೆ ರೀತಿಯಲ್ಲಿ ಅಯೋಗ್ಯನಿರಬಹುದು; ಹಣಕ್ಕೆ ಬಾಯಿ ತೆರೆಯುವನಲ್ಲ. ಕೇಟೋ ಕಾಸಿಗೆ ಆಸೆಪಟ್ಟನೆಂದರೆ ಹರ್ಕ್ಯುಲೀಸ್ ಹೇಡಿಯಾದ ಎಂಬಂತೆ," ಎಂದರು. ಇವರ ಸಾಹಿತ್ಯದಲ್ಲಿ ಹರ್ಕ್ಯುಲೀಸ್ ಭಾರತೀಯ ಸಾಹಿತ್ಯದ ಕರ್ಣಭೀಮರಂತೆ ವೀರಾಧಿವೀರ.

೧೨

ರಾಷ್ಟ್ರದ ಆಡಳಿತ ಅವ್ಯವಸ್ಥೆಗೆ ಬಂದು ಸೀಸರ್ ಸರ್ವಾಧಿಕಾರಿಯಾದನು. ಕೇಟೋ ಪ್ರತಿ ಪಕ್ಷದವನಾಗಿ ರಾಷ್ಟ್ರವನ್ನು ಬಿಟ್ಟು ಹೋಗಿ ದೂರದ ಒಂದು ಪ್ರಾಂತದಲ್ಲಿ ಇರಬೇಕಾಯಿತು. ಸೀಸರ್ ಅಲ್ಲಿಗೂ ಬಂದನು. ಕೇಟೋ ಪಕ್ಷದ ಸೇನೆಗಳು ಸೋತು ಇವನು ಹಗೆಗೆ ಸೆರೆಯಾಗುವ ಸಂದರ್ಭ ಒದಗಿತು. ಅಯೋಗ್ಯನ ಬಂದಿಯಾಗಿ ಜೀವಿಸಿರುವುದಕ್ಕಿಂತ ಸಾಯುವುದು ಲೇಸು ಎಂದು ಕೇಟೋ ನಿಶ್ಚಯಿಸಿದನು. ಹಗೆ ತನ್ನನ್ನು ಸಾರುವ ಮುನ್ನಾದಿನ ತನ್ನ ಕತ್ತಿಯಮೇಲೆ ತಾನೆ ಹಾಯ್ದು ಜೀವ ಬಿಟ್ಟನು.

ನಿಷ್ಠುರ ಸತ್ಯದ ಅವನ ಬಾಳಿನಂತೆ ನಿರಾತಂಕವಾಗಿ ವರಿಸಿದ ಈ ಸಾವೂ ರೋಮಿನ ಪುರಾತನ ಸಂಪ್ರದಾಯವನ್ನು ಅನುಸರಿಸಿದ್ದು. ಹಿರಿಯರು ತೋರಿಸಿದ್ದ ದಾರಿ ಅದು. ಬಾಳಿನಂತೆ ಸಾವಿನಲ್ಲೂ ಕೇಟೋ, ಸಂಯಮಿ ಯಾರು ಎನ್ನುವುದನ್ನು ನಿದರ್ಶಿಸಿದನು.

ಕಾಕ ಲೋಕ

ಹೊಸ ವಸಂತದ ಒಂದು ಉದಯ: ಅಂದವೆಂದರೆ ಅಂದವಾಗಿತ್ತು. ರಾತ್ರಿ ಸ್ವಲ್ಪ ಬಲವಾಗಿಯೇ ಮಳೆ ಆಗಿದ್ದದರಿಂದ ಬೆಳಗು ತಂಪಾಗಿತ್ತು. ಗಾಳಿಯಲ್ಲಿ ಜೇನು ತುಂಬಿತ್ತು, ಬೆಳಕೊ ಗಿಣ್ಣಿನ ಹಾಲು. ನಾನು ನನ್ನ ಕೋಣೆಯಲ್ಲಿ ಕಿಟಕಿಯ ಬಳಿ ಕುಳಿತು ಒಂದು ಪುಸ್ತಕವನ್ನು ತೆರೆದಿಟ್ಟುಕೊಂಡು ಒಂದು ಕ್ಷಣ ಓದುವುದು ಎರಡು ಕ್ಷಣ ಹೊರಗಡೆ ದೃಷ್ಟಿ ಹಾಯಿಸುವುದು ಇದರಲ್ಲಿ ಹೊತ್ತನ್ನು ಸವಿಯುತ್ತಿದ್ದೆನು.

ನಮ್ಮ ಮನೆಯ ಬದಿಯ ಸ್ವಲ್ಪ ನೆಲದಲ್ಲಿ ನಾಲ್ಕು ಮರ ಇವೆ. ಆವುಗಳಲ್ಲಿ ಒಂದು ಅಶೋಕ. ತುಂಬ ತಳಿತು ಹೂತಿದ್ದ ಅದರ ಒಂದು ಕೊಂಬೆಯ ಮೇಲೆ ಒಂದು ಅಳಿಲು ಕುಳಿತು ಸೀಳುಧ್ವನಿಯಲ್ಲಿ ಕರೆ ಕೊಡುತ್ತಿತ್ತು. ಅಳಿಲಿನ ಈ ಸ್ವರ ನನಗೆ ತೀರಾ ಪರಿಚಿತ. ಆದರೂ ಬೆಳಗು ಅಷ್ಟು ಚೆನ್ನಾಗಿದ್ದದರಿಂದ ಈ ಸ್ವರ ಕೂಡ ಕಿವಿಗೆ ಇಂಪಾಗಿ ತೋರುತ್ತಿತ್ತು. ಆ ಪ್ರಾಣಿ ತನ್ನ ಆತುರದ ಆಹ್ವಾನಕ್ಕೆ ಶಕ್ತಿ ಕೊಡುವ ಸಲುವಾಗಿ ಅಳ್ಳೆಯನ್ನು ತುಂಬುವುದೂ ಹೊದರುಬಾಲವನ್ನು ಮಿಡಿಯುವುದೂ ನಾನು ಕುಳಿತಲ್ಲಿಗೆ ಸ್ಪಷ್ಟವಾಗಿ ಕಾಣುತ್ತಿತ್ತು.

ಕ್ಷಣಹೊತ್ತು ಅಳಿಲನ್ನು ನೋಡಿ ನಾನು ಮರಳಿ ನನ್ನ ಪುಸ್ತಕದ ಕಡೆ ಕಣ್ಣು ತಿರುಹಿದೆನು. ಅದಕ್ಕೆ ಸರಿಯಾಗಿ ಅಶೋಕ ಮರದ ಬೇರೆ ಒಂದು ಕಡೆಯಿಂದ ಒಂದು ತೆಳುವಾದ ಇಂಪಾದ ಹಕ್ಕಿಯ ಸ್ವರ ಕೇಳಿಸಿತು. ಅದು ನಾನು ಮೊದಲು ಕೇಳಿದ್ದಲ್ಲ. ಯಾವುದೋ ಹೊಸಾ ಸ್ವರ ಎಂದು ತೋರಿತು. ಗಾನ ನವಿರಾಗುವಷ್ಟು ತೆಳು: ಇಂಪೆಂದರೆ ಇಂಪು. ಅದರಲ್ಲಿ ಐದಾರು ಮುರಿವು ಇದ್ದವು. ತುಣುಕುಗಳು ಒಂದುಕ್ಕೊಂದು ಅಂಟಿದ ರೀತಿ ಬಹು ಚತುರವಾಗಿತ್ತು. ನನಗೆ ಆಶ್ಚರ್ಯವಾಯಿತು. ನನಗೆ ಐವತ್ತು ವರ್ಷಕ್ಕೆ ಮೇಲೆ ಆಗಿದೆ: ಆದರೂ ನಮ್ಮ ಮನೆಯ ಮರಕ್ಕೆ ಬರುವ ಈ ಹಕ್ಕಿಯ ದನಿ ಇದುವರೆಗೆ ಕಿವಿಗೆ ಬೀಳದೆ ಇದ್ದಿತಲ್ಲ! ಇದಕ್ಕೆ ಏನು ಹೇಳುವುದು!

ಪಕ್ಷಿಯನ್ನು ನೋಡೋಣ ಎಂದು ನಾನು ಸ್ವರಮೂಡಿದ ಕಡೆಗೆ ಕಣ್ಣು ಹಾಕಿದೆನು. ಪಕ್ಷಿ ಕಾಣ-ಲಿಲ್ಲ. ಸ್ವರ ಮರಳಿ ಕೇಳಿತು: ಅದು ಇದೇ ಸ್ಥಳದಿಂದ ಹೊರಟಿತೆನ್ನುವುದೂ ತಿಳಿಯಿತು. ಆದರೆ ಅಲ್ಲಿ ಕಣ್ಣಿಕ್ಕಿ ನಿಟ್ಟಿಸಿದೆನಾದರೂ ಗಾಯಕ ಕಾಣಲಿಲ್ಲ,

ಆ ವೇಳೆಗೆ ನಮ್ಮ ಮನೆಯಾಕೆ ಏಕೋ ಕೋಣೆಗೆ ಬಂದರು. ನಾನು ಅವರಿಗೆ ಈ ಪಕ್ಷಿಯ ಮಾ-ತನ್ನು ಹೇಳಿದೆನು; ಅದರ ಗಾನ ಎಷ್ಟು ಇಂಪು ಎಂದೆನು. ಆಕೆ, “ಹೌದು, ಈ ಪಕ್ಷಿ ಇಲ್ಲಿ ಕಳೆದ ವರ್ಷವೇ ಬಂದಿತು. ಈ ಸಲ ಮತ್ತೆ ಬಂದಿದೆ. ಪುಟ್ಟ ಅಂದರೆ ಪುಟ್ಟ ಹಕ್ಕಿ. ಚೆನ್ನು ಅಂದರೆ ಚೆನ್ನು,” ಎಂದರು.

ನಾನು, “ಅದು ಈಗ ಆ ಎಲೆಗಳ ಮಧ್ಯೆ ಇದೆ. ನೋಡೋಣ ಎಂದರೆ ಕಾಣಿಸುತ್ತಿಲ್ಲ,” ಎಂದು ಮರದಲ್ಲಿ ಒಂದು ಕಡೆಗೆ ಬೆರಳುಮಾಡಿ ತೋರಿಸಿದೆನು.

ನಮ್ಮ ಮನೆಯಾಕೆ, “ಹೌದು, ಅದು ಕಾಣಿಸುವುದಿಲ್ಲ. ಎಲೆಯಲ್ಲಿ ಎಲೆಯಾಗಿ ಬೆರೆತಿರುತ್ತದೆ,” ಎಂದು ಹೇಳಿ ನನ್ನ ಪಕ್ಕದಲ್ಲಿ ನಿಂತು ನಾನು ತೋರಿಸಿದ ಕಡೆ ದೃಷ್ಟಿಸಿ ನೋಡಿದರು.

ಕ್ಷಣ ಬಿಟ್ಟು, “ಆಕೊ, ಅಲ್ಲೇ ಇದೆ. ತೀರ ನಮಗೆ ಎಡವಾಗಿ ಕುಳಿತುಕೊಂಡಿದೆ. ಆ ಸಣ್ಣ ಕೊನೆ, ತೆರಪಾದ ಸ್ಥಳದಲ್ಲಿ ಬೆಳ್ಳಗೆ ಕಾಣುತ್ತದಲ್ಲ, ಅದರ ಮೇಲೆ,” ಎಂದರು.

ಹೌದು ತಾನೆ: ಅದು ಅಲ್ಲಿ ಕುಳಿತಿತ್ತು. ಆಕೆ ತೋರಿಸದೆ ಅದನ್ನು ಗುರುತಿಸಿ ಕಾಣುವಷ್ಟು ಮಟ್ಟಿ-ಗೆ ನನಗೆ ದೃಷ್ಟಿ ಇರಲಿಲ್ಲ ಅಷ್ಟೆ. ಅದೇನು ನಿಜವಾಗಿ ಒಂದು ಹಕ್ಕಿ ಎನ್ನುವಷ್ಟು ಗಾತ್ರದ ಪ್ರಾಣಿ ಅಲ್ಲ. ಹೆಸರಿಗೆ ಒಂದು ಹಕ್ಕಿ. ಸೃಷ್ಟಿಯಲ್ಲಿ ಇದೆಷ್ಟು ವಿಚಿತ್ರ ಕೌಶಲ ಕಾಣುತ್ತದೆ. ಈ ಪ್ರಾಣಿ ಒಂದು ಸ್ವಯಂ-ಪೂರ್ಣ ಪಕ್ಷಿ ಮೂರ್ತಿ ಹೌದು: ಆದರೂ ಅದರ ಒಟ್ಟು ಗಾತ್ರ ನನ್ನ ಕೈಯ ಹೆಬ್ಬೆರಳಿಗಿಂತ ಹೆಚ್ಚು ಇರ-ಲಿಲ್ಲ. ಸುತ್ತ ಎಲೆ, ಅವುಗಳ ಮಧ್ಯೆ ಇದೊಂದು ಎಲೆ. ತೀರ ನಿಟ್ಟಿಸಿ ನೋಡಿದರೆ ಮಾತ್ರ ಅದೊಂದು ಸುಂದರವಾದ, ಹೆಸರು ಕಾಣದ, ಎಂಥದೋ ಬಣ್ಣದ ಹಿನ್ನೆಲೆಯ ಮೇಲೆ, ಕೇಸರಿ ಸ್ವರ್ಣ ನೀಲದ ಗೆರೆ ಅಕ್ಕಪಕ್ಕವಾಗಿ ಬೆಳಗುತ್ತಿರುವುದು ಕಾಣುವುದು.

ನಾನು, “ಇದನ್ನು ಏನೆಂದು ಕರೆಯುತ್ತಾರೆ,” ಎಂದೆನು.

ಮನೆಯಾಕೆ, “ನನಗೆ ತಿಳಿಯದು,” ಎಂದರು.

ಆಕೆಗೆ ಏನು, ನಿಜವಾಗಿ ಯಾರಿಗೂ ತಿಳಿಯದು. ನಾವು ಕಾಗೆಗೆ ಹೆಸರಿಟ್ಟಿದೇವೆ, ಗಿಳಿಗೆ ಹೆಸರಿಟ್ಟಿದೇವೆ. ಕೋಗಿಲೆಗೆ ಗೊರವಂಕನಿಗೆ ಒಂದೊಂದು ಹೆಸರು ಕೊಟ್ಟಿದೇವೆ. ಪಕ್ಷಿ ಜಾತಿಯನ್ನು ಕುರಿತ ನಮ್ಮ ಆಸಕ್ತಿ ಈ ಮೇರೆಯಿಂದ ಆಚೆಗೆ ಹಾಯ್ದಿಲ್ಲ. ಮೇರೆಯ ಆಚೆಯ ಪಕ್ಷಿ ಚೆಲುವಾಗಿಯೇ ಇರಬಹುದು; ಇಂಪಾಗಿಯೇ ಹಾಡಬಹುದು; ಅದರೂ ಅವಕ್ಕೆ ನಮ್ಮ ಗಮನವನ್ನು ಸೆಳೆಯುವ ಯೋಗ್ಯತೆ ಬರುವುದಿಲ್ಲ.

ವಸಂತ ಬೆಳೆದಂತೆ. ಈ ಪುಟ್ಟ ಹಕ್ಕಿ ಮರಳಿ ಮರಳಿ ನಮ್ಮ ಸಣ್ಣ ತೋಟಕ್ಕೆ ಬಂದದ್ದು ಕಂಡಿತು. ಅದು ಮರಳಿ ಬಂದಾಗ ಒಂದೇ ಇರಲಿಲ್ಲ: ಒಂದು ಗಂಡು ಒಂದು ಹೆಣ್ಣು ಜೊತೆಯಾಗಿ ಬಂದುವು. ಈ ಗಂಡು ಹೆಣ್ಣು ಈ ವರ್ಷ ಜೊತೆಯಾಗಿರುವುದೆಂದು ನಿಶ್ಚಯಿಸಿದ್ದದ್ದು ಕಂಡಿತು; ತಮ್ಮ ಸಂಸಾರಸುಖಕ್ಕೆ ನಮ್ಮ ಮನೆಯ ಆವರಣ ಯೋಗ್ಯಸ್ಥಾನವೆಂದು ಆರಿಸಿದ್ದಂತೆಯೂ ಕಂಡಿತು. ಇವುಗಳ ಈ ನಿಶ್ಚಯದಿಂದ ನನಗೆ ಸಂತೋಷವಾಯಿತು.

ಸ್ವಲ್ಪ ಕಾಲ ಕಳೆದಿದೆ: ಎಷ್ಟು ವಾರ ಎಂದು ಈಗ ನಾನು ಗೊತ್ತಾಗಿ ಹೇಳಲಾರೆ. ಒಂದು ದಿನ ನಮ್ಮ ಮನೆಯಾಕೆ ತೋಟದಲ್ಲಿ ನಿಂತು, “ಇಲ್ಲಿ ಬಂದು ಈ ಪಕ್ಷಿಯ ಗೂಡನ್ನು ನೋಡಬಾರದೆ,” ಎಂದು ನನ್ನನ್ನು ಕರೆದರು. ಪಕ್ಷಿಯ ಗೂಡು ಎಂದರೆ, ಸಹಜವಾಗಿ ಮರದಮೇಲೆ ಎಲ್ಲಿಯೋ ಎತ್ತರದಲ್ಲಿದೆ ಎಂದು ನನ್ನ ಕಲ್ಪನೆ. ನಾನು, “ಪಕ್ಷಿಯ ಗೂಡನ್ನು ನೋಡಿ ಆಗುವುದೇನು,” ಎಂದೆನು. ಆಕೆ, “ಬಂದು ನೋಡಿದರಲ್ಲವೆ ತಿಳಿಯುವುದು. ಪ್ರಾಣಿ ತನ್ನ ಹಸುಳೆಗೆ ಅಂತ ಅದನ್ನು ಹೇಗೆ ಸಜ್ಜು ಮಾಡಿದೆ. ಆ ಹೊತ್ತು ಹಾಡಿತಲ್ಲ ಆ ಪುಟ್ಟ, ಅದರ ಗೂಡು; ಗೋಡೆಯ ಬದಿಯ ಎರಡು ಡಾಲಿಯಾ ಗಿಡದ ಕಳೆಗಳಿಗೆ ತೂಗುಹಾಕಿದೆ,” ಎಂದರು.

ನಾನು ಹೋಗಿ ನೋಡಿದೆ. ಗೂಡು ತುಂಬಾ ಚಿಕ್ಕದು: ಒಟ್ಟು ಒಂದು ಹಿಡಿಯಷ್ಟು ಇತ್ತು. ಅದರ ಹೊರಭಾಗವನ್ನು ತೆಳುವಾದ ಆದರೂ ಬಿಗಿಯಾದ ಯಾವುದೋ ನಾರುಗಳಿಂದ ನೆಯ್ದಿತ್ತು. ಹೊಸೆ-

ದು ಎರಡು ನಾರಿಂದ ಇತ್ತ ಅತ್ತ ಅದನ್ನು ಅಲ್ಲಿ ಗೋಡೆಯ ಪಕ್ಕದಲ್ಲಿ ಜೊತೆಯಾಗಿ ಬೆಳೆದಿದ್ದ ಎರಡು ಡಾಲಿಯಾ ಹೂಗಿಡಗಳ ಮಧ್ಯದ ತಾಳಿಗೆ ಕಟ್ಟಿತ್ತು. ನಾರಿನ ಒಳಭಾಗಕ್ಕೆ ನಯವಾದ, ಮೆದುವಾದ,. ಅರಳೆಯ ಮೆತ್ತೆಯಿತ್ತು. ಅದರ ಮೇಲೆ ಎರಡು ಪುಟಾಣಿ ಮೊಟ್ಟೆ ಇದ್ದವು.

ಗೂಡಿನ ಒಂದು ಪಕ್ಕಕ್ಕೆ ಅದರ ಬಾಯಿ. ಡಾಲಿಯಾ ಎಲೆ ಎರಡು ಅದಕ್ಕೆ ಮರೆಯಾಗಿದ್ದವು.

ಗೂಡು ಬಹಳವೇನೂ ಭದ್ರವಾದವಲ್ಲ, ಆದರೂ ಅದು ಬಿಸಿಲಿಂದ ಗಾಳಿಯಿಂದ ಮೊಟ್ಟೆಗಳಿಗೆ ಕೆಡಕಾಗದಂತೆ ಸುರಕ್ಷಿತವಾಗಿಯೇನೋ ಇತ್ತು. ನೆಲಕ್ಕೆ ತೀರ ಹತ್ತಿರವಾಗಿ ಇದ್ದದರಿಂದ, ಅದು ಬಹಳ ಭದ್ರವಾಗಿತ್ತು ಎಂಬಂತಿರಲಿಲ್ಲ. ಆದರೆ ಒಂದು ಪಕ್ಷಿ ಬಂದು ನೆಲಕ್ಕೆ ಇಷ್ಟು ಹತ್ತಿರ ಒಂದು ಗೂಡನ್ನು ಕಟ್ಟಿದೆ ಎಂದು ಶಂಕಿಸುವುದೂ ಅಸಾಧ್ಯ. ಆದುದರಿಂದ ಅದರ ನೆಲೆ ತಕ್ಕಷ್ಟು ಕ್ಷೇಮದ್ದೆಂದೇ ಹೇಳಬೇಕು.

ಗೂಡು ಇಲ್ಲಿದೆ ಎನ್ನುವುದು ಒಂದು ಬೆಕ್ಕಿಗೆ ಸ್ವಲ್ಪ ತೋಚಿದರೂ ಮೊಟ್ಟೆಗಳ ಪಾಡು ಮುಗಿಯಿತೆ! ಆದರೆ, ಪಕ್ಷಿಗಳು ಈ ಅಪಾಯವನ್ನು ಲಕ್ಷಿಸದ್ದಕ್ಕೆ ಕಾರಣ ಇದ್ದಿರಬೇಕು. ಅಷ್ಟೇನೂ ಭದ್ರವಲ್ಲದ ಈ ಗೂಡು ಬೇರೆ ಎಡೆಗಿಂತ ಇಲ್ಲಿರುವುದು ಕ್ಷೇಮವಾಗಿತ್ತು. ಅಶೋಕ ಮರದ ಮೇಲೋ, ಹಲಸಿನ ಮರದ ಮೇಲೋ, ಸಂಪಿಗೆ ಮರದ ಮೇಲೊ ಎತ್ತರದಲ್ಲಿ ಕಟ್ಟಿದ್ದರೆ ಅದಕ್ಕೆ ಗಾಳಿಯ ಆಪಾಯ ಬಹಳ, ಸಾಲದ್ದಕ್ಕೆ ಮಂಗಗಳ ತಂಡ ಬಂದು ಅದನ್ನು ಕಿತ್ತೆಸೆಯುವ ಸಂಭವ ಉಂಟು. ಈ ನಮ್ಮ ಮರಗಳ ಮೇಲೆ ಕಾಗೆಗಳು ಗೂಡು ಮಾಡುತ್ತವೆ. ಎರಡು ವಾರ ಮೂರು ವಾರಕ್ಕೆ ಒಮ್ಮೆ ಮಂಗಗಳ ತಂಡ ಬಂದಾಗ ಇಲ್ಲಿ ಆಗುವ ಗದ್ದಲ ಅಷ್ಟಿಷ್ಟಲ್ಲ. ಆ ದಾಳಿಯಲ್ಲಿ ಏಳುವ ಕಳವಳ, ಕೂಗಾಟ, ಬೊಬ್ಬೆ ಎಷ್ಟು ಎನ್ನುವುದು ನಾವು ನೋಡಿದ್ದು ಕೇಳಿದ್ದು.

ನಮ್ಮ ಹಕ್ಕಿ ಪುಟ್ಟನ ಈ ಗೂಡಿಗೆ ಇಂಥ ಅಪಾಯ ಇಲ್ಲ.

ಇದಾದ ಕೆಲವು ದಿನಗಳ ನಂತರ ನಮ್ಮ ಮನೆಯಾಕೆ ನನಗೆ, ಗೂಡಿನಲ್ಲಿದ್ದ ಎರಡು ಮೊಟ್ಟೆಯಲ್ಲಿ ಒಂದು ಏಕೋ ಜಾರಿ ನೆಲಕ್ಕೆ ಬಿದ್ದು ಒಡೆದುಹೋಗಿದೆ ಎಂದೂ ಉಳಿದ ಒಂದು ಮೊಟ್ಟೆ ಗೂಡಿನಲ್ಲಿ ಭದ್ರವಾಗಿದೆಯೆಂದೂ ತಿಳಿಸಿದರು. ತಂದೆ ಹಕ್ಕಿ ತಾಯಿ ಹಕ್ಕಿ ಗೂಡಿಗೆ ಕೆಲವು ವೇಳೆ-

ಯಾದರೂ ಬರುತ್ತಿದ್ದವೆಂದು ತೋರುತ್ತದೆ. ಆದರೆ ಅವು ಬರುವುದು ಹೋಗುವುದು ಪ್ರಾಯಶಃ ನಮಗೆ ಕಾಣುತ್ತಿರಲಿಲ್ಲ. ಮೇಲಾಗಿ ಅವು ಎರಡೂ ಜೊತೆಯಾಗಿ ಬಂದದ್ದು ಸುಮಾರು ಎಂದೂ ಇಲ್ಲ. ತಂದೆಯೊ ತಾಯೊ ಒಂದೊಂದುವೇಳೆ ಬಂದು ಅಶೋಕದ ಒಂದು ಕೊಂಬೆಯ ಮೇಲೆ ಕುಳಿತು ಗೂಡಿನತ್ತ ನೋಡುತ್ತಿರುವುದು ಒಮ್ಮೊಮ್ಮೆ ಕಾಣುತ್ತಿತ್ತು.

ವಸಂತದ ಆರಂಭದಲ್ಲಿ ಅಷ್ಟು ಇಂಪಾಗಿ ಹಾಡಿದ ಹಕ್ಕಿ ಈ ದಿವಸಗಳಲ್ಲಿ ದನಿಯೆತ್ತಿದ್ದೇ ನಮಗೆ ಕೇಳಿಸಲಿಲ್ಲ.

ಮತ್ತೆ ಕೆಲವು ಕಾಲ ಕಳೆದಿದೆ. ಇಷ್ಟೇ ಎಂದು ನಾನು ಹೇಳಲಾರೆ. ಒಂದು ಮಧ್ಯಾಹ್ನ ನಾನು ನನ್ನ ಕೋಣೆಯಲ್ಲಿ ಹಾಸಿಗೆಯಲ್ಲಿ ಮಲಗಿದ್ದ ವೇಳೆ ನಮ್ಮ ಸುತ್ತಿನ ಕಾಗೆಗಳು ಭಯಂಕರ ಕೋಲಾಹಲ-ವನ್ನು ಎಬ್ಬಿಸಿರುವುದು ನನಗೆ ಕೇಳಿಸಿತು. ನಮ್ಮ ಮನೆಯ ಹಲಸಿನ ಮರದ ಮೇಲೆ ಒಂದು ಕಾಗೆ ಗೂಡು ಕಟ್ಟಿತ್ತು. ಈ ಕಾರಣದಿಂದ ಆ ಹದಿನೈದು ಇಪ್ಪತ್ತು ದಿವಸ ಅದು ಅಲ್ಲಿ ನಡೆಸುತ್ತಿದ್ದ ದರ-ಬಾರು ಅಷ್ಟಿಷ್ಟಲ್ಲ. ಹಲಸಿನ ಮರವನ್ನು ನೆಟ್ಟವರು ನಾವು, ಬೆಳಸಿದವರು ನಾವು. ಆದರೂ ನಾವು ಅದರ ಹತ್ತಿರ ಹೋಗುವುದನ್ನು ಈ ಕಾಗೆ ಸಹಿಸದು. ಬೆಲೆಯಿಲ್ಲದ ತನ್ನ ಮೊಟ್ಟೆಯನ್ನೊ, ಎಣೆಯಿ-ಲ್ಲದ ತನ್ನ ಕಂದನನ್ನೊ, ಏನಾದರೂ ಮಾಡಬೇಕೆಂದೇ ನಾವು ಅಲ್ಲಿ ಸುಳಿಯುತ್ತೇವೆ ಎಂದು ಈ ಪ್ರಾಣಿಯ ಕಲ್ಪನೆ. ಆ ಹದಿನೈದು ದಿವಸದಲ್ಲಿ ಒಂದು ದಿನ ನಾನು ಆ ಹಲಸಿನ ಮರದಡಿಯ ಕಲ್ಲ ಹಲಗೆಯಮೇಲೆ ಕುಳಿತಿದ್ದರೆ ಕಾಗೆ ಎರಗಿ ಬಂದು ನನ್ನ ತಲೆಯ ಮೇಲೆ ಕುಕ್ಕಿ ಹಾರಿ ಹೋಯಿತು.

“ಈ ಮರದ ಮೇಲೆ ನನ್ನ ಗೂಡಿದೆ, ಆ ಗೂಡಿನಲ್ಲಿ ನನ್ನ ಮೊಟ್ಟೆ ಇವೆ, ಈ ಮರದ ಬಳಿ ಬರು-ವುದಕ್ಕೆ ಬೇರೆ ಯಾರಿಗೆ ಏನು ಅಧಿಕಾರ?”

ಆ ದಿನ ಮಧ್ಯಾಹ್ನ ಕಾಗೆಗಳು ಎಬ್ಬಿಸಿದ ಭಯಂಕರ ಕೋಲಾಹಲವನ್ನು ಕೇಳಿ ನಾನು, “ಹಲಸಿನ ಮರಕ್ಕೆ ಮಂಗಗಳ ತಂಡ ಬರುತ್ತಿದೆಯೇನೊ” ಎಂದುಕೊಂಡೆ. ಎದ್ದು ಹೋಗಿ ನೋಡಲಿಲ್ಲ.

ಕೋಲಾಹಲ ಹೆಚ್ಚಿತು. ನೆರೆಯಿಂದಷ್ಟೇ ಅಲ್ಲ, ಹೊರೆಯಿಂದಲೂ ಬಂದ ಕಾಗೆ ಒಂದು ಸೇ-ನೆಯಾಗಿ ಸೇರಿ ತಮ್ಮ ಕರ್ಣ ಕಠೋರ ಕರ್ಕಶಧ್ವನಿಯಿಂದ ಭೀಕರ ಘೋಷವನ್ನು ಎಬ್ಬಿಸಿದ್ದವು. ಆ

ಧ್ವನಿಯಲ್ಲಿ ಕ್ಷೋಭೆ ಕ್ರೋಧ ದ್ವೇಷ ತುಂಬಿ ಕಾಣುತ್ತಿದ್ದವು.

ಈ ಕಿವಿಹರಿಯುವ ಘೋಷ ಎಷ್ಟು ನೋಡಿದರೂ ನಿಲ್ಲದೆ ನಡೆಯುತ್ತಿದ್ದುದರಿಂದ ನಾನು ಇದೇನು ಸಂಗತಿಯೆಂದು ನೋಡುವುದಕ್ಕೆ ನನ್ನ ಹಾಸಿಗೆಯನ್ನು ಬಿಟ್ಟು ಕೈಸಾಲೆಗೆ ಬಂದೆನು.

ಹಲಸಿನ ಮರದ ಒಂದು ಕೊಂಬೆಯಿಂದ ಒಂದು ಕಾಗೆ, ನಮ್ಮ ಮನೆಯ ಹೊರವಳಯದ ಗೋಡೆಯ ಆಚೆಗೆ ನೆಲದಲ್ಲಿ ಒಂದು ಕಡೆಗೆ, ಬಿರ್‍ರನೆ ಎರಗಿತು. ಕ್ರಾ ಎಂದು ಮೊರೆದು ಕೂಗಿ ಅಲ್ಲಿ ಅದೇನನ್ನೋ ಕುಕ್ಕಿ ಇತ್ತ ಸಂಪಗೆಯ ಮೇಲಕ್ಕೆ ಹಾರಿಬಂದಿತು. ಕ್ಷಣ ಬಿಟ್ಟು ಇನ್ನೊಂದು ಕಾಗೆ ಸಂಪಗೆಯ ಮರದಿಂದ ಅದೇ ರೀತಿ, ಅದೇ ಸ್ಥಳಕ್ಕೆ ಎರಗಿತು; ಹಾಗೆಯೇ ಕುಕ್ಕಿತು, ಹಾಗೆಯೇ ಮೊರೆಯಿತು. ಹಾರಿ ಬೇರೆ ಎಡೆಗೆ ಹೋಗಿ ಕುಳಿತಿತು. ಇತರ ಕಾಗೆಗಳೂ ಸುತ್ತಿನ ಮರಗಳ ಮೇಲೆ ಕುಳಿತು ತಮ್ಮ ಕೂಗಿನಿಂದ ಇವಕ್ಕೆ ಮೇಳ ಒದಗಿಸಿದ್ದವು.

ನೆಲಕ್ಕೆ ಎರಗಿದ ಕಾಗೆಗಳು ಕುಕ್ಕಿದ್ದು ಏನನ್ನು? ಇದು ನನಗೆ ತಿಳಿಯಲಿಲ್ಲ. ಇದೇನು ಈ ಬೊಬ್ಬೆಯ ಬೇಸರ ಎಂದು ನಾನು ಸುತ್ತ ನೋಡಿದೆನು. ಎದುರು ಮನೆಯ ಸಂಪಗೆಯ ಒಂದು ಕೊಂಬೆಯ ಮೇಲೆ ನಮ್ಮ ಎರಡು ಪುಟ್ಟ ಹಕ್ಕಿ ಜೊತೆಯಾಗಿ ಕುಳಿತಿರುವುದು ಕಂಡಿತು. ಅವು ಆ ಕಾಗೆಗಳು ಕುಕ್ಕಿದ ನೆಲದತ್ತ ನೋಡುತ್ತಿರುವಂತೆ ತೋರಿತು.

ಆ ವೇಳೆಗೆ ನಮ್ಮ ಮನೆಯಾಕೆ ಮನೆಯಿಂದ ಹೊರಗೆ ಬಂದರು? ಮರಗಳ ಬಳಿ ಹೋಗಿ ಕಾಗೆಗಳನ್ನು ಬೆದರಿಸಿ ಅಟ್ಟಿದರು. ಗೋಡೆಯ ಮೇಲೆ ಬಾಗಿ ಅವು ಎರಗಿ ಕುಕ್ಕಿದ್ದ ಸ್ಥಳವನ್ನು ನೋಡಿದರು.

ಮೇಲಿನ ಕೈಸಾಲೆಯಿಂದ ನಾನು ಅವರನ್ನು, "ಏನದು," ಎಂದು ಕೇಳಿದೆನು.

ಆಕೆ, "ಪುಟ್ಟ ಹಕ್ಕಿಯ ಮರಿ, ಕಾಗೆಗಳು ಅದನ್ನು ಕೊಂದು ಬಿಟ್ಟವು," ಎಂದರು.

ಮರಿಹಕ್ಕಿ ಏನು ಗರಿ ಕೂಡಿ ಹಾರಿ ನೋಡೋಣ ಎಂದು ಹೊರಕ್ಕೆ ಬಂದಿತೋ? ತಾಯಿತಂದೆ ಹಾರಿ ಬಾ ಎಂದು ಅದನ್ನು ಹೊರಕ್ಕೆ ಕರೆದಿದ್ದವೊ? ಏನು ಸಂಗತಿ? ಇಂಥ ಯತ್ನದ ಅಪಾಯ ಏನು ಎನ್ನುವುದು ಮರಿಗೆ ತಿಳಿಯದೆ ಇರಬಹುದು: ಹಿರಿಯವಾದ ತಾಯಿಗೆ ತಂದೆಗೆ ಇದು ತಿಳಿ-

ದಿರಬೇಕಲ್ಲ!

ನನಗೆ ಸಹಿಸಲಾರದ ದುಃಖ, ಬಾಯಿ ತೆರೆಯಲಾಗಲಿಲ್ಲ. ಹಾಗೆಯೇ ಕಾಗೆಗಳ ಮೇಲೆ ಹಿಡಿಯಲಾರದ ಕೋಪ. ನಾನು ಕಿರಿಯನಾಗಿದ್ದರೆ ಪ್ರಾಯಶಃ ಹಲಸಿನ ಮರವನ್ನೇರಿ ಆ ಕಾಗೆಯ ಗೂಡನ್ನು ಕಿತ್ತು ಮೊಟ್ಟೆಗಳನ್ನು ಕೆಳಗೆಸೆದು ಸೇಡು ತೀರಿಸಿಕೊಳ್ಳುತ್ತಿದ್ದೆನು.

ಪಾಪಿ ಜಂತುಗಳೆ! ಈ ಪುಟ್ಟ ಹಕ್ಕಿಯ ಪುಟ್ಟಾಣಿ ಮರಿಯನ್ನು ಈ ಪಿಶಾಚಗಳು ಕೊಲ್ಲಬೇಕಾದದ್ದೇನಿತ್ತು? ತಮ್ಮ ದನಿಯಂತೆ ಕಠೋರವಲ್ಲದ ಧ್ವನಿ ಲೋಕದಲ್ಲಿರುವುದು ಬೇಡ ಎನ್ನುತ್ತವೆಯೊ ಇವು!

ತಮಗಿಂತ ಗುಣವಂತ ಎಂದರೆ ಮನುಷ್ಯರಿಗೆ ಅಂಥವನ ಮೇಲೆ ದ್ವೇಷ, ಪಕ್ಷಿಗಳು ಮನುಷ್ಯರಂತೆಯೇ ಇರಬೇಕು.

ಹಾಡು ಬೇಡಪ್ಪ, ನಿನ್ನ ಧರ್ಮ. ಕಾ ಎಂಬ ಕೂಗು ಸಾಕು. ಜಯ ದೊರೆಯುವುದು ವೇಗಕ್ಕೆ, ಶಕ್ತಿಗೆ; ಬೇರೆಯ ಗುಣ ಬೇಕಿಲ್ಲ. ಹಾಡುವ ಪುಟ್ಟ ಹಕ್ಕಿಗೆ ಲೋಕದಲ್ಲಿ ಸ್ಥಾನವಿಲ್ಲ. ಸ್ಥಾನ ಏನಿದೆ ಅದು ಕಾಗೆಗಳಿಗೆ ಮೀಸಲು. ಹಾಗೂ ಸ್ವಲ್ಪ ಉಳಿದರೆ ಅದು ಮಂಗಗಳಿಗೆ ಬೇಕಾಗಿದೆ.

ಹೀಗೆಂದು ಮನಸ್ಸಿನಲ್ಲಿ ಕಹಿಯನ್ನುನುರಿಸುತ್ತಾ ನಾನು ಎದುರು ಮನೆಯ ಸಂಪಗೆಯ ಮರದ ಕಡೆ ಮರಳಿ ನೋಡಿದೆನು. ಪುಟ್ಟ ಹಕ್ಕಿ, ತಾಯಿ ತಂದೆ, ಕುಳಿತಲ್ಲೆ ಕುಳಿತಿದ್ದವು. ಅವುಗಳ ಕಣ್ಣು ನೆಲದ ಮೇಲೆ ತಮ್ಮ ಕಂದ ಸತ್ತು ಬಿದ್ದಿದ್ದ ಸ್ಥಳವನ್ನು ನೋಡುವಂತಿದ್ದವು. ಆ ನೋಟ ನಿರಾಶೆಯಲ್ಲಿ ನೆಟ್ಟಿತ್ತು. ಅವುಗಳ ಎದೆ ಬೇನೆಯಿಂದ ಶೂನ್ಯದಲ್ಲಿ ಮುಳುಗಿದ್ದವು.

ನಮ್ಮ ಮನೆಯಾಕೆ ಇಷ್ಟರಲ್ಲಿ ಕಣ್ಣೊರಸಿಕೊಂಡು ಮನೆಯೊಳಕ್ಕೆ ಹೋದರು. ನನಗೂ ಅಳೋಣ ಎನ್ನಿಸಿತು. ಹಕ್ಕಿಗಳ ನಿರಾಶೆ, ಎದೆಯ ಶೂನ್ಯ, ನನ್ನ ಬಾಳು ನನ್ನೆದೆಯನ್ನೂ ತುಂಬಿ ಕವಿದವು.

ಮಂತ್ರೋದಯ

(ಕರ್ಮಯೋಗದ ಕೊನೆಯ ದಿನ)

ಮಹರ್ಷಿ ವಾಮದೇವ ದ್ವೈಪಾಯನ ಆರುಣೇಯ ಆ ದಿನ ನೂರು ವರ್ಷದ ಬಾಳನ್ನು ಪೂರ್ಣ ಮಾಡುವರೆಂದು ಸುತ್ತಿನ ಎಲ್ಲಾ ಆಶ್ರಮಗಳಲ್ಲಿ ಸುದ್ದಿ ಹರಡಿತ್ತು. ಭಕ್ತಿಯಿಂದ ಕೆಲವರು, ಕುತೂಹಲದಿಂದ ಕೆಲವರು, ಅಸೂಯೆಯಿಂದ ಕೆಲವರು ಮಹರ್ಷಿಯ ದರ್ಶನ ಪಡೆಯೋಣ ಎಂದು, ಈ ಹಣ್ಣುಮುದುಕ ಈ ದಿನ ಹೇಗೆ ಬಾಳುತ್ತಾನೆ ನೋಡೋಣ ಎಂದು, ಇವನು ಇಚ್ಛಾಮರಣಿಯಾಗುವಂಥ ತಪಸ್ವಿಯೇ ನೋಡೋಣ ಎಂದು, ಒಬ್ಬೊಬ್ಬರೊ, ಇಬ್ಬರು ನಾಲ್ವರು ಜೊತೆ ಯಾಗಿಯೋ, ತಮಗೆ ಇಷ್ಟ ಬಂದ ಹೊತ್ತಿನಲ್ಲಿ ಅವರ ಆಶ್ರಮಕ್ಕೆ ಬಂದರು.

ವಾಮದೇವ ಮಹರ್ಷಿ ಮಹಾಜ್ಞಾನಿ; ಮಹಾಯೋಗಿ; ಮಹಾ ದ್ರಷ್ಟಾರ ಎಂದು ಬಹು ಜನರ ತಿಳಿವಳಿಕೆ. ಆದರೆ ಅವರು ಎಂದೂ ಬಾಯಿತೆರೆದು ನಾಲ್ಕು ಮಾತನ್ನಾಡಿದವರಲ್ಲ; ಯಾರಿಗೂ ಉಪದೇಶ ಮಾಡಿದವರಲ್ಲ.

ಆರುಣೇಯರ ವಂಶದಲ್ಲಿ ಹುಟ್ಟಿ ಎಳೆತನದಲ್ಲಿ ತಂದೆಯ ಸನ್ನಿಧಿಯಲ್ಲಿ ತತ್ತ್ವೋಪದೇಶ ಪಡೆದು ವಾಮದೇವ ತನ್ನ ದಿನಕ್ಕೆ ತುಂಬ ಬಲ್ಲವನೆಂಬ ಹೆಸರನ್ನು ಗಳಿಸಿದನು. ತಂದೆ ತೀರಿಕೊಂಡಾಗ ಇವನು ಆಶ್ರಮದ ಯಾಜಮಾನ್ಯವನ್ನು ವಹಿಸಿಕೊಳ್ಳಬೇಕಾಗಿತ್ತು; ಹಾಗೆ ಮಾಡಲಿಲ್ಲ. ಆಶ್ರಮದ ಪ್ರವರ್ತನವನ್ನು ತನ್ನ ತಮ್ಮನಿಗೆ ಬಿಟ್ಟು ಕೊಟ್ಟು, ತಾನು ತಪಶ್ಚರ್ಯೆಯಲ್ಲಿ ನಿಂತುಬಿಟ್ಟನು.

ಈ ತಪಶ್ಚರ್ಯೆಯ ಬಹುಭಾಗ ಆಶ್ರಮದ ಕೆಲಸವನ್ನುನೋಡಿ ಕೊಳ್ಳುವುದು: ಕುಲಪತಿಯಾದ ತನ್ನ ತಮ್ಮ ಉಪದೇಶ ಮಾಡುವ ಸ್ಥಳದಲ್ಲಿ ಎಲ್ಲ ವ್ಯವಸ್ಥೆಯನ್ನೂ ಸರಿಪಡಿಸುವುದು; ಆಶ್ರಮದಲ್ಲಿ ಬಾಳುವ ಜನ, ದನ, ಹಕ್ಕಿ, ಹುಲ್ಲೆ, ಎಲ್ಲದರ ಯೋಗಕ್ಷೇಮವನ್ನು ನೋಡಿಕೊಳ್ಳುವುದು; ಸಂಜೆ ಎಲ್ಲರೂ ವಿಶ್ರಾಂತಿ ಪಡೆದಮೇಲೆ ತಾನು ವಿಶ್ರಾಂತಿಗೆ ಹೋಗಿ, ಉದಯದಲ್ಲಿ ತಾನು ಮೊದಲು

ಎದ್ದು ಉಳಿದ ಆಶ್ರಮ ಸೇವಕರನ್ನು ಎಬ್ಬಿಸಿ, ದಿನದಿನದ ಕರ್ಮಚಕ್ರವನ್ನು ಮರಳಿ ಸುತ್ತುವುದು.

ಎಷ್ಟೋ ವರ್ಷ ಹೀಗೆ ಸೇವೆ ಸಲ್ಲಿಸಿ ವಾಮದೇವ ಒಂದು ದಿನ ಕುಲಪತಿ ತಮ್ಮನ ಬಳಿಗೆ ಹೋಗಿ, "ವಶಿಷ್ಠಾಶ್ರಮಕ್ಕೆ ಹೋಗಿ ಬರೋಣ ಎನ್ನಿಸಿದೆ ಹೋಗಿ ಬರುತ್ತೇನೆ," ಎಂದು ತಿಳಿಸಿ ತಾನೊಬ್ಬನೇ ಹೊರಟು ಹೋದನು. ಕುಲಪತಿ ತನ್ನ ಈ ಅಣ್ಣನ ಜೊತೆಗೆ ಇಬ್ಬರು ತರುಣರನ್ನು ಕಳಿಸುವ ಯೋಚನೆ ಮಾಡಿದನು. ಅಣ್ಣ ಇದಕ್ಕೆ ಒಪ್ಪಲಿಲ್ಲ. "ಅವರು ನನ್ನನ್ನು ನೋಡಿಕೊಳ್ಳುವುದು ಹಾಗಿರಲಿ, ನಾನೇ ಅವರನ್ನು ನೋಡಿಕೊಳ್ಳಬೇಕಾದೀತು, ಶುಶ್ರೂಷಕರ ಮಾತು ಬೇಡ, ಒಬ್ಬನೇ ಹೋಗಿ ಬರುತ್ತೇನೆ," ಎಂದನು.

ಎಷ್ಟು ವರ್ಷ ಅವನು ವಶಿಷ್ಠಾಶ್ರಮದಲ್ಲಿದ್ದನೋ ಪ್ರವಾಸದಲ್ಲಿ ಬೇರೆ ಯಾವ ಸ್ಥಳಗಳಿಗೆ ಹೋಗಿದ್ದನೋ ಯಾರೂ ಕಾಣರು. ಹತ್ತಿರ ಹತ್ತಿರ ಹನ್ನೆರಡು ವರ್ಷ ಕಳೆದು ಅವನು ತಮ್ಮನ ಆಶ್ರಮಕ್ಕೆ ಹಿಂದಿರುಗಿ ಬಂದನು.

ಹಿಂದಿರುಗಿ ಬಂದ ದಿನ ಅವನನ್ನು ನೋಡಿದ ಜನರಿಗೆ ಒಂದು ಸಂಗತಿ ಚೆನ್ನಾಗಿ ನೆನಪುಂಟು. ಎಂದೂ ತೇಜಸ್ಸಿನಿಂದ ತುಂಬಿದ್ದ ಮುಖ ಅಂದು ಸೂರ್ಯಮಂಡಲ ತೊಳಗುವಂತೆ ಕಾಣುತ್ತಿತ್ತು. ಹನ್ನೆರಡು ವರ್ಷದ ನಂತರ ಬಂದ ಋಷಿ ಹೊರಡುವಂದು ಬಿಟ್ಟಿದ್ದ ಕೆಲಸದಲ್ಲಿ ಮರಳಿ ತೊಡಗಿದನು. ಅದೇ ವೃದ್ಧಸೇವೆ, ಅದೇ ಬಾಲಸೇವೆ, ಅದೇ ಗೋಸೇವೆ, ಅದೇ ವೃಕ್ಷಪಾಲನ, ಅದೇ ಲತಾರಕ್ಷಣ, ಅದೇ ಲೋಕಪೂಜನ.

ಇದಾದ ಎಷ್ಟೋ ವರ್ಷದ ಮೇಲೆ ತಮ್ಮನಾದ ಕುಲಪತಿ ಇಹ ಜೀವನವನ್ನು ಮುಗಿಸಿದನು. ಆಗ ಕೆಲವರು ವಾಮದೇವನೇ ಆಶ್ರಮದ ಯಾಜಮಾನ್ಯವನ್ನು ವಹಿಸಿಕೊಳ್ಳಬಹುದು ಎಂದು ಯೋಚಿಸಿದರು. ವಾಮದೇವ ತಮ್ಮನ ಮಗನಿಗೆ ಯಾಜಮಾನ್ಯವನ್ನು ವಹಿಸಿಕೊಟ್ಟು, ಒಂದು ವರ್ಷ ಅವನ ಜೊತೆಗಿದ್ದು ಎಂದಿನಂತೆ ಆಶ್ರಮಸೇವೆಯನ್ನು ನಡೆಸಿದನು. ಆಮೇಲೆ ಹತ್ತಿರದ ವನದಲ್ಲಿ ಒಂದು ದೊಡ್ಡ ಆಲದ ಮರದ ಪಕ್ಕದಲ್ಲಿ ಒಂದು ಕುಟೀರವನ್ನು ಕಟ್ಟಿಕೊಂಡು ಮಗನ ಸಮ್ಮತಿ ಪಡೆದು ಅಲ್ಲಿ ವಾಸಿಸಲು ಮೊದಲು ಮಾಡಿದನು.

ಇದೂ ಅದೆಷ್ಟೋ ವರ್ಷದ ಹಿಂದಿನ ಮಾತು: ಇದರ ನೆನಪುಳ್ಳವರು ಆ ಸುತ್ತಿನಲ್ಲಿ ಬಹುಜನ ಇಲ್ಲ. ಮಹರ್ಷಿಯ ತಮ್ಮನನ್ನು ಕಂಡಿದ್ದವರು ದೇವರು ಮತ್ತೂ ಕಡಿಮೆ ಜನ. ಇವರ ತಂದೆಯನ್ನು ಕಂಡಿದ್ದವರು ಇಬ್ಬರೋ ಮೂವರೋ: ಮಹರ್ಷಿ ಹುಟ್ಟಿದ್ದನ್ನು ಕಂಡವರು ಯಾರೂ ಇಲ್ಲ.

ಮಹರ್ಷಿಯ ಜೀವನ ಅದೊಂದು ವಿಚಿತ್ರ ರೀತಿಯ ಜೀವನ. ಅವನದೇ ಆದ ಆ ಸಣ್ಣ ಆಶ್ರಮದಲ್ಲಿ ಅವನು ಇಬ್ಬರು ಜೊತೆಗಾರರನ್ನು ಮಾತ್ರ ಇರಿಸಿಕೊಂಡಿದ್ದನು. ಅವರನ್ನು ಶಿಷ್ಯರೆಂದು ಕರೆಯುವಂತಿಲ್ಲ. ಏಕೆಂದರೆ ಮಹರ್ಷಿ ಅವರಿಗೆ ಒಂದು ದಿನ ಒಂದು ಮಾತನ್ನು ಉಪದೇಶ ಎಂದು ಹೇಳಿದವನಲ್ಲ. ಶಿಷ್ಯರಲ್ಲ, ಸೇವಕರು ಎನ್ನೋಣ ಎಂದರೆ ಆಶ್ರಮದ ಎಲ್ಲಾ ಕೆಲಸದಲ್ಲೂ ಮಹರ್ಷಿ ಜೊತೆಗಾರರಿಗೆ ಜೊತೆಯಾಗಿ ಸಮಸಮನಾಗಿ ದುಡಿಯುತ್ತಿದ್ದನು. ಅವರು ಮಾಡಿದ ಕೆಲಸ ಇವನು ಮಾಡದೆ ಇದ್ದುದು ಎಂದರೆ ಆ ದಾರಿಯಲ್ಲಿ ಬಂದ ಪ್ರವಾಸಿ ಭಿಕ್ಷುಗಳಿಗೆ ಆಶ್ರಮದಲ್ಲಿ ನಡೆಸಿದ ಆತಿಥ್ಯದ ವಿವರ; ಹಾಗೆಯೇ ಅಂಥವರು ಅಂಥ ಇಂಥ ಕಡೆಗೆ ಹೋಗಬೇಕೆಂದು ಬೇಡಿದರೆ ಅವರನ್ನು ದಾರಿ ನಡೆಸಿಕೊಂಡು ಹೋಗಿ ಆ ಸ್ಥಳಗಳಿಗೆ ಕಳುಹಿಸಿ ಬರುವುದು. ಅವನು ಈ ಕೆಲಸಗಳನ್ನು ಮಾಡದ್ದಕ್ಕೆ ಕಾರಣ ಬಹುಶಃ ಜನ ಅವನಿಂದ ಈ ಕೆಲಸಗಳನ್ನು ಮಾಡಿಸಿಕೊಳ್ಳಲು ಅಡ್ಡಿ ಮಾಡುತ್ತಿದ್ದರು.

ಹೊಸದಾಗಿ ಆಶ್ರಮ ಮಾಡಿಕೊಂಡ ಕಾಲದಲ್ಲಿ ಆಶ್ರಮದ ನೆಲ ಶುದ್ಧ ಅರಣ್ಯವಾಗಿ ಇದ್ದಿತೆಂದೂ ಮಹರ್ಷಿ ತಾನೇ ಅದನ್ನು ಸರಿಮಾಡಿಕೊಂಡು ಇಂದಿನ ಸ್ಥಿತಿಗೆ ತಂದಿದ್ದರೆಂದೂ ಸುತ್ತ ಪ್ರತೀತಿ. ಆಶ್ರಮ ಈಗ ಒಂದು ನಂದನದಂತೆ ಕಾಣುವುದು. ಎಂದಿನಿಂದಲೋ ಬೆಳೆದು ಬಂದಿದ್ದ ಆ ಮಹಾ ವಟವೃಕ್ಷದ ನಾಲ್ಕೂ ಕಡೆಗೆ ಸಾಲುಸಾಲಾಗಿ ಸಣ್ಣ ಮರಗಳು ಬೆಳೆದಿದ್ದವು. ಹಲವು ಹಣ್ಣಿನ ಗಿಡಗಳು; ಹಲವು ಹೂವಿನ ಗಿಡಗಳು. ಈ ಒಂದೊಂದು ಗಿಡವನ್ನೂ ಮಹರ್ಷಿ ತಾನೇ ನೆಟ್ಟು, ನೀರೆರೆದು ಸಾಕಿ ಬೆಳಸಿದ್ದನು. ದೊಡ್ಡ ಮರದ ಅಡಿಯಲ್ಲಿ ನಾಲ್ಕು ದಿಕ್ಕಿಗೂ ಮುಖವಾಗಿ ಒಂದು ಚಚ್ಚೌಕವಾದ ಕಟ್ಟೆ. ಅದರ ಮಧ್ಯೆ ಯಾವ ಮುಖವಾಗಿ ಕುಳಿತರೂ ಎದುರಿಗೆ ಒಂದು ದಾರಿ ಕಾಣುವುದು. ಅದರ ಎರಡೂ ಬದಿಗೆ ಸಾಲಿನ ಮರಗಳು, ವನದಲ್ಲಿ ನಾಲ್ಕು ಮೂಲೆಗೆ ನಾಲ್ಕು ದೊಡ್ಡ ಬಾವಿಗಳುಂಟು. ಅವುಗಳ ಬಳಿ ಕಲ್ಲಿನ ಮಂಚಗಳು, ಇತ್ತ ಅತ್ತ ಮರಗಳು.

ವನದ ಒಂದೊಂದು ಮರ, ಗಿಡ, ಬಳ್ಳಿಯ ಚರಿತ್ರೆಯನ್ನೂ ಮಹರ್ಷಿ ಬಲ್ಲನು.

ವನದ ಹಣ್ಣು ಹೂವು ಹತ್ತಿರದ ಆಶ್ರಮದ ಜನರಿಗೆ, ಗ್ರಾಮಗಳ ಜನರಿಗೆ, ಮೀಸಲು. ವಾಮದೇವನ ಆಶ್ರಮಕ್ಕೆ ನಡೆದು ಬರುವಷ್ಟು ಶ್ರಮ ತೆಗೆದುಕೊಂಡವರಿಗೆ ಹಣ್ಣಿಗೆ ಹೂವಿಗೆ ಕಡಮೆ ಇಲ್ಲ.

ಇವನ ಆಶ್ರಮದಲ್ಲಿ ನಾಲ್ಕು ಕರೆಯುವ ಹಸುಗಳು ಉಂಟು. ಗ್ರಾಮದ ಜನ ಕರೆಯುವ ಹಸುಗಳನ್ನು ಕರುಗಳೊಂದಿಗೆ ತಂದು ಆಶ್ರಮದಲ್ಲಿ ಬಿಟ್ಟು ಹೋಗುವರು. ಹಾಲು ಬತ್ತುವ ವೇಳೆಗೆ ಬಂದು ಹಸುವನ್ನೂ ಬೆಳೆದ ಕರುವನ್ನೂ ಕರೆದುಕೊಂಡು ಹೋಗುವರು. ವನದ ಹಣ್ಣು ಹೂವಿನ ಪ್ರಯೋಜನ ಪಡೆದದ್ದಕ್ಕೆ ಪ್ರತಿಯಾಗಿ ಅವರು ಮಹರ್ಷಿಗೆ ಮಾಡುತ್ತಿದ್ದ ಉಪಕಾರ ಇದು.

ಮುಪ್ಪಿನ ದಿನ ಬಂದಂತೆ ಮಹರ್ಷಿಯನ್ನು ನೋಡುವುದಕ್ಕೆ ಜನ ಬರುವುದು ಹೆಚ್ಚಾಯಿತು. ಬಂದವರು ಮುದುಕನನ್ನು ಕೆಲವು ವೇಳೆ ಪ್ರಶ್ನಿಸುವರು; ವಾದಕ್ಕೆ ಎಳೆಯಲು ನೋಡುವರು. ಅವರಿಗೆಲ್ಲಾ ಋಷಿ ಒಂದೇ ಉತ್ತರ ಹೇಳುವನು: "ಈಗ ನೀವು ಆಡುತ್ತಿದೀರಲ್ಲ ಈ ಮಾತನ್ನು ತಳಹದಿಯನ್ನಾಗಿಟ್ಟುಕೊಂಡು ನೀವೇ ಯೋಚನೆ ಮಾಡಿ, ಸತ್ಯ ಕಾಣುತ್ತದೆ."

ಇವನ ಈ ಮೂಕವ್ರತವನ್ನು ನೋಡಿ ಅನೇಕರಿಗೆ ಬೇಸರ. "ಇವನು ಚಿಕ್ಕಂದು ಶಾಸ್ತ್ರಪಾಠ ಮಾಡಲಿಲ್ಲ. ತನ್ನ ಅಜ್ಞಾನ ಹೊರ ಬೀಳುತ್ತೆದೆಂದು ಅಂಜಿ ಮೌನವ್ರತ ಹಿಡಿದಿದ್ದಾನೆ," ಎಂದೇ ಇಂಥವರು ಸಿದ್ಧಾಂತ ಮಾಡಿದರು. ಆದರೆ ಈ ನಿರ್ದುಷ್ಟ ಜೀವನ, ಈ ವಿಶ್ವಸೌಹಾರ್ದ, ಈ ಸೋಲದ ದುಡಿಮೆ ಇದನ್ನು ಕಂಡವರು, "ಶಾಸ್ತ್ರದ ಮಾತು ಹೇಗೋ, ಮಹರ್ಷಿಗೆ ಜೀವನದ ಪಾಠ ಬಹಳ ಆಗಿದೆ," ಎನ್ನುವರು.

ಮಹರ್ಷಿಯ ತಮ್ಮನ ಮಗ ಹೇಳುವನು: "ಅಪ್ಪಾಜಿಯವರ ಬುದ್ಧಿ ಬಹು ಸೂಕ್ಷ್ಮ, ಜ್ಞಾಪಕಶಕ್ತಿ ಪ್ರಚಂಡ. ಅವರು ಯಾವ ವಾದವನ್ನೂ ಎರಡು ಸಲ ಕೇಳಿದವರಲ್ಲ. ಆದರೆ ಎಲ್ಲ ಮತವನ್ನೂ ಬಲ್ಲರು. ಪಾಠ ಕೇಳಲಾರದ ಬೇಸರದಿಂದಲೇ ಅವರು ಅಭ್ಯಾಸದ ಶ್ರೇಣಿಯನ್ನು ತೊರೆದು ಆಶ್ರಮದ ಕೆಲಸಕ್ಕೆ ನಿಂತರು ಎಂದು ನಮ್ಮ ತಂದೆ ಹೇಳುತ್ತಿದ್ದರು."

ಮಹರ್ಷಿ ತನಗೆ ತೊಂಬತ್ತು ವರುಷ ಆಯಿತೆಂದು, ತೊಂಬತ್ತೊಂದು ಆಯಿತೆಂದು, ತೊಂಬತ್ತೊಂಬತ್ತು ಆಯಿತೆಂದು ಹೇಳಿಕೊಂಡು ಬಂದಿದ್ದನು. ಈ ಮಾತು ನಿಜವಿರಬೇಕು: ಏಕೆಂದರೆ

ಇವನ ವಯಸ್ಸಿನ ಜನ ಹತ್ತಿರ ಯಾರೂ ಇಲ್ಲ. ಆದರೂ ಇವನು ಯೌವನದಲ್ಲಿ ತಮ್ಮನ ಆಶ್ರಮದಲ್ಲಿ, ಅವನ ಮಗನ ಆಶ್ರಮದಲ್ಲಿ, ಮಾಡುತ್ತಿದ್ದ ಕೆಲಸವನ್ನು ಈಗಲೂ ತನ್ನ ಆಶ್ರಮದಲ್ಲಿ ಮಾಡುತ್ತಲೇ ಇರುವವನು. ವರುಷ ತುಂಬಿತು, ಮುಪ್ಪು ಬರಲಿಲ್ಲ; ಮುಪ್ಪು ಬಂದಿರಬಹುದು; ಶಕ್ತಿ ಕುಂದಿರಲಿಲ್ಲ; ಅಥವಾ ಶಕ್ತಿ ಕುಗ್ಗಿಯೇ ಇದ್ದರೂ ಮನಸ್ಸಿನ ದಾರ್ಢ್ಯ ದುರ್ದಮ್ಯವಾಗಿ ನಿಂತಿತ್ತು.

ತಮ್ಮನ ಮಗ ಕುಲಪತಿ ಒಂದು ದಿನ ಬಂದಾಗ ಮಹರ್ಷಿ ಅವನಿಗೆ, "ಇನ್ನು ನಾನು ಬಹುಕಾಲ ನಿನಗೆ ಕಾಣುತ್ತಿರುವುದಿಲ್ಲ. ಹಿರಿಯರನ್ನು ಸೇರಲು ಹೋಗುತ್ತೇನೆ," ಎಂದನು.

ತರುಣ ಕುಲಪತಿಗೆ ಎದೆ ಬಿರಿದಂತಾಯಿತು. "ಏಕೆ ಅಪ್ಪಾಜಿ ಹೀಗೆ ಎನ್ನುತ್ತೀರಿ?" ಎಂದನು.

"ತಂದೆ ನನಗೆ ಲೋಕದ ಕರ್ಮವನ್ನು ಮಾಡಿಕೊಂಡು ನೂರು ವರ್ಷ ಬಾಳು ಎಂದು ಅಪ್ಪಣೆ ಮಾಡಿದರು. ಆ ಅಪ್ಪಣೆ ಆಶೀರ್ವಾದವಾಗಿ ನನ್ನನ್ನ ನಡೆಸಿಕೊಂಡು ಬಂದಿದೆ. ನೂರು ವರ್ಷ ತುಂಬಿದ ಮೇಲೆ ನಾನು ಇಲ್ಲಿ ಇರುವ ಕಾರಣವಿಲ್ಲ."

"ಅದು ಎಂದಿಗೆ ತುಂಬುವುದು?"

"ಬರುವ ಚೈತ್ರ ಪೂರ್ಣಿಮೆಗೆ."

ಕುಲಪತಿ "ಅಯ್ಯೋ, ಇಷ್ಟು ಬೇಗನೆ ನಮ್ಮನ್ನು ಬಿಟ್ಟು ಹೋಗುವಿರಾ?" ಎಂದು ಮಹರ್ಷಿಯನ್ನು ಅಪ್ಪಿಕೊಂಡು ಎದೆಯಮೇಲೆ ತಲೆಯಿಟ್ಟು ಕಣ್ಣೀರು ಹಾಕಿದನು. ಮಹರ್ಷಿ ಅವನನ್ನು ಕಟ್ಟಿಕೊಂಡು ಕುರುಳನ್ನು ನೇವರಿಸಿ ಕೆನ್ನೆಗೆ ಮುತ್ತಿಕ್ಕಿ, "ಈ ಮೈ ಹೋಗುತ್ತದೆ. ನಾನು ಹಿರಿಯರೊಡನೆ ನಿನ್ನಲ್ಲಿ ಬೆರೆತಿರುತ್ತೇನೆ. ಕುಲಪತಿಯಾದವನು ಅತ್ತರೆ ಹೇಗಣ್ಣ? ಆತ್ಮದ ವಿಷಯ ಹೇಳಿಕೊಡುವ ಪಾಠ ಬಾಳಲ್ಲಿ ಕಾಣಬೇಡವೇ?" ಎಂದನು.

ತರುಣ ಕುಲಪತಿ ಸಮಾಧಾನ ತಂದುಕೊಂಡನು. ಎದ್ದು ಮಹರ್ಷಿಯ ಕಾಲನ್ನು ಹಿಡಿದು ದಂಡಪ್ರಣಾಮ ಮಾಡಿದನು. "ನೀವು ಯಾರನ್ನೂ ಶಿಷ್ಯನೆಂದದ್ದೇ ಇಲ್ಲ. ಈಗ ಮನಸ್ಸು ಮಾಡಿ ನನ್ನನ್ನು ಶಿಷ್ಯನನ್ನಾಗಿ ಅಂಗೀಕರಿಸಿ ಉದ್ಧಾರ ಮಾಡಬೇಕು," ಎಂದು ಬೇಡಿಕೊಂಡನು.

ಮಹರ್ಷಿ, "ಯಾವನೋ ಒಬ್ಬನನ್ನು ಹಿರಿಯನೆಂದು ಭಾವಿಸಿ ಹೀಗೆ ತಗ್ಗ ಬಲ್ಲ ಜೀವಕ್ಕೆ ಉದ್ಧಾರ ಸಿದ್ಧಿಸಿದೆ. ನಿನಗೆ ಚಿಂತೆ ಬೇಡ. ಹಿರಿಯರ ಧರ್ಮವನ್ನು ನಡೆಸುತ್ತಿದ್ದೀಯೆ, ಅದನ್ನು ನಿಲ್ಲಿಸಬೇಡ, ನಡೆಸುತ್ತಿರು, ಉದ್ಧಾರ ತಾನೇ ಆಗುತ್ತದೆ," ಎಂದನು.

"ನೀವು ನಡೆಸಿದ ಧರ್ಮವನ್ನು ನಡೆಸುವುದು ತಪ್ಪೆ?"

"ನನಗೆ ಕಂಡ ಸಂದೇಹ ಯಾರಿಗೆ ಕಾಣುತ್ತದೆ, ಅಂಥವರು ನಾನು ನಡೆಸಿದ ಧರ್ಮವನ್ನು ನಡೆಸಬೇಕು."

"ಆ ಸಂದೇಹ ಯಾವುದು?"

"ಅದನ್ನು ಕಾಣದವರಿಗೆ ಅದನ್ನು ಹೇಳಬಾರದು. ವಿಚಾರಪಥದಲ್ಲಿ ನೆರವಾಗಬೇಕು ಹೊರತು ಸಂಶಯವನ್ನು ಮೂಡಿಸುವುದು ಋಷಿ ಧರ್ಮ ಅಲ್ಲ."

"ಇದು ಯಾವುದನ್ನೂ ನೀವು ನಮಗೆ ಹೇಳಿಕೊಡಲಿಲ್ಲವಲ್ಲಾ. ನಿಮ್ಮ ಸಂಪ್ರದಾಯ ಹಿಂದಿನಿಂದ ಬರಲಿಲ್ಲ. ಮುಂದಕ್ಕಾದರೂ ಹರಿಯಬೇಡವೇ?"

"ತತ್ತ್ವವನ್ನು ಕಂಡ ಮಹರ್ಷಿಗಳು ಹಲವರು. ಎಲ್ಲರೂ ತಾವು ಕಂಡದ್ದನ್ನು ತಿಳಿಸಿ ದ್ರಷ್ಟಾರರೆನಿಸಿಕೊಂಡಿದಾರೆ. ಈಗಾಗಲೇ ತಕ್ಕಷ್ಟು ಸತ್ಯ ಪ್ರಕಾಶವಾಗಿದೆ. ಅದರ ಅನುಷ್ಠಾನ ನಡೆಯಲಿ. ಹೊಸದಾಗಿ ನಾನು ಹೇಳಬೇಕಾದ ಮಾತಿಲ್ಲ."

"ನಿಮ್ಮ ಜೀವನ ಒಂದು ರೀತಿಯದಾಗಿದೆಯಲ್ಲ. ಇದರ ಸೂತ್ರವೇನೆಂದು ನನಗೆ ಹೇಳಿಕೊಡಬೇಕಲ್ಲವೆ?"

"ಹೇಳುವುದೇನಿದೆ? ಇದರ ರೀತಿ ಚೆನ್ನವೆಂದು ಕಂಡರೆ ಇದರಂತೆ ನಡೆಯಬೇಕು."

"ಈ ಮಾತನ್ನಾದರೂ ಹೇಳಬೇಕಲ್ಲ."

"ಹೇಳಬೇಕೆಂದು ಯಾರಿಗೆ ತೋರುತ್ತದೆ ಅವರು ಹೇಳಬೇಕು."

ತರುಣ ಕುಲಪತಿ ಇನ್ನು ಮಾತನ್ನು ಬೆಳೆಸಲಿಲ್ಲ. "ನಾನು ತಮ್ಮ ಶುಶ್ರೂಷೆಯನ್ನು ಸಾಕಾದಷ್ಟು ಮಾಡಲಿಲ್ಲ. ಉಳಿದಿರುವ ತಿಂಗಳು ದಿನ ಆದಷ್ಟು ಸಲ ಹತ್ತಿರ ಬರುತ್ತೇನೆ. ನನ್ನ ಕೈ ಹಿಡಿದು ನಡೆಸಬೇಕು," ಎಂದನು.

ಮಹರ್ಷಿ ಒಂದು ಕ್ಷಣ ಯೋಚಿಸಿ, "ಸಂತೋಷ, ಬಾ," ಎಂದನು.

"ಕೊನೆಯ ದಿನ ನಾನು ಹತ್ತಿರವೇ ಕುಳಿತಿರಬೇಕು. ಇದಕ್ಕೆ ಅಪ್ಪಣೆ ಬೇಕು."

ಮಹರ್ಷಿ ಮರಳಿ ಸ್ವಲ್ಪ ಯೋಚನೆ ಮಾಡಿ, "ಆಗಬಹುದು," ಎಂದನು.

ಎರಡು ದಿನಬಿಟ್ಟು ಕುಲಪತಿ, "ಹುಣ್ಣಿಮೆಯ ದಿನ ನಿಮ್ಮನ್ನು ನೋಡಬಂದವರು ಏನಾದರೂ ಸಂಗತಿ ಕೇಳಿದರೆ ನೀವು ಆದಷ್ಟು ವಿಷಯ ತಿಳಿಯುವಂತೆ ಉತ್ತರ ಹೇಳಬೇಕು," ಎಂದನು. ಮಹರ್ಷಿ ಮರಳಿ ಯೋಚನೆ ಮಾಡಿ, "ಆಗಲಿ," ಎಂದಿದ್ದನು.

ಈ ಮಾತು ನಡೆದು ತಿಂಗಳು ಮುಗಿದಿದೆ. ಚೈತ್ರ ಪೂರ್ಣಿಮಾ ದಿನ ಬಂದಿದೆ. ಸುತ್ತಣಿಂದ ಜನ ಮಹರ್ಷಿಯನ್ನು ನೋಡಲೆಂದು ಬರುತ್ತಿದಾರೆ.

ಬೆಳಗಾಗ ಎಂದಿನಂತೆ ಎದ್ದು ಮಹರ್ಷಿ ಎಲ್ಲ ಕರ್ಮಗಳನ್ನೂ ಮುಗಿಸಿಕೊಂಡು ಕುಟೀರದ ಎದುರಿನ ಮಲ್ಲಿಗೆಯ ಬಳ್ಳಿಯ ಬಳಿ ಕುಳಿತು ಅದರ ಬೇರಿನ ಹತ್ತಿರ ಮಣ್ಣನ್ನು ಕೊತ್ತಿ ಪಾತಿಯನ್ನು ಸರಿಮಾಡುತ್ತಿದ್ದಾರೆ.

ನೋಡಬಂದ ಜನರಲ್ಲಿ ಇಬ್ಬರು ಮಹರ್ಷಿಗೆ ನಮಸ್ಕರಿಸಿ "ಇದೇನು ಈ ಕೆಲಸವನ್ನು ನೀವೇ ಮಾಡಬೇಕೆ?" ಎಂದರು.

ಮಹರ್ಷಿ, "ಹೌದಪ್ಪ, ಇದು ನನ್ನ ಕೆಲಸ. ತಾಯಿ ತನ್ನ ಮಗುವನ್ನು ತಾನೇ ನೋಡಿಕೊಳ್ಳುವಂತೆ ನನ್ನ ಈ ಎಲ್ಲ ಗಿಡವನ್ನೂ ನಾನೇ ನೋಡಿಕೊಳ್ಳಬೇಕು," ಎಂದನು.

“ಹೀಗೆ ಸಂಸಾರದಲ್ಲಿ ಲಿಪ್ತರಾಗುವುದು ತಪ್ಪು, ಮಮತೆ ಸದ್ಗತಿಗೆ ಅಡ್ಡಿಯಾಗುತ್ತದೆ, ಎನ್ನುವ-ರಲ್ಲವೆ?”

“ಮಮತೆ ತಪ್ಪು, ಅಭಿಮಾನ ತಪ್ಪಲ್ಲ. ಪ್ರೇಮದಿಂದ ದುಡಿಯುವುದೇ ಸದ್ಗತಿಗೆ ಸಾಧನ. ಅದ-ನ್ನು ಬಿಟ್ಟು ಸದ್ಗತಿಗೆ ಮಾರ್ಗವಿಲ್ಲ.”

“ತಾವು ಇಂದಾದರೂ ವಿಶ್ರಾಂತಿ ತೆಗೆದುಕೊಳ್ಳಿ. ಇದನ್ನು ನಾವು ಯಾರಾದರೂ ನೋಡಿಕೊಳ್ಳು-ತ್ತೇವೆ.”

“ಬೇಡಣ್ಣ. ನನಗಿದು ಕಷ್ಟವಲ್ಲ.”

“ಕೈಯೆಲ್ಲಾ ಮಣ್ಣಾಗುತ್ತದಲ್ಲ.”

“ಕೈಯಷ್ಟೇ ಮಣ್ಣಾಗುತ್ತದೆ. ಜೀವಕ್ಕೆ ಕರ್ಮದ ಲೇಪ ಇಲ್ಲ.”

ಬೇರೆಯ ಜನ ಬಂದರು. ಮಹರ್ಷಿ ದೊಡ್ಡ ಮರದ ಕೆಳಗೆ ಕುಳಿತು ಎಳೆಯ ಸೂರ್ಯನನ್ನು ನೋ-ಡುತ್ತಿದ್ದರು. ಆಶ್ರಮದ ಕರು ಒಂದು ಅವರ ಬಳಿ ಬಂದಿತು. ಋಷಿ ಹತ್ತಿರದ ಹುಲ್ಲು ಎಸಳನ್ನು ಕಿತ್ತು ಕರುವಿಗೆ ಅದನ್ನು ತಿನ್ನಿಸಿದರು. ಹತ್ತಿರಕ್ಕೆ ಬಂದವರು ಪ್ರಣಾಮಮಾಡಿ ಕೆಳಗಡೆ ಕುಳಿತರು. ಅವ-ರಲ್ಲಿ ಒಬ್ಬನು, “ಎಷ್ಟೋ ಕಾಲ ವಿಚಾರ ಮಾಡಿದರೂ ದೇವರು ಎಂಬುದೊಂದು ಉಂಟೇ ಎನ್ನುವ ಮಾತು ಪ್ರಶ್ನೆಯಾಗಿಯೇ ಉಳಿದಿದೆಯಲ್ಲ. ಈ ವಿಷಯದಲ್ಲಿ ಮಹರ್ಷಿಗಳು ನಮಗೆ ಸರಿಯಾದ ತಿಳಿವಳಿಕೆಯನ್ನು ಕೊಡಬೇಕು,” ಎಂದನು.

ಮಹರ್ಷಿ: “ಅಣ್ಣಾ, ಚರಾಚರ ಸಮಸ್ತವಾದ ಈ ಸೃಷ್ಟಿ ಈಶ್ವರನೇ, ಬೇರೆ ಅಲ್ಲ; ಈ ಸೂರ್ಯನ ಬೆ-ಳಕು ಬಹಿರ್ಲೋಕವನ್ನು ಹೊದೆದಿರುವಂತೆ, ಈಶ್ವರದ ಬೆಳಕು ಅಂತರ್ಲೋಕ ಬಹಿರ್ಲೋಕ ಎಲ್ಲ-ವನ್ನೂ ಹೊದೆದಿದೆ. ಈ ಲೋಕ ಉಂಟೇ ಎಂದು ಕೇಳಿಕೋ. ಉಂಟು ಎನ್ನುವುದಾದರೆ ಆ ಇರು-ವುದೆಲ್ಲ ಈಶ್ವರ.”

"ಎಂದರೆ ಎದುರಿಗಿರುವುದೆಲ್ಲ ಈಶ್ವರ."

"ಹೌದು, ನಿಸ್ಸಂಶಯವಾಗಿ. ಒಳಗಿರುವುದು, ಎದುರಿಗಿರುವುದು, ಎಲ್ಲಿಯೂ ಇರುವುದು, ಎಲ್ಲ-ವೂ ಈಶ್ವರ."

"ಹಾಗಾದರೆ ನಾವು ಈಶ್ವರದೊಂದಿಗೆ ವರ್ತಿಸುವುದೇ ಕಷ್ಟವಲ್ಲ!"

"ಕಷ್ಟಕ್ಕೆ ಕಾರಣವಿಲ್ಲ. ಇದೆಲ್ಲಾ ಈಶ್ವರ ಎಂದು ನಿಶ್ಚಯ ಮಾಡಿಕೊ. ವ್ಯವಹಾರ ಸರಳವಾಗು-ತ್ತದೆ. ಯಾವುದರೊಂದಿಗೂ ವಿವಾದವಿರುವುದಿಲ್ಲ: ಎಲ್ಲದರೊಂದಿಗೂ ಸಮ್ಮತಿಯಿಂದ ಬಾಳುವೆ. ಆಗ ಈಶ್ವರ ದಯಪಾಲಿಸಿದ್ದನ್ನು ನೀನು ಸಂತೋಷದಿಂದ ಅನುಭವಿಸುತ್ತೀಯೆ. ನೀನಾಗಿ ಯಾವು-ದನ್ನೂ ಕಸಿದುಕೊಳ್ಳಹೋಗುವುದಿಲ್ಲ."

ಬೇರೆ ಜನ ಬಂದರು. ಋಷಿಯ ಬಳಿ ಕುಳಿತರು. ಮನುಷ್ಯರು ಏಕೆ ತಪ್ಪು ಮಾಡುತ್ತೇವೆ ಎಂಬ ಪ್ರಶ್ನೆಯನ್ನೆತ್ತಿದರು.

"ಲೋಕವೆಲ್ಲಾ ಒಂದು ಜೀವನ ಎಂಬುದನ್ನು ಕಾಣದ್ದರಿಂದ. ಎಲ್ಲವೂ ಒಂದೆಂದು ಕಂಡವನು ಇತರರಿಗೆ ಮಾಡಿದ ಕೆಡಕು ತನಗೇ ಕೆಡಕು ಎಂಬುದನ್ನು ಗ್ರಹಿಸುತ್ತಾನೆ. ಎಲ್ಲ ದುರ್ವರ್ತನವೂ ಆತ್ಮಹನನ."

"ಎಲ್ಲ ತಪ್ಪೂ ಅಜ್ಞಾನದ ಫಲವೇ? ಕೆಲವುವೇಳೆ ತಿಳಿದೂ ತಿಳಿದೂ ತಪ್ಪು ಮಾಡುತ್ತೇವಲ್ಲವೆ?"

"ಆಗ ಒಟ್ಟು ತಿಳಿವಳಿಕೆಯಲ್ಲಿ ಏನೋ ತಪ್ಪಿದೆ."

"ತಿಳಿವಳಿಕೆ ತಪ್ಪಾಗಿ ತಪ್ಪಿ ನಡೆದರೆ ಅದಕ್ಕೂ ಶಿಕ್ಷೆಯೆ?"

"ತಪ್ಪಿ ನಡೆದದ್ದಕ್ಕೆ ನಡೆಯ ತಪ್ಪೇ ಶಿಕ್ಷೆ, ಬೆಳಕು ಹೆಚ್ಚುವುದಕ್ಕೆ ಪ್ರತಿಯಾಗಿ ಚೇತನದಲ್ಲಿ ಕತ್ತಲು ಹೆಚ್ಚುತ್ತದೆ. ಚೆನ್ನ ಬಾಳಿದರೆ ಬೆಳಕಿನ ಲೋಕಕ್ಕೆ ಏರುತ್ತೇವೆ. ತಪ್ಪಿ ಬಾಳಿದರೆ ಕತ್ತಲ ಆಳಕ್ಕೆ ಇಳಿಯು-ತ್ತೇವೆ."

ಒಬ್ಬ ಜಿಜ್ಞಾಸು ಬಂದ: "ನನಗೆ ಬ್ರಹ್ಮದ ಸ್ವರೂಪ ತಿಳಿಯ ಬೇಕು," ಎಂದ.

ಮಹರ್ಷಿ ಅವನನ್ನು ಹಲವು ಪ್ರಶ್ನೆ ಕೇಳಿ ಕೊನೆಗೆ ಹೇಳಿದರು: "ನೀನು ಈ ವಿಷಯವನ್ನು ತಿಳಿಯಲು ಅಧಿಕಾರಿಯಾಗಿದ್ದೀಯೆ. ಕೇಳು, ತಿಳಿದುಕೊ. ಸರ್ವಂ ಖಲು ಇದಂ ಬ್ರಹ್ಮಾ ಎಂದರೇ ಹಿರಿಯರು, ಅದು ಅಕ್ಷತ ಸತ್ಯ. ಬ್ರಹ್ಮವೆನ್ನುವುದನ್ನು ಅದರೊಳಗಿರುವ ಒಂದೊಂದು ತುಣುಕೂ ಗ್ರಹಿಸಲಾರದು. ಅದನ್ನು ವರ್ಣಿಸಬೇಕಾದರೆ ಅಸಾಧ್ಯವಾದ ಎರಡು ಅವಸ್ಥೆಯನ್ನು ಜೋಡಿಸಿ ಹೇಳಬೇಕು. ಅದು ನಡೆಯುತಲೂ ಇದೆ; ಇದ್ದಲ್ಲಿಯೇ ಇದೆ. ಅದು ದೂರದಲ್ಲಿದೆ; ಹತ್ತಿರವಾಗಿಯೂ ಇದೆ. ಅದು ಎಲ್ಲದರ ಒಳಗೂ ಹೌದು; ಎಲ್ಲದರ ಹೊರಗೂ ಹೌದು. ಇದ್ದಲ್ಲಿ ಇರುತ್ತ ಅದು ಮನಸ್ಸಿಗೂ ಮೀರಿದ ವೇಗದಿಂದ ಹಾರುತ್ತಿದೆ. ದೇವರುಗಳು ಅದನ್ನು ಮುಟ್ಟರು, ಅದು ಎಲ್ಲರಿಗೂ ಮೊದಲು, ಬೆಟ್ಟದ ಮೇಲಿಂದ ಒಂದು ಕಲ್ಲು ಉರುಳಿ ಎಷ್ಟು ಓಡಿದರೂ ಭೂಮಿಯಲ್ಲೇ ಇರುವಂತೆ, ಭೂಮಿ ತಾನು ಇದ್ದಲ್ಲೇ ಇದ್ದು ಆ ಕಲ್ಲಿನ ಓಟ ನಿಂತಾಗ ಅದು ಮುಟ್ಟಿದ ಸ್ಥಳದಲ್ಲಿ ಇರುವಂತೆ: ಬ್ರಹ್ಮತತ್ತ್ವ ಓಡುವ ವಸ್ತುಗಳನ್ನು ಓಟದ ಆರಂಭದಲ್ಲಿ ಓಡಲು ಪ್ರೇರಿಸುತ್ತದೆ; ತಾನು ಕದಲದೆ, ಅವುಗಳ ಜೊತೆಯಲ್ಲಿರುತ್ತದೆ; ಅವು ಓಟ ಮುಗಿಸಿ ಗುರಿಯನ್ನು ಮುಟ್ಟಿದಾಗ ಅಲ್ಲಿ ಅವನ್ನು ಕೈಹಿಡಿಯಲು ಕಾದಿರುತ್ತದೆ."

ಮತ್ತೆ ಕೆಲವು ಜನ ಬಂದರು. ಅವರಲ್ಲೊಬ್ಬ, "ತಾವು ದಯೆಯೇ ಮುಖ್ಯ ಧರ್ಮ ಎಂದು ಅಪ್ಪಣೆ ಕೊಟ್ಟಿರಂತೆ. ಕೆಟ್ಟುದನ್ನು ದಯೆಯಿಂದ ಕಾಣುವುದು ಹೇಗೆ? ಕೃಪೆಮಾಡಿ ತಿಳಿಸಬೇಕು," ಎಂದನು.

ಮಹರ್ಷಿ ಹೇಳಿದರು: "ಎಲ್ಲವೂ ಒಂದೇ ಆತ್ಮ. ಇದನ್ನು ಅಭ್ಯಾಸ ಮಾಡು. ಆಗ ದುಷ್ಟವೆನ್ನುವುದರ ವಿಷಯದಲ್ಲಿ ಕನಿಕರವೇ ಮೂಡುತ್ತದೆ; ಬೇಸರ ಮೂಡುವುದಿಲ್ಲ. ನಿನ್ನ ಕಾಲು ಕೆಸರಾದಾಗ ಕಾಲನ್ನು ನೋಯಿಸದೆ ಕೆಸರನ್ನು ತೊಳೆಯುತ್ತೀಯೆ. ಈ ಎಚ್ಚರದ ಕಾರಣ ಕಾಲು ನೀನೇ, ಬೇರೆ ಅಲ್ಲ, ಎಂಬುದರ ಅರಿವು. ಎಲ್ಲ ಜೀವನ ವಿಷಯದಲ್ಲಿ ಇದು ನಾನೇ ಎಂಬ ಭಾವ ಇದೇ ತಾಳ್ಮೆಯನ್ನು ತರುತ್ತದೆ."

"ಎಲ್ಲವೂ ನಾನೇ ಎನ್ನುವಾಗ ಸ್ವಾರ್ಥವೇ ಬೆಳೆದು ಪರಹಿತ ಮರೆಯಬಹುದಲ್ಲವೇ?"

"ಎಲ್ಲವೂ ನಾನೇ ಎನ್ನುವುದು ಚರ್ಚೆ ಮಾತ್ರ ಆದಾಗ ಹೀಗಾಗುವುದು ಸಾಧ್ಯ. ಅನುಭವವಾದಾಗ ಸಾಧ್ಯವಲ್ಲ. ಕಾಲನ್ನು ಜಿಗುಟ ಕೈ, ಕೈಯನ್ನು ಕಚ್ಚಿ ಬಾಯಿ, ಯಾವ ಸುಖವನ್ನೂ ಪಡೆಯುವುದಿಲ್ಲ ಕಾಲಿಗೆ ಪೆಟ್ಟಾದಾಗ ಕೈ ಅದನ್ನು ಸವರುತ್ತದೆ. ಕೈ ಸುಟ್ಟಾಗ ಬಾಯಿ ಅದನ್ನು ಊದುತ್ತದೆ. ಒಂದು ಎಂದು ಬಾಯಲ್ಲಿ ಹೇಳುವುದಲ್ಲ, ಒಂದು ಎಂದು ಬಾಳುವುದು ಗುರಿ. ಹೀಗೆ ಬಾಳುವ ಜೀವಕ್ಕೆ ಮೋಹ ಮಾತ್ರ ಅಳಿಯುವುದಿಲ್ಲ, ಶೋಕವೂ ಇಲ್ಲವಾಗುತ್ತದೆ."

"ಬ್ರಹ್ಮವೇ ಎಲ್ಲವೂ ಎಂದಮೇಲೆ ನಾನು ಬ್ರಹ್ಮ: ಆದರೂ ನಾನು ಕಷ್ಟ ಪಡುತ್ತೇನೆ. ಇದಕ್ಕೇನು ಕಾರಣ?"

"ಅದೇ ಕಾರಣ. ನಾನು ಬ್ರಹ್ಮ ಎನ್ನುವುದು ಮಾತಾಗಿ ತಿಳಿದಿದೆ, ಅನುಭವವಾಗಿಲ್ಲ. ಬ್ರಹ್ಮನೇ ನಾನಾಗಿದೆ ಎಂದು ಬಲ್ಲ ಮನುಷ್ಯನಿಗೆ ನಾನು ಎಂಬ ತತ್ತ್ವ ಸ್ವಚ್ಛ ವಸ್ತು, ಅದಕ್ಕೆ ಕಾಯವಿಲ್ಲ; ಅದರಲ್ಲಿ ಬೇನೆ ಇಲ್ಲ, ಬೇನೆ ಪಡುವ ಅಂಗವಿಲ್ಲ; ಬೇನೆ ಮುಟ್ಟಲಾರದಂತೆ ಅದು ಶುದ್ಧ ತತ್ತ್ವವಾಗಿರುತ್ತದೆ."

ಒಂದು ಕ್ಷಣ ಬಿಟ್ಟು ಮಹರ್ಷಿ ಮರಳಿ ಹೇಳಿದರು: "ಇದನ್ನು ಬಲ್ಲ ಚೇತನಕ್ಕೆ ಬ್ರಹ್ಮತತ್ತ್ವ ಮನ್ವಂತರ ಕಲ್ಪಾಂತರ ಸಮಾವಿಷ್ಟವಾದ ಅನಂತ ಕಾಲದಲ್ಲಿ ಅವ್ಯಾಮಿಶ್ರವಾದ ಶುಭವನ್ನು ಅನುಗ್ರಹಿಸುತ್ತದೆ."

ಮಧ್ಯಾಹ್ನವಾಗುತ್ತ ಬಂತು. ಮಹರ್ಷಿಯ ಕುಮಾರ ಕುಲಪತಿ ವೃದ್ಧನಿಗೆ ಸ್ವಲ್ಪ ವಿಶ್ರಾಂತಿ ದೊರೆಯಲೆಂದು ಇತರರು ಬರದಂತೆ ನಿಲ್ಲಿಸಿದನು. ಮಹರ್ಷಿ ಅಲ್ಲಿಯೇ ಕೈಕಾಲು ತೊಳೆದುಕೊಂಡು ಅತಿ ಸ್ವಲ್ಪ ಉಸಲಿ ಹಣ್ಣು ಹಾಲನ್ನು ತೆಗೆದುಕೊಂಡು ಒಂದು ಹಿಡಿ ಉಸಲಿಯನ್ನು ನಾಲ್ಕು ಭಾಗ ನಾಲ್ಕು ಕಡೆಗಿಟ್ಟು ಕಲ್ಲು ಮಂಚದ ಮೇಲೆಯೇ ಮಲಗಿದರು.

ಸ್ವಲ್ಪ ಹೊತ್ತಿನಲ್ಲಿ ನಾಲ್ಕು ಅಳಿಲು ಬಂದು ಉಸಲಿಯ ಕಾಳನ್ನು ತಿಂದುವು. ಮಹರ್ಷಿ ಅವುಗಳ ಭೋಜನ ಕ್ರಮವನ್ನು ಸಂತೋಷದಿಂದ ನೋಡುತ್ತಿದ್ದರು.

ಸೂರ್ಯ ಪಶ್ಚಿಮಕ್ಕೆ ಇಳಿಯಲು ಮೊದಲು ಮಾಡಿದನು. ಮಹರ್ಷಿ ಮರದ ಪಶ್ಚಿಮದ ಕಟ್ಟೆಯ ಮೇಲೆ ಮಲಗಿದರು. ಸೂರ್ಯ ಇಳಿಯುವುದನ್ನು ನೋಡುತ್ತಾ ಹರ್ಷಚಿತ್ತರಾಗಿ ಧ್ಯಾನದಲ್ಲಿದ್ದರು.

ಗಂಗೆಯ ಉತ್ತರತೀರದ ಆಶ್ರಮವಾಸಿಗಳು ಕೆಲವರು ಹೊಳೆ ದಾಟಿ ಬಂದು ಮಹರ್ಷಿಯ ಸಾನ್ನಿಧ್ಯವನ್ನು ಸೇರಿದರು.

ಆಗಿನ ದಿವಸದಲ್ಲಿ ವಿದ್ಯಾ ಅವಿದ್ಯಾ, ಸಂಸಾರ ವೈರಾಗ್ಯ, ಇಹ ಪರ, ಇವುಗಳಲ್ಲಿ ಒಂದನ್ನು ಮು-ಖ್ಯ ಮಾಡಿ ಇನ್ನೊಂದನ್ನು ಕಡಮೆ ಮಾಡಿ ತುಂಬ ವಾದ ನಡೆಯುತ್ತಿತ್ತು. ವಾದ ಮಾಡುವವರು ಯಾರೂ ಹೆಡ್ಡರಲ್ಲ. ಹೀಗಾಗಿ ವಾದಕ್ಕೆ ಕೊನೆಯೇ ಇಲ್ಲ.

ಬಂದವರಲ್ಲಿ ಒಬ್ಬನು, “ಮನುಷ್ಯನಿಗೆ ಪರಕ್ಕೆ ಸಾಧಕವಾದ ಪರಾ ವಿದ್ಯೆ ಮುಖ್ಯವೇ, ಇಹ ಜೀ-ವನಕ್ಕೆ ಸಾಧಕವಾದ ಅಪರಾ ವಿದ್ಯೆ ಮುಖ್ಯವೆ, ಸಂಸಾರಿಗೆ ಮೋಕ್ಷವುಂಟೆ? ಇಲ್ಲ ಮೋಕ್ಷಾರ್ಥಿ ವಿ-ರಾಗಿಯೇ ಆಗಬೇಕೇ?” ಎಂದು ಪ್ರಶ್ನೆ ಮಾಡಿದನು.

ಮಹರ್ಷಿ ಹಲವು ನಿಮಿಷ ತಡೆದು ಹೇಳಿದರು: “ಜ್ಞಾನ ಅಜ್ಞಾನ ಎಂದು ಲೋಕವನ್ನು ನಿ-ರಾಕರಿಸಿದವನು ಕತ್ತಲ ಆಳದಲ್ಲಿ ಮುಳುಗುತ್ತಾನೆ. ಇಹ ಇಹ ಎಂದು ಜ್ಞಾನವನ್ನು ನಿರಾಕರಿಸಿದ-ವನು ಅವನ ಜೊತೆಯಲ್ಲಿ ಕತ್ತಲಲ್ಲಿ ಇಳಿಯುತ್ತಾನೆ. ಇಹದ ವ್ಯಾಪಾರಕ್ಕೆ ವಿದ್ಯೆಯನ್ನು ಶ್ರದ್ಧೆಯಿಂದ ಗಳಿಸಿ ಇಹವನ್ನು ನಡೆಸಬೇಕು. ಪರದ ಜೀವನಕ್ಕೆ ಸಾಧಕವಾದ ವಿದ್ಯೆಯಲ್ಲಿ ಸಿದ್ಧಿಪಡೆದು ಪರವ-ನ್ನು ಸಾಧಿಸಬೇಕು. ಸಂಸಾರದಲ್ಲಿ ಇದ್ದುಕೊಂಡೇ ವೈರಾಗ್ಯವನ್ನು ಅನುಷ್ಠಾನ ಮಾಡಬೇಕು. ಆಗ ಸಂಸಾರ ಬಂಧನವಾಗುವುದಿಲ್ಲ, ಮೋಕ್ಷ ಕಷ್ಟವಾಗುವುದಿಲ್ಲ. ಪರಸ್ಪರ ಪೂರಕವಾಗಿ ಇರಬೇಕಾದ ತತ್ತ್ವಗಳನ್ನು ಪರಸ್ಪರ ವಿರೋಧಿಗಳನ್ನಾಗಿ ಮಾಡಿ ನಾವು ತೊಳಲುತ್ತೇವೆ. ಇದು ತಪ್ಪು. ನಮಗೆ ಧರ್ಮವನ್ನು ಕಲಿಸಿದ ಗುರುಗಳು ಮಹಾತ್ಮರಾಗಿದ್ದರು. ಅವರು ಸಮಾಧಾನವನ್ನು ಮುಟ್ಟಿದ್ದರು. ಅವರು ನಮಗೆ ಹೀಗೆಂದು ಉಪದೇಶ ಮಾಡಿದರು.”

ಮಹರ್ಷಿಯ ಧ್ವನಿ ತೀರ ಮೆದುವಾಗಿತ್ತು: ಶಕ್ತಿ ಬಹಳ ಕುಗ್ಗಿತ್ತು ಎಂದು ಕಾಣುತ್ತದೆ. ಆಮೇಲೆ ಯಾರೋ ಒಬ್ಬರಿಬ್ಬರು ಆಡಿದ ಮಾತಿಗೆ ಅವರು ಗಮನ ಕೊಡಲಿಲ್ಲ.

ಸೂರ್ಯನು ವರ್ಣಗಳ ನಡುವೆ ವೈಭವವನ್ನು ಹೊದೆದು ದಿಗಂತದ ಅಂಚಿನಲ್ಲಿ ಇಳಿಯಲು ತೊಡಗಿದನು. ಸಂಜೆಯ ಗಾಳಿ ಮೆಲ್ಲನೆ ಬೀಸುತ್ತಿತ್ತು. ಆಶ್ರಮದ ಮರಗಳ ಮೇಲೆ ಪಕ್ಷಿಸಂಕುಲ ಉತ್ಸಾಹದ ಕಲರವವನ್ನು ಬೆಳಸುತ್ತಿದ್ದುವು. ಅರ್ಧ ಹಿಂದಿನ ಮಾತಿನ ನೆನಪಿನಲ್ಲಿ ಅರ್ಧ ತನಗೆ ತಾನೇ ಹೇಳಿಕೊಳ್ಳುವಂತೆ ಮಹರ್ಷಿ, "ಸೂರ್ಯನ ಹಿರಣ್ಮಯ ಪಾತ್ರ ಭೂಮಿಯನ್ನು ತೆರೆದ ಹೊತ್ತಿನಲ್ಲಿ ಆಕಾಶವನ್ನು ಮರೆಸುತ್ತದೆ. ಮನೆಯಲ್ಲಿರುವವನಿಗೆ ಅದರ ಹೊಸಲು ಮನೆಯನ್ನು ಕೊಡುತ್ತದೆ, ಬಯಲನ್ನು ತಪ್ಪಿಸುತ್ತದೆ. ಬಾಳ ಹೊಸಲು ದಾಟುವವನಿಗೆ ಲಾಭಹೊರತು ನಷ್ಟ ಇಲ್ಲ. ಇಹ ಜೀವನ ಹಗಲು: ಅದರಲ್ಲಿ ಅರ್ಧ ಸತ್ಯವನ್ನು ಕಾಣುತ್ತೇವೆ. ಸಂಜೆಯ ಹೊಸಲು ದಾಟಿ ನಭದ ಐಶ್ವರ್ಯವನ್ನು ಪಡೆಯುತ್ತೇವೆ," ಎಂದು, "ಸೂರ್ಯದೇವ, ನಿನ್ನ ಬೆಳಕ ತೆರೆಯನ್ನು ಎತ್ತು, ನಾನು ಸತ್ಯವನ್ನು ಕಾಣಲು ಬಯಸುತ್ತೇನೆ, ಅದು ನನಗೆ ಕಾಣಲಿ," ಎಂದು ನುಡಿದು ಕೈ ಮುಗಿದರು.

ಹತ್ತು ನಿಮಿಷ ಕಳೆಯಿತು. ಮಹರ್ಷಿ ಸುಸ್ಪಷ್ಟವಾದ ಶುದ್ಧ ಸ್ವರದಲ್ಲಿ, "ಪೂಷನ್ ಏಕರ್ಷೇ ಯಮ ಸೂರ್ಯ ಪ್ರಾಜಾಪತ್ಯವ್ಯೂಹ ರಶ್ಮೀನ್. ಸಮೂಹ ತೇಜಃ. ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ," ಎಂದು ಹೇಳಿದರು.

ಕುಮಾರ ಕುಲಪತಿ ಬಂದು ಮಹರ್ಷಿಯ ತಲೆಯ ಬಳಿ ಎದುರಿಗೆ ಕುಳಿತನು. ತಡೆಯಲಾರದೆ ಅವನ ಕಣ್ಣಿಂದ ಎರಡು ಹನಿ ಕಣ್ಣೀರು ಉದುರಿತು. ಮಹರ್ಷಿ ಇದನ್ನು ನೋಡಿದರು. ಮಗನ ಕೈಯಲ್ಲಿ ಕೈಯನ್ನಿಟ್ಟರು. ಕ್ಷಣಬಿಟ್ಟು, "ಯಃ ಅಸೌ, ಅಸೌ ಪುರುಷಃ, ಸಃ ಅಹಂ ಅಸ್ಮಿ," ಎಂದರು. ಸನ್ನೆಯಿಂದ ತನ್ನನ್ನು ಕಟ್ಟೆಯ ಪೂರ್ವದ ಮಂಚಕ್ಕೆ ಕರೆದೊಯ್ಯಬೇಡಿದರು.

ಕುಲಪತಿಯ ಜೊತೆಯ ನಾಲ್ಕು ಜನರೂ ಮಹರ್ಷಿಯನ್ನು ಮೆದುವಾಗಿ ಎತ್ತಿಕೊಂಡು ಮರದ ಪೂರ್ವಕ್ಕೆ ಕರೆದೊಯ್ದರು; ಋಷಿ ಪೂರ್ವಾಭಿಮುಖರಾಗಿ ಬಲತೋಳಮೇಲೆ ಮಲಗಿದರು.

ಎಲ್ಲರ ಕಣ್ಣಲ್ಲೂ ನೀರು. ಮಹರ್ಷಿ ಇದನ್ನು ನೋಡಿದರು. ಸಮಾಧಾನ ಹೇಳಿದರು. "ವಾಯುಃ ಅನಿಲಂ ಅಮೃತಂ ಅಥೇದಂ ಭಸ್ಮಾಂತಕಂ ಶರೀರಂ," ಎಂದರು. "ಓಂ" ಎಂದು ಘೋಷಿಸಿದರು. "ಕ್ರತುವನ್ನು ಸ್ಮರಿಸು, ಕೃತವನ್ನು ಸ್ಮರಿಸು. ಧ್ಯೇಯವನ್ನು ಸ್ಮರಿಸು, ಸಾಧಿಸಿದ್ದನ್ನು ಸ್ಮರಿಸು," ಎಂದು ತನಗೆ ತಾನೇ ಮರಳಿ ಮರಳಿ ಹೇಳಿಕೊಂಡರು.

ಕುಮಾರ ಕುಲಪತಿ ಹತ್ತಿರಕ್ಕೆ ಬಗ್ಗಿ, "ಕ್ರತು ಯಾವುದು?" ಎಂದನು. ಮಹರ್ಷಿ ಮೆಲ್ಲನೆ, "ನೆಲವೆಲ್ಲ ಇಂಥ ನಂದನವಾಗಬೇಕು, ಇದರಂತೆ ಒಳಬಾಳು ಸುಂದರ ಸಫಲ ಆಗಬೇಕು," ಎಂದರು.

ಕ್ಷಣಬಿಟ್ಟು ಮಹರ್ಷಿ ಕುಮಾರನನ್ನು ಕರೆದು, "ನನ್ನ ಹೋಮಾಗ್ನಿಯನ್ನು ಇಲ್ಲಿ ತಂದಿರಿಸು," ಎಂದರು.

ಕುಲಪತಿ ಅಳುತ್ತ ಹೋಗಿ ಅದನ್ನು ತಂದು ತಂದೆಯ ಎದುರಿಗೆ ಇರಿಸಿದನು.

ಸೂರ್ಯನು ತೀರ ಮುಳುಗಿದನು. ಪೂರ್ವ ದಿಗಂತದಲ್ಲಿ ಮಂಕಾಗಿದ್ದ ಪೂರ್ಣಚಂದ್ರನ ಬಿಂಬ ಕಳೆಯೇರಿ ಕಂಡಿತು. ಅಲ್ಲಿ ಮರೆಯಾದ ಕೆಂಡದ ಗುಂಡು ಇಲ್ಲಿ ಬೆಣ್ಣೆಯ ಉಂಡೆ ಆಯಿತು ಎಂಬಂತಿತ್ತು.

ಮಹರ್ಷಿ ಅಗ್ನಿಗೆ ಕೈ ಮುಗಿದರು. ವೇದದ ಋಷಿಗಳು ಹಾಡಿದ್ದ ಋಕ್ಕನ್ನು ಹಾಡಿದರು:

"ಅಗ್ನೇ ನಯ ಸುಪಥಾ ರಾಯೇ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್ ಯುಯೋಧ್ಯಸ್ಮಜ್ಜುಹುರಾಣವೇನೋ ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ."

ಋಕ್ಕನ್ನು ಹಾಡಿ ಕಣ್ಣನ್ನು ಮುಚ್ಚಿದ ಮಹರ್ಷಿ ಬಹು ಹೊತ್ತು ಅದನ್ನು ತೆರೆಯಲಿಲ್ಲ. ಕುಲಪತಿ ಹತ್ತಿರ ಬಂದು ತಂದೆಯ ಕಾಲನ್ನು ಮುಟ್ಟಿದನು.

ಮಹರ್ಷಿ ಕಣ್ಣು ತೆರೆದು ನೋಡಿದರು. ಮಗನನ್ನು ನೋಡಿದರು. ಕಳೆತುಂಬಿ ಬೆಳಗುತ್ತಿದ್ದ ಚಂದ್ರನನ್ನು ನೋಡಿದರು. ತೊಳಗುವ ನಕ್ಷತ್ರಗಳ ಆಕಾಶವನ್ನು ನೋಡಿದರು. "ಯತ್ತೇ ರೂಪಂ ಕಲ್ಯಾಣತಮಂ ತತ್ತೇಪಶ್ಯಾಮಿ," ಎಂದು ಹಲವುಸಲ ಹೇಳಿಕೊಂಡು ಕಣ್ಮುಚ್ಚಿ ಕೊಂಡರು.

ಮರಳಿ ಆ ಕಣ್ಣು ತೆರೆಯಲಿಲ್ಲ. ಮಧ್ಯರಾತ್ರಿಯಲ್ಲಿ ಶ್ವಾಸ ನಿಂತಿತು. ಬೆಳಗಿನ ಮುನ್ನ ದೇಹ ತಣ್ಣಗಾಗಿತ್ತು.

ಸಂಕಲ್ಪದಂತೆ ಒಂದು ಹೊತ್ತಿನಲ್ಲಿ ತನ್ನ ದೇಹವನ್ನು ನೀಗಿದ ಈ ಮಹಾಪುರುಷ ಮಹಾಜ್ಞಾನಿ

ಎಂದು ಎಲ್ಲರೂ ಮನಗಂಡರು. ಇಂಥ ಮಹರ್ಷಿಯದಾಗಿ ಒಂದು ಉಪನಿಷತ್ತು ಇಲ್ಲದೆ ಹೋಯಿತಲ್ಲಾ ಎಂದು ಬಹುಜನ ಚಿಂತೆ ಮಾಡಿದರು.

ಮಹರ್ಷಿಯ ಜೀವನ ಕ್ರಮವನ್ನು ಒಪ್ಪದವರು, "ಇವನಿಂದ ಗೋರಕ್ಷಣ ವನಪಾಲನ ಬೇಕಾದರೆ ಕಲಿಯಬಹುದಾಗಿತ್ತು, ಇವನು ಉಪನಿಷತ್ತೇನನ್ನು ಹೇಳಿದ್ದಾನು?" ಎಂದರು.

ಕೊನೆಯ ದಿನ ಆತನ ಬಳಿಗೆ ಬಂದಿದ್ದವರಲ್ಲಿ ಒಬ್ಬ ಚತುರ, "ಮಹರ್ಷಿ ಕೊನೆಯ ದಿನ ಆಡಿದ ಮಾತನ್ನೆಲ್ಲಾ ಸೇರಿಸಿ ಆ ವಾಕ್ಯ ಸಂಗ್ರಹವನ್ನು ಅವರ ಉಪನಿಷತ್ತು ಎಂದು ಪ್ರಚಾರ ಮಾಡೋಣ," ಎಂದನು.

"ಹೀಗೇನಾದರೂ ಮಾಡಲಾದೀತೋ ಎಂಬ ನಿರೀಕ್ಷೆಯಲ್ಲಿಯೇ ನಾನು ಮಹರ್ಷಿಗಳನ್ನು ಕೊನೆಯ ದಿನ ನಾವು ಯಾರೇ ಆಗಲಿ ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕೆಂದು ಬೇಡಿದ್ದೆ," ಎಂದು ಕುಲಪತಿ ಹೇಳಿದನು.

ತಮ್ಮದೊಂದು ಉಪನಿಷತ್ತು ಬೇಡವೇ ಎಂದು ಎಂದೋ ಯಾರೋ ಕೇಳಿದ್ದಕ್ಕೆ ಮಹರ್ಷಿ ತನ್ನ ಕೈಯಿಂದ ಬೆಳೆದ ನಂದನ ವನವನ್ನು ತೋರಿಸಿ, "ಇದೇ ನನ್ನ ಉಪನಿಷತ್ತು," ಎಂದಿದ್ದರಂತೆ.

ಬೇರೆ ಒಂದು ಸಲ, "ನನ್ನ ಉಪನಿಷತ್ತು ಬೇರೆ ಏತಕ್ಕೆ? ಇಲ್ಲವೇ ಈಶೋಪನಿಷತ್ತು?" ಎಂದಿದ್ದರಂತೆ.

ಬೇರೆ ಒಂದು ಸಾರಿ, "ಮಾನವನ ಉಪನಿಷತ್ತು ಮಾತಿನಲ್ಲಿದೆ, ಈಶನ ಉಪನಿಷತ್ತು ಲೋಕದಲ್ಲಿದೆ," ಎಂದಿದ್ದರಂತೆ.

ಈ ಎಲ್ಲ ಮಾತೂ ಆಮೇಲೆ ತಿಳಿಯಿತು. ಪ್ರಾಜ್ಞರೆಲ್ಲ ಈ ಮಹರ್ಷಿ ಅಪ್ರತಿಮ ಕರ್ಮಯೋಗಿ ಎಂದು ಮನಗಂಡರು. ಶ್ರದ್ಧಾವಂತರು ಸೇರಿ ಮಹರ್ಷಿಯ ತಮ್ಮನ ಮಗನ ಬಳಿಗೆ ಬಂದರು; ತಾವು ಕೇಳಿದ್ದ ವಾಕ್ಯಗಳನ್ನೆಲ್ಲಾ ಅವನಿಗೆ ಒಪ್ಪಿಸಿದರು. ಕುಲಪತಿಯೂ ಬಲ್ಲ ಇತರರೂ ಸೇರಿ ಆ ವಾಕ್ಯಗಳನ್ನು ಜೋಡಿಸಿ ಈಶೋಪನಿಷತ್ತಿನ ಶ್ಲೋಕಗಳನ್ನು ರಚಿಸಿದರು.

ವಾಮದೇವ ದ್ವೈಪಾಯನ ಆರುಣೇಯ ಮಹರ್ಷಿ ತನ್ನ ಜೀವನ ಕ್ರಮದಿಂದ ಹಚ್ಚಿದ ಜ್ಞಾನ-ದೀಪದ ಕೆಲವು ಭಾಗ ಆ ವಾಕ್ಯಗಳಲ್ಲಿ ಮೈತಳೆದು ಮಿನುಗಿ ಈಗಲೂ ಮಾನವ ಜೀವನವನ್ನು ಬೆಳ-ಗುತ್ತಿವೆ.